Swabhimani Sahakari
Pages : 36 / 12₹
Volume - 17
Issue - 12
December - 2020

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ




ಚಿಕ್ಕಬಳ್ಳಾಪುರದಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ-2020

**ಮಾನ್ಯ ಸಹಕಾರ ಸಚಿವ ಶ್ರೀ ಎಸ್.ಟಿ. ಸೋಮಶೇಖರ್ ಅವರಿಂದ ಉದ್ಘಾಟನೆ**



ಉತ್ತಮ ಸಹಕಾರಿ ಮತ್ತು ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು



ಡಿಸೆಂಬರ್ 3
ಕನಕದಾಸರ ಜಯಂತಿ



ಡಿಸೆಂಬರ್ 25
ಕ್ರಿಸ್‌ಮಸ್ ಸಂಭ್ರಮ

ಜನವರಿ 1
ಸೌಹಾರ್ದ ಸಹಕಾರಿ ದಿನಾಚರಣೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5130

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1346



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ನವೆಂಬರ್ 2020 ರಲ್ಲಿ ದಿನಾಂಕ 14 ರಿಂದ 20ರವರೆಗೆ ದೇಶದಾದ್ಯಂತ ರಾಜ್ಯದಾದ್ಯಂತ 7 ದಿನಗಳ ಕಾಲ ಸಪ್ತಾಹದ ಆಚರಣೆ ನಡೆದಿದೆ. ಒಂದೊಂದು ದಿನವೂ ಒಂದೊಂದು ವಿಷಯದ ಬಗ್ಗೆ ಹಾಗೂ ಸಹಕಾರ ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಗುಣಾತ್ಮಕ ಬೆಳವಣಿಗೆಗಾಗಿ ಚಿಂತನೆ ಮಂಥನಗಳು ನಡೆದಿವೆ. ಈ ಆಚರಣೆ ಹಾಗೂ ಬೆಳವಣಿಗೆಗಳು ಸ್ವಾಗತಾರ್ಹ.

# 67ನೇ ಸಹಕಾರ ಸಪ್ತಾಹ ಆಚರಣೆ ಅರ್ಥಪೂರ್ಣ : ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ಸಹಕರಿಸಿದವರಿಗೆ ಕೃತಜ್ಞತೆಗಳು

**ಆತ್ಮೀಯ ಸಹಕಾರಿ ಬಂಧುಗಳೆ,**

ಎಲ್ಲರಿಗೂ ಹೃದಯಪೂರ್ವಕ ನಮಸ್ಕಾರಗಳು. ವಿಶೇಷವಾಗಿ ಕ್ರಿಶ್ಚಿಯನ್ ಸಹೋದರರಿಗೆ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು. 2020ರ ಕೊನೆಯ ತಿಂಗಳು ಈ ಡಿಸೆಂಬರ್ ಮಾಸ. ಪ್ರಸಕ್ತ ಸಾಲಿನುದ್ದಕ್ಕೂ ಕೋರೋನಾ ಮಹಾಮಾರಿಯ ಭಯಾನಕ ವಾತಾವರಣದಿಂದ ಅನುಭವಿಸಿರುವ ಸಾವು ನೋವುಗಳಿಂದ ಕಷ್ಟ ಕಾರ್ಪಣ್ಯಗಳಿಂದ ಬೆಂದು ಬೆಂಡಾಗಿರುವುದಕ್ಕೆ 2020 ಡಿಸೆಂಬರ್ ಮಾಹೆಗೆ ಅಂತ್ಯ ಹಾಡೋಣ. ಬರುವ ಹೊಸ ವರ್ಷ 2021 ಎಲ್ಲರಿಗೂ ಎಲ್ಲ ಕ್ಷೇತ್ರದಲ್ಲೂ ಶುಭವಾಗಲಿ ಒಳ್ಳೆಯದಾಗಲಿ ಮತ್ತೆ ಹೊಸ ಉತ್ಸಾಹದಿಂದ ಕಾರ್ಯನಿರ್ವಹಿಸೋಣ

ನವೆಂಬರ್ 2020 ರಲ್ಲಿ ದಿನಾಂಕ 14 ರಿಂದ 20ರವರೆಗೆ ದೇಶದಾದ್ಯಂತ ರಾಜ್ಯದಾದ್ಯಂತ 7 ದಿನಗಳ ಕಾಲ ಸಪ್ತಾಹದ ಆಚರಣೆ ನಡೆದಿದೆ. ಒಂದೊಂದು ದಿನವೂ ಒಂದೊಂದು ವಿಷಯದ ಬಗ್ಗೆ ಹಾಗೂ ಸಹಕಾರ ಕ್ಷೇತ್ರದ ಸಮಗ್ರ ಅಭಿವೃದ್ಧಿ ಹಾಗೂ ಗುಣಾತ್ಮಕ ಬೆಳವಣಿಗೆಗಾಗಿ ಚಿಂತನೆ ಮಂಥನಗಳು ನಡೆದಿವೆ. ಈ ಆಚರಣೆ ಹಾಗೂ ಬೆಳವಣಿಗೆಗಳು ಸ್ವಾಗತಾರ್ಹ.

ದಿನಾಂಕ 17 ನವೆಂಬರ್ 2020 ರಂದು ಚಿಕ್ಕಬಳ್ಳಾಪುರದಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸ್ಥಳೀಯ ಎಲ್ಲ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವ ದಿನಾಚರಣೆಯನ್ನು ಅತ್ಯಂತ ವೈಭಯುತವಾಗಿ ಅರ್ಥಪೂಣವಾಗಿ ಆಚರಿಸಿರುವುದು ಸಹಕಾರ ಕ್ಷೇತ್ರದ ಗುಣಾತ್ಮಕ ಅಭಿವೃದ್ಧಿಗೆ ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ನನ್ನ ಭಾವನೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು ವಿಶೇಷವಾಗಿ ಸಹಕಾರ ಸಚಿವರು, ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಸಚಿವರು, ನಗರಾಭಿವೃದ್ಧಿ ಸಚಿವರು, ಸಹಕಾರಿ ನಿಬಂಧಕರು ಸಹಕಾರಿಗಳು ರಾಜ್ಯದಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಮನವರಿಕೆಯಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಇದೊಂದು ವಿಭಿನ್ನವಾಗಿ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕ್ಷೇತ್ರ ಇದಾಗಿದೆ ಈ ಕ್ಷೇತ್ರಕ್ಕೆ ಸರಕಾರದ ಪ್ರೋತ್ಸಾಹ ಅಗತ್ಯ ಜೊತೆಗೆ ಸಾರ್ವಜನಿಕರಲ್ಲಿ ಈ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆ ಬೆಳೆಸಿಕೊಳ್ಳಲು ಸಹಕಾರಿಯಾಗಿದೆ ಎಂದು ಸಂಯುಕ್ತ ಸಹಕಾರಿಯ ಅಭಿಪ್ರಾಯವಾಗಿದೆ.

ಸೌಹಾರ್ದ ಸಹಕಾರಿಗಳು ರಾಜ್ಯದ ವಿಶೇಷವಾಗಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಸಮಗ್ರ ಸಹಕಾರ ಕ್ಷೇತ್ರ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕಾರ್ಯೋನ್ಮುಖರಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ಸಹಕಾರ ಸಪ್ತಾಹದ ಆಚರಣೆಗೆ ಸಹಕರಿಸಿದ ಎಲ್ಲ ಸಹಕಾರಿ ಸಂಸ್ಥೆಗಳಿಗೆ ಹಾಗೂ ಸಹಕಾರಿಗಳಿಗೆ ಹಾಗೂ ಸಹಕಾರ ಇಲಾಖಾಧಿಕಾರಿಗಳಿಗೆ ಕೃತಜ್ಞತೆಗಳು.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ :
080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5-21
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................ 22-30
ಲೇಖನಗಳು
ಸಹಕಾರ ಸಂಘಗಳ ನಡುವೆ ಸಹಕಾರ ಏಕೆ? ಹೇಗೆ? ........................................ 31-33
ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ-8) .................................. 34-36

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ ಆಫ್‌ಲೈನ ಹಾಗೂ ಆನ್‌ಲೈನನಲ್ಲಿ ನಡೆಸುವುದಕ್ಕೆ ಸರಕಾರದ ಅವಕಾಶ :

## ಆನ್‌ಲೈನ್‌ನಲ್ಲಿ ವಾರ್ಷಿಕ ಸಾಮಾನ್ಯ ಸಭೆ ನಡೆಸುವುದಕ್ಕೆ ಸಂಯುಕ್ತ ಸಹಕಾರಿಯ ತಾಂತ್ರಿಕ ನೆರವು

ರಾಜ್ಯದ ಎಲ್ಲ ಸಹಕಾರ ಸಂಘಗಳು ಸೌಹಾರ್ದ ಸಹಕಾರಿ ಸಂಸ್ಥೆಗಳು ಸೆಪ್ಟಂಬರ 25 ರ ಒಳಗಾಗಿ ನಡೆಸಬೇಕಿದ್ದ ಸಾಮಾನ್ಯ ಸಭೆಗಳನ್ನು ಕೋರೋನಾ ಮಹಾಮಾರಿಯ ತೀವ್ರತೆಯ ಹಿನ್ನೆಲೆಯಿಂದಾಗಿ ಸಾಮಾನ್ಯ ಸಭೆಗಳನ್ನು ನಡೆಸುವುದು ಕಷ್ಟ ಸಾಧ್ಯ ಎಂಬುದನ್ನು ಮನಗಂಡ ರಾಜ್ಯ ಸರಕಾರ ಡಿಸೆಂಬರ 25 ರ ಒಳಗಾಗಿ ತಮ್ಮ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲು ಅನುಮತಿ ನೀಡಿದೆ. ಕೋರೋನಾ ಮಹಾಮಾರಿಯ ಹರಡುವಿಕೆಯನ್ನು ತಡೆಗಟ್ಟುವ ಉದ್ದೇಶದಿಂದ ಈ ವಾರ್ಷಿಕ ಸಾಮಾನ್ಯ ಸಭೆಗಳನ್ನು ಆಫ್‌ಲೈನ್‌ನಲ್ಲಿ ನಡೆಸುವುದು ಸಾಧ್ಯವಾಗದಿರುವ ಸೌಹಾರ್ದ ಸಹಕಾರಿಗಳು/ಸಹಕಾರ ಸಂಸ್ಥೆಗಳು ಆನ್‌ಲೈನ್‌ನಲ್ಲಿ ವಿಡಿಯೂ ಕಾನ್ಫರೆನ್ಸ / ವರ್ಚುವಲ್ ಸಭೆಗಳ ಮೂಲಕ ಸಾಮಾನ್ಯ ಸಭೆಗಳನ್ನು ಜರುಗಿಸಲು ಅವಕಾಶವನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಸಹಕಾರ ಸಂಸ್ಥೆಗಳು ತಮ್ಮ ಸಹಕಾರಿಯ ಸಾಮಾನ್ಯ ಸಭೆಯನ್ನು 25ನೇ ಡಿಸೆಂಬರ್ 2020 ರ ಒಳಗಾಗಿ ಜರುಗಿಸಲು ಕಾರ್ಯೋನ್ಮುಖರಾಗುವುದು ಅವಶ್ಯಕ.

ಹಲವಾರು ಸೌಹಾರ್ದ ಸಹಕಾರಿಗಳು ಆನ್‌ಲೈನ ಪ್ಲಾಟ್‌ಫಾರ್ಮ ಒದಗಿಸಿಕೊಡಬೇಕೆಂಬ ವಿನಂತಿಯನ್ನು ಆಧರಿಸಿ ಆನ್‌ಲೈನ್ ವ್ಯವಸ್ಥೆಯ ಮೂಲಕ ತಮ್ಮ ವಾರ್ಷಿಕ ಸಾಮಾನ್ಯ ಸಭೆಗಳನ್ನು ಜರುಗಿಸಲು ಉದ್ದೇಶಿಸಿರುವ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು "ಝೂಮ್ ವಿಡಿಯೋ ವೆಬಿನಾರ ಅಪ್ಲಿಕೇಶನ್" ಆನ್‌ಲೈನ್ ಪ್ಲಾಟ್‌ಫಾರ್ಮ ಒದಗಿಸಿಕೊಡಬೇಕೆಂದು ತೀರ್ಮಾನಿಸಿದೆ. ಈ ಬಗ್ಗೆ ಸೌಹಾರ್ದ ಸಹಕಾರಿಗಳಿಗೆ ವಿವರವಾದ ಸುತ್ತೋಲೆಯನ್ನು ನೀಡಲಾಗಿದೆ. ಸಂಯುಕ್ತ ಸಹಕಾರಿಯ ವೆಬ್‌ಸೈಟ್‌ನಲ್ಲೂ ಮಾಹಿತಿ ಪಡೆದುಕೊಳ್ಳುವುದು.

ಈ ಸೌಲಭ್ಯವನ್ನು ಪಡೆದುಕೊಳ್ಳಲು ಅಪೇಕ್ಷಿಸುವ ಸಹಕಾರಿಗಳು ಕೂಡಲೇ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ ಇದಕ್ಕೆ ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸಿ ಝೂಮ್ ವಿಡಿಯೋ ವೆಬಿನಾರ ಅಪ್ಲಿಕೇಶನ್‌ನ್ನು ಒಂದು ದಿನದ ಮಟ್ಟಿಗೆ ಪಡೆದುಕೊಂಡು ಸಂಬಂಧಿಸಿದ ಅಗತ್ಯವಾಗುವ ಮಾಹಿತಿಯನ್ನು ಪಡೆದು ಕಾರ್ಯಪ್ರವೃತ್ತರಾಗುವುದು ಅತಿ ಅವಶ್ಯಕ.

ಸೌಹಾರ್ದ ಸಹಕಾರಿಗಳಿಗೆ ಇದೊಂದು ಹೊಸ ಅನುಭವ. ತಾಂತ್ರಿಕತೆಗೆ ಹೊಂದಿಕೊಳ್ಳುವ ಸದಾವಕಾಶ ಹೆಚ್ಚು ಸದಸ್ಯರು ಸಾಮಾನ್ಯ ಸಭೆಯಲ್ಲಿ ತಮ್ಮ ತಮ್ಮ ಸ್ಥಳಗಳಿಂದಲೇ/ಮನೆಗಳಿಂದಲೇ ಪಾಲ್ಗೊಳ್ಳಲು ಅವಕಾಶ. ಸಾಮಾನ್ಯ ಸಭೆ ವ್ಯವಸ್ಥಿತವಾಗಿ ಶಿಸ್ತು ಬದ್ಧವಾಗಿ ಅರ್ಥಪೂರ್ಣವಾಗಿ ನಡೆಯಲು ಹಾಗೂ ಗುಣಮಟ್ಟದ ಚರ್ಚೆಗಳಿಗೆ ಅವಕಾಶ ನೀಡಿದಂತಾಗುತ್ತದೆ. ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಸೌಹಾರ್ದ ಸಹಕಾರಿಗಳು ತಾಂತ್ರಿಕತೆ ಹಾಗೂ ಆಧುನಿಕತೆಯನ್ನು ಬಳಸುವುದರಲ್ಲಿ ಮುಂದು ಮತ್ತು ಉತ್ತಮವಾಗಿ ಕಾರ್ಯನಿರ್ವಹಿಸುವ ಸಹಕಾರಿ ಸಂಸ್ಥೆಗಳು ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಕಾರ್ಯನಿರ್ವಹಿಸುವಿರೆಂದು ಸಂಯುಕ್ತ ಸಹಕಾರಿ ಅಪೇಕ್ಷಿಸುತ್ತದೆ.

## "ಹೊಸ ಚಿಗುರು ಮತ್ತು ಹಳೆಬೇರಿನಿಂದ ಮರದ ಸೊಬಗು"

ಒಗ್ಗೂಡಿದ ಅಥವಾ ಸಂಘಟಿತ ಪ್ರಯತ್ನದ ಮೂಲಕವೇ ಶ್ರೇಯಸ್ಸು ಸಾಧ್ಯವೆಂಬುದರಲ್ಲಿ ಎರಡು ಮಾತಿಲ್ಲ. ದೇಹಶಕ್ತಿ ಮತ್ತು ಬುದ್ಧಿಶಕ್ತಿಗಳೆರಡರ ಕ್ರೋಡೀಕರಣದಿಂದ ಜನಜೀವನ ಯಶಸ್ಸಿನತ್ತ ಸಾಗುತ್ತದೆ. ಎಲ್ಲ ಉತ್ಕೃಷ್ಟ ಸಾಧನೆಗಳೂ ಬಹು ಮೆದುಳುಗಳ ಕೊಡುಗೆ (All Outstanding and miraculous achievements are the contribution of many minds) ಎಂಬ ಜನಪ್ರಿಯ ಮಾತಿದೆ.

ಹೇಗೆ ಯಾವುದೇ ಒಂದು ಮನೆತನದ ಖ್ಯಾತಿಗೆ ಆ ಮನೆಯ ಹಿರಿ ಕಿರಿಯರ ಪರಿಶ್ರಮಕಾರಣವಾಗಿರುತ್ತದೆ. ಹಾಗೆಯೇ ಸಂಸ್ಥೆಯ ಬೆಳವಣಿಗೆಗೆ ಮಾಲೀಕ ನೌಕರರ ಪರಿಶ್ರಮ ಕಾರಣವಾಗುತ್ತದೆ. ಹೊಸತು ಹಳೆತರ ಜೊಡಣೆಯೇ ಉತ್ಕೃಷ್ಟತೆಗೆ ದಾರಿ ಎಂಬ ಅಂಶದ ಬಗ್ಗೆ ಆಧ್ಯಾತ್ಮ ಕವಿ ಡಿ.ವಿ.ಜಿ ಯವರು ಕೆಳಗಿನ ಪದ್ಯವನ್ನು ನೀಡುವ ಮೂಲಕ ಸಾಂಸ್ಥಿಕ ಬೆಳವಣಿಗೆಗೆ ಹಳೆಯ ತತ್ವಗಳ ಹಾಗೂ ನೂತನ ವಿಜ್ಞಾನದ ಅಂಶಗಳ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ ಪದ್ಯ ಹೀಗಿದೆ.

ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು
ಹೊಸಯುಕ್ತಿ ಹಳೆ ತತ್ವ ದೊಡಗೂಡೆ ಧರ್ಮ
ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸಿ
ಜನವು ಜನಜೀವನಕೆ ॥ ಮಂಕುತಿಮ್ಮ ॥

ಶ್ರೇಣಿ 56



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ವೇದಗಳು ಜ್ಞಾನದ ರಾಶಿಗಳು, ಉಪನಿಷತ್‌ಗಳು ಸತ್ಯ ಧರ್ಮಗಳ ಆಧಾರ ಸ್ತಂಭಗಳು ಜಗದ ಸೃಷ್ಟಿಯ ಪ್ರಾರಂಭದಲ್ಲಿ ಮನುಕುಲಕ್ಕೆ ಜ್ಞಾನದ ಸುಳುವನ್ನು ನೀಡಿದ ಮೂಲ ಗ್ರಂಥಗಳೇ ವೇದ ಮತ್ತು ಉಪನಿಷತಗಳು.

ಯಾವುದೇ ಸಾಂಸ್ಥಿಕ, ಧರ್ಮದ ಅಥವಾ ಜನಜೀವನದ ಉತ್ಕೃಷ್ಟತೆಗೆ ಹಳದು ಹೊಸತರ ಸಮ್ಮಿಳಿತತೆಯೇ ಬಹು ಮುಖ್ಯವೆಂದು ಒಪ್ಪಬೇಕಾದ ಅಂಶ. ಬುದ್ಧಿಯ ಬೆಳವಣಿಗೆ ಮತ್ತು ಅದರ ಸದ್ಬಳಕೆಯ ಬಗ್ಗೆ ಹಿರಿಯರ ಬುದ್ಧಿವಾದ ಎಷ್ಟು ಅವಶ್ಯಕವೋ ಅಂತೆಯೇ ಶಕ್ತಿಯುತ ಹಾಗೂ ದೃಢ ಚಿಂತನೆಯ ಮೂಲಕ ಕಾರ್ಯೋನ್ಮುಖರಾಗಲು ಯುವಶಕ್ತಿಯ ಬಳಕೆಯೂ ಅವಶ್ಯಕವೆನಿಸಿದೆ. ಈ ಅಂಶದ ಅನುಷ್ಠಾನವೇ ಸರ್ಕಾರಗಳಿಂದ ಅಧಿಕಾರಿಗಳ ಆಯ್ಕೆಯಲ್ಲಿ ಹೊಸರಕ್ತದ ತರುಣರನ್ನು ತುಂಬಲು probationers ಆಯ್ಕೆ ವ್ಯವಸ್ಥೆ ಜಾರಿಗೆ ಬಂದಿದೆ. ಹಿರಿ ಕಿರಿಯರೆಲ್ಲರೂ ವರ್ಗ ಸಂಘರ್ಷ ಮರೆತು ದುಡಿಯೋಣವೆಂಬದೇ ಇದರ ಸಾರಾಂಶ.

## ಜನವರಿ 01 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲು ಸೌಹಾರ್ದ ಸಹಕಾರಿಗಳಿಗೆ ಕರೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜನವರಿ 01, 2001 ರಂದು ಜಾರಿಗೆ ಬಂದ ಹಿನ್ನೆಲೆಯಲ್ಲಿ ಪ್ರತಿ ವರ್ಷ ಜನವರಿ 01ರಂದು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸೌಹಾರ್ದ ಸಹಕಾರಿ ದಿನಾಚರಣೆಯನ್ನಾಗಿ ಆಚರಿಸುತ್ತಾ ಬರಲಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದಿನದ ಜ್ಞಾಪಕಾರ್ಥ ಮತ್ತು ಸೌಹಾರ್ದ ಸಹಕಾರಿಗಳ ಅಸ್ತಿತ್ವಕ್ಕೆ ಕಾರಣವಾದ ದಿನವೆಂದು ಆಚರಿಸಲಾಗುತ್ತಿದೆ. ಸೌಹಾರ್ದ ಸಹಕಾರಿ ದಿನವನ್ನು ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳಲ್ಲಿ ಸಹಕಾರಿ ಸಪ್ತ ವರ್ಣದ ಧ್ವಜಾರೋಹಣ ಮಾಡುವುದರ ಮೂಲಕ ಉತ್ತಮ ರೀತಿಯಲ್ಲಿ ಆಚರಿಸಲು ಕೋರಿದೆ. ಈ ದಿನದಂದು ಸೌಹಾರ್ದ ಸಹಕಾರಿಗಳ ಅಸ್ತಿತ್ವವನ್ನು ಭದ್ರಗೊಳಿಸುವ ನಿಟ್ಟಿನಲ್ಲಿ ಅವಶ್ಯಕವಾದ ಪ್ರಚಾರ ಕಾರ್ಯಗಳನ್ನು ಹಮ್ಮಿಕೊಳ್ಳುವುದು ಅವಶ್ಯಕವೆನಿಸುತ್ತದೆ.

ಸದರಿ ದಿನದಂದು ಸಭೆ, ಸಮಾರಂಭಗಳನ್ನು ಏರ್ಪಡಿಸಿ, ಹಿರಿಯ ಸಹಕಾರಿ ಗಣ್ಯರನ್ನು ಗೌರವಿಸುವುದು, ಸಹಕಾರಿಯ ವ್ಯಾಪ್ತಿಯ ಶಾಲಾ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುವುದು, ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪರಿಣಿತರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸಗಳನ್ನು ಹಾಗೂ ಚರ್ಚಾಗೋಷ್ಠಿಗಳನ್ನು ಏರ್ಪಡಿಸುವುದು, ವಿವಿಧ ಕ್ರೀಡೆಗಳನ್ನು ಏರ್ಪಡಿಸುವುದು, ಸಹಕಾರ ಕುರಿತಾದ ಜಾಗೃತಿಯನ್ನು ಮೂಡಿಸುವ ಜಾಥಾ ನಡೆಸುವುದು, ಪರಿಸರ ಜಾಗೃತಿ ಮೂಡಿಸುವುದು, ರಕ್ತದಾನ ಶಿಬಿರಗಳನ್ನು ಏರ್ಪಡಿಸುವುದು, ವ್ಯಾಪ್ತಿಯ ಆಸ್ಪತ್ರೆಗಳಲ್ಲಿನ ರೋಗಿಗಳ ಆರೋಗ್ಯ ಸುಧಾರಣೆಗೆ ಹಣ್ಣು ಹಂಪಲುಗಳನ್ನು ವಿತರಿಸುವುದು, ಠೇವಣಿ ಸಂಗ್ರಹ ಯೋಜನೆ, ಸಾಲ ವಸೂಲಾತಿ ಕ್ರಮಗಳು, ಸೌಹಾರ್ದ ಸಹಕಾರಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುವಂತಹ ಸಭೆ ಸಮಾರಂಭಗಳನ್ನು ಏರ್ಪಡಿಸುವುದು ಸೇರಿದಂತೆ ಇತ್ಯಾದಿ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಹಾಗೂ ವಿಶ್ವಾಸಾರ್ಹತೆಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮವಿಡಲು ತಿಳಿಸಿದೆ. ಸೌಹಾರ್ದ ಸಹಕಾರಿ ದಿನಾಚರಣೆಯ ವರದಿ ಹಾಗೂ ಛಾಯಾಚಿತ್ರಗಳನ್ನು ಸಂಯುಕ್ತ ಸಹಕಾರಿಗೆ ಪತ್ರದ / souharda@souharda.coop ಗೆ ಇ–ಮೇಲ್ ಮೂಲಕ ಕಳುಹಿಸಲು ಕೋರಿದೆ.

# ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಸ್ಥಳೀಯ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಚಿಕ್ಕಬಳ್ಳಾಪುರದಲ್ಲಿ 67ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಸಂಭ್ರಮದ ಆಚರಣೆ

## ಉತ್ತಮ ಸೌಹಾರ್ದ ಸಹಕಾರಿಗಳಿಗೆ, ಶ್ರೇಷ್ಠ ಸಹಕಾರಿಗಳಿಗೆ ಉತ್ತಮ ಸಹಕಾರ ಸಂಘಗಳಿಗೆ ಪ್ರಶಸ್ತಿ

**ಚಿಕ್ಕಬಳ್ಳಾಪುರ :** 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ದಿನಾಂಕ 17 ನವೆಂಬರ್ 2020 ರಂದು ಚಿಕ್ಕಬಳ್ಳಾಪುರದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ದರ್ಜಿಗಳ ಸಹಕಾರ ಮಹಾಮಂಡಳ ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ ನಿ., ಕೋಲಾರ, ಕೋಲಾರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಒಕ್ಕೂಟ, ಜಿಲ್ಲೆಯ ಎಲ್ಲ ಸಹಕಾರ ಸಂಘಗಳು, ಸೌಹಾರ್ದ ಸಹಕಾರ ಸಂಸ್ಥೆಗಳು ಹಾಗೂ ಸಹಕಾರ ಇಲಾಖೆಯ ಸಹಯೋಗದೊಂದಿಗೆ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಸಭಾಂಗಣದಲ್ಲಿ ವಿಜ್ರಂಭಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ 9–00 ರಿಂದ 10–00 ಘಂಟೆಯವರೆಗೆ ಸುಗಮ ಸಂಗೀತವನ್ನು ವ್ಯವಸ್ಥೆ ಮಾಡಲಾಗಿತ್ತು.

## ಉಪನ್ಯಾಸ ಕಾರ್ಯಕ್ರಮ

ಬೆಳಿಗ್ಗೆ 10–00 ರಿಂದ 10–45 ರವರೆಗೆ ದಿನದ ವಿಷಯವಾದ ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದು ಈ ಬಗ್ಗೆ ನಬಾರ್ಡನ ನಿವೃತ್ತ ಅಧಿಕಾರಿ ಶ್ರೀ ವೈ.ವಿ.ಗುಂಡೂರಾವರವರು ಉಪನ್ಯಾಸ ನೀಡಿದರು. ಅಧ್ಯಕ್ಷತೆಯನ್ನು ನಿವೃತ್ತ ಅಪರ ನಿವೃತ್ತ ಅಪರ ನಿಬಂಧಕರಾದ ಶ್ರೀ ಶಶಿಧರ ಎಲೆಯವರು ವಹಿಸಿದ್ದರು.

## ಗಣ್ಯರ ಹಾಗೂ ಸಹಕಾರಿಗಳಿಗೆ ಸ್ವಾಗತ

ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರ ರವರನ್ನು, ಆರೋಗ್ಯ ಮತ್ತು ವೈದ್ಯಕೀಯ ಸಚಿವ ಶ್ರೀ ಡಾ.ಸುಧಾಕರರವರನ್ನು, ನಗರಾಭಿವೃದ್ಧಿ ಸಚಿವ ಶ್ರೀ ಭೈರತಿ ಬಸವರಾಜರವರನ್ನು, ಶಾಸಕರಾದ ಶ್ರೀ ಕೆ. ವೈ.ನಂಜೆಗೌಡ ಶಾಸಕ ಶ್ರೀ ಸುಬ್ಬಾರೆಡ್ಡಿಯವರನ್ನು, ಸಹಕಾರ ಇಲಾಖೆಯ ನಿಬಂಧಕ ಶ್ರೀ ಜಿಯಾಉಲ್ಲರವರನ್ನು ಜಿಲ್ಲಾಧಿಕಾರಿ ಶ್ರೀಮತಿ ಆರ್ ಲತಾ, ಜಿಲ್ಲಾ ಪೋಲೀಸ ವರಿಷ್ಠಾಧಿಕಾರಿ ಶ್ರೀ ಮಿಥುನಕುಮಾರರವರನ್ನು ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಸಹಕಾರಿಗಳನ್ನು ನಾದಸ್ವರ ಹಾಗೂ ಪೂರ್ಣಕುಂಭದೊಂದಿಗೆ ಸ್ವಾಗತಿಸಲಾಯಿತು.



## ಧ್ವಜಾರೋಹಣ

ಸಪ್ತವರ್ಣದ ಧ್ವಜಾರೋಹಣವನ್ನು ಬೆಳಿಗ್ಗೆ 10–45 ಘಂಟೆಗೆ ಚಿಕ್ಕಬಳ್ಳಾಪುರ ಜಿಲ್ಲಾ ಆಡಳಿತ ಭವನದ ಆವರಣದಲ್ಲಿ ಚಿಕ್ಕಬಳ್ಳಾಪುರ ಸಂಸದರಾದ ಮಾನ್ಯ ಬಿ.ಎನ್ ಬಚ್ಚೇಗೌಡರವರು ನೇರವೇರಿಸಿದರು.



## ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿದರು.



## ವಸ್ತುಪ್ರದರ್ಶನ ಉದ್ಘಾಟನೆ

ವಸ್ತುಪ್ರದರ್ಶನ ಉದ್ಘಾಟನೆಯನ್ನು ಕೋಲಾರ ಸಂಸದರಾದ ಶ್ರೀ ಎಸ್. ಮುನಿಸ್ವಾಮಿಯವರು ಸಂಯುಕ್ತ ಸಹಕಾರಿಯ ಮಳಿಗೆ ಉದ್ಘಾಟನೆಯನ್ನು ಮಾಡುವುದರ ಮೂಲಕ ನೇರವೇರಿಸಿದರು.





## ಪುಷ್ಪನಮನ :

ರಾಷ್ಟ್ರಪಿತ ಶ್ರೀ ಮಹಾತ್ಮಾ ಗಾಂಧೀಜಿ, ಸಹಕಾರ ಪಿತಾಮಹ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್, ಪ್ರಥಮ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ಹಾಗೂ ಭಾರತ ರತ್ನ ಸರ್ ಎಮ್ ವಿಶ್ವೇಶ್ವರಯ್ಯನವರ ಭಾವಚಿತ್ರಗಳಿಗೆ ಗಣ್ಯರು ಪುಷ್ಪಾರ್ಚನೆಯನ್ನು ಮಾಡುವುದರ ಮೂಲಕ ನಮನ ಸಲ್ಲಿಸಿದರು.

## ಸಭಾ ಕಾರ್ಯಕ್ರಮ



### ಸ್ವಾಗತ : ಶ್ರೀ ಎಮ್.ಡಿ ನರಸಿಂಹಮೂರ್ತಿ ಸಹಕಾರ ಸಂಘಗಳ ಜಂಟಿನಿಬಂಧಕರು

ಕಾರ್ಯಕ್ರಮವನ್ನು ರಂಗಚಂದಿರದವರಿಂದ ಪ್ರಾರ್ಥನೆ, ಸಹಕಾರ ಗೀತೆ, ನಾಡಗೀತೆ, ರೈತಗೀತೆಯೊಂದಿಗೆ ಪ್ರಾರಂಭಿಸಲಾಯಿತು. ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಎಮ್.ಡಿ.ನರಸಿಂಹಮೂರ್ತಿಯವರು ಗಣ್ಯರನ್ನು ಹಾಗು ಸಹಕಾರಿಗಳನ್ನು ಸ್ವಾಗತಿಸಿದರು.

## ಪ್ರಾಸ್ತಾವಿಕ :

### ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,



ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತ ಸಹಕಾರ ಸಪ್ತಾಹದ ಆಚರಣೆಯಿಂದಾಗಿ ಸಹಕಾರಿಗಳಲ್ಲಿ ಜಾಗೃತಿ ಮೂಡಿಸುವುದು, ಸಾರ್ವಜನಿಕರಿಗೆ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಪ್ರಚಾರಮಾಡುವುದು ವೈಫಲ್ಯಗಳ ಬಗ್ಗೆ ಆತ್ಮಾವಲೋಕನ ಮಾಡುವುದು ತನ್ಮೂಲಕ ಸಹಕಾರ ಕ್ಷೇತ್ರದ ಗುಣಾತ್ಮಕ ಅಭಿವೃದ್ಧಿಯ ಬಗ್ಗೆ ಚಿಂತನ ಮಂಥನ ಮಾಡುವುದಾಗಿದೆ. ಈ ಬಾರಿಯ ಸಪ್ತಾಹದ ಧ್ಯೇಯ ಕೋರೋನಾ ಸೋಂಕು–ಆತ್ಮನಿರ್ಭರ ಭಾರತ–ಸಹಕಾರ ಸಂಸ್ಥೆಗಳು ಎಂಬುದಾಗಿದೆ. ಇಂದಿನ ದಿನದ ವಿಷಯ ಸಹಕಾರ ಸಂಸ್ಥೆಗಳ ನಡುವೆ ಸಹಕಾರವನ್ನು ಬಲಪಡಿಸುವುದಾಗಿದೆ. ಇವೆರಡು ವಿಷಯಗಳ ಬಗ್ಗೆ ಚಿಂತನ ಮಂಥನ ಮಾಡುವಂತಹ ಗುಣಾತ್ಮಕ ಕಾರ್ಯಕ್ರಮ ಇದಾಗಿದೆ ಎಂದು ತಿಳಿಸುತ್ತ ಈ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಹಮ್ಮಿಕೊಳ್ಳಲು ಅವಕಾಶ ನೀಡಿರುವುದಕ್ಕೆ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರನ್ನು ಹಾಗೂ ಚಿಕ್ಕಬಳ್ಳಾಪುರದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಸರ್ವರೀತಿಯಲ್ಲಿ ಸಹಕಾರ ಹಾಗೂ ಮಾರ್ಗದರ್ಶನ ನೀಡಿರುವ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಡಾ.ಕೆ.ಸುಧಾಕರವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು



## ಸಂದೇಶವಾಚನ : ಶ್ರೀ ಶರಣಗೌಡ ಜಿ. ಪಾಟೀಲ್ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ್ ರಾಜ್ಯದ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ನವರು ಸಮಾರಂಭದ ಯಶಸ್ಸು ಕೋರಿ ಕಳುಹಿಸಿದ ಸಂದೇಶವನ್ನು ಓದಿದರು.



## ಉದ್ಘಾಟನೆ : ಶ್ರೀ ಎಸ್.ಟಿ.ಸೋಮಶೇಖರ ಮಾನ್ಯ ಸಹಕಾರ ಸಚಿವರು ಕರ್ನಾಟಕ ಸರಕಾರ

ದೀಪ ಬೆಳಗಿಸುವುದರ ಮೂಲಕ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಸಹಕಾರ ಸಚಿವ ಶ್ರೀ ಎಸ್.ಟಿ.ಸೋಮಶೇಖರವರು ಸಹಕಾರ ಕ್ಷೇತ್ರದ ಮೂಲಕ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿ ಹಾಗು ಬದಲಾವಣೆಗಳನ್ನು ಕಾಣಬಹುದಾಗಿದೆ. ಈ ದೇಶದಲ್ಲಿ ಸಹಕಾರ ಕ್ಷೇತ್ರ ಉತ್ತಮ ಸಾಧನೆ ಮಾಡಿದೆ ಸಾಧಿಸಬೇಕಾದುದು ಇನ್ನೂ ಇದೆ. ದೇಶದಲ್ಲಿಯೆ ಕರ್ನಾಟಕ ರಾಜ್ಯ ಸಹಕಾರ ಕ್ಷೇತ್ರದ ಮೂಲಕ ಕೇಂದ್ರದ ಆತನಿರ್ಭರ ಕಾರ್ಯಕ್ರಮದಡಿಯಲ್ಲಿ ರೈತರ ಅಭಿವೃದ್ಧಿಗಾಗಿ ಸರಕಾರದ ಯೋಜನೆಗಳನ್ನು ನಿರ್ವಹಿಸಿರುವುದು ಕರ್ನಾಟಕ ರಾಜ್ಯ ಮೊದಲನೇಯದಾಗಿದೆ. ಸಹಕಾರಿಗಳು ಹೆಮ್ಮೆಪಡುವ ವಿಷಯ ಇದಾಗಿದೆ. ಈ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಕಾರ ಕ್ಷೇತ್ರ ಸಮರ್ಥವಾಗಿದೆ ಈ ಯೋಜನೆಗಳು ಸಹಕಾರ ಕ್ಷೇತ್ರದ ಪುನಃಶ್ಚೇತನಕ್ಕೆ ದಾರಿಯಾಗಿದೆ ಎಂದು ತಿಳಿಸಿದರು. ರಾಜ್ಯದ 4 ವಿಭಾಗಗಳಲ್ಲಿ ಆರ್ಥಿಕ ಸ್ಪಂದನ ಕಾರ್ಯಕ್ರಮದ ಮೂಲಕ ಸಹಕಾರ ಕ್ಷೇತ್ರದ ಮೂಲಕ ಕಾರ್ಯಚಟುವಟಿಕೆಗಳನ್ನು ಕ್ರೀಯಾಶೀಲವಾಗಿಸಲಾಗಿದೆ. ರಾಜ್ಯದಾದ್ಯಂತ ಸಹಕಾರ ಸಂಸ್ಥೆಗಳ ಮೂಲಕ ಹಾಗೂ ಸರಕಾರದ ಮೂಲಕ ಆಶಾ ಕಾರ್ಯಕರ್ತೆಯರಿಗೆ ಸಹಕಾರ ಸಂಸ್ಥೆಗಳ ಮೂಲಕ ಪ್ರೋತ್ಸಾಹ ಧನ ನೀಡಲಾಗಿದೆ ದಿನ ನಿತ್ಯದ ಆಡಳಿತ ಸರಳೀಕರಣಕ್ಕಾಗಿ ಎರಡು ಸಹಕಾರ ಕಾಯ್ದೆಗಳಿಗೆ ಅಗತ್ಯ ತಿದ್ದುಪಡಿಗಳನ್ನು ಮಾಡಿಕೊಡಲು ಸರಕಾರ ಬದ್ಧವಾಗಿದೆ ಪ್ರಸಕ್ತ ಸಾಲಿನಲ್ಲಿ 24 ಲಕ್ಷ ರೈತರಿಗೆ 15,300 ಕೋಟಿ ಸಾಲ ನೀಡುವ ಗುರಿ ಇದ್ದು ಇದುವರೆಗೆ 15.22.ಲಕ್ಷ ರೈತರಿಗೆ 9,94,582 ಕೋಟಿ ರೂಗಳ ಸಾಲ ನೀಡಲಾಗಿದೆ ಎಂದು ತಿಳಿಸಿದರು.



## ಅಧ್ಯಕ್ಷತೆ : ಡಾ. ಕೆ. ಸುಧಾಕರ, ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಸಚಿವರು, ಕರ್ನಾಟಕ ಸರಕಾರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಸರಕಾರದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಡಾ ಕೆ.ಸುಧಾಕರರವರು ಮಾತನಾಡಿ ಸಹಕಾರ ಕ್ಷೇತ್ರದಡಿಯಲ್ಲಿ ಈ ಜಿಲ್ಲೆಯಲ್ಲಿ ಸಾಕಷ್ಟು ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರಿ ನಾಯಕರು ಕ್ರೀಯಾಶೀಲರಿದ್ದಾರೆ. ಸಹಕಾರಿ ಕ್ಷೇತ್ರ ಅತ್ಯಂತ ಪವಿತ್ರ ಕ್ಷೇತ್ರ. ಈ ಕ್ಷೇತ್ರದ ಮೂಲಕ ಜನಸಾಮಾನ್ಯರಿಗೆ ಉತ್ತಮ ಸೇವೆಯನ್ನು ಒದಗಿಸುವಂತಹ ಅವಕಾಶಗಳು ಸಾಕಷ್ಟಿವೆ. ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿದಾಗ ಸಹಕಾರ ತತ್ವಗಳನ್ನು ಪಾಲಿಸಿದಂತಾಗುತ್ತದೆ. ಆದ್ದರಿಂದ ಸಹಕಾರ ಕ್ಷೇತ್ರವನ್ನು ಬಲಪಡಿಸುವುದು ಅಗತ್ಯ ಎಂದು ತಿಳಿಸಿದರು. ಮುಂದುವರೆದು ಮಾತನಾಡಿ ದೇಶದಲ್ಲಿ ಕೋರೋನಾ ಸೊಂಕು ನಿವಾರಣೆಗೆ ಹಾಗೂ ನಿಯಂತ್ರಣಕ್ಕೆ ಕರ್ನಾಟಕ ರಾಜ್ಯ ಸರಕಾರ ತೆಗೆದುಕೊಂಡ ಕ್ರಮಗಳನ್ನು ವಿವರಿಸುತ್ತ ರಾಜ್ಯದಲ್ಲಿ ಕೋರೋನಾ ಸೊಂಕು ಪ್ರಮಾಣ ಗಣನೀಯವಾಗಿ ಇಳಿಯುತ್ತಿದೆ ಆದರೂ ಎಲ್ಲರೂ ಕಡ್ಡಾಯವಾಗಿ ಕೋರೋನಾ ನಿಯಂತ್ರಣದ ಹಾಗು ಇದರ ಹರಡುವಿಕೆಯನ್ನು ತಡೆಯುವಲ್ಲಿ ಸರಕಾರದ ಜೊತೆಗೆ ಕೈಜೋಡಿಸಬೇಕು. ತಮ್ಮ ಆರೋಗ್ಯದತ್ತ ಹೆಚ್ಚು ಗಮನ ನೀಡಬೇಕು ಎಂದು ತಿಳಿಸಿದರು. ಸಹಕಾರ ಕ್ಷೇತ್ರಕ್ಕೆ ಶ್ರೀ ಎಸ್.ಟಿ.ಸೋಮಶೇಖರ ಇವರಂತಹ ಉತ್ತಮ ಸಹಕಾರ ಮಂತ್ರಿಗಳು ಸಿಕ್ಕಿದ್ದಾರೆ. ಅವರ ನೇತೃತ್ವದಲ್ಲಿ ಈ ರಾಜ್ಯದ ಸಹಕಾರ ಕ್ಷೇತ್ರ ದೇಶದಲ್ಲಿಯೆ ಒಂದನೇ ಸ್ಥಾನಕ್ಕೆ ಬರಲಿ ಎಂದು ತಿಳಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಚಿಕ್ಕಬಳ್ಳಾಪುರ ಸಂಸದ ಶ್ರೀ ಬಿ.ಎನ್.ಬಚ್ಚೆಗೌಡರವರು, ನಗರಾಭಿವೃದ್ಧಿ ಸಚಿವ ಶ್ರೀ ಭೈರತಿ ಬಸವರಾಜ ರವರು ಸಹಕಾರ ಸಪ್ತಾಹವನ್ನು ಆಚರಿಸುವುದರ ಮೂಲಕ ಈ ಕ್ಷೇತ್ರದ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ ಎಂದು ತಿಳಿಸಿದರು.



ಮಾನ್ಯ ಸಹಕಾರ ಸಚಿವರಿಗೆ ಸನ್ಮಾನ



ಮಾನ್ಯ ಆರೋಗ್ಯ ಮತ್ತು ವೈದ್ಯಕೀಯ ಸಚಿವರಿಗೆ ಸನ್ಮಾನ



ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಸನ್ಮಾನ



ಮಾನ್ಯ ಲೋಕಸಭಾ ಸದಸ್ಯರಿಗೆ ಸನ್ಮಾನ



ಜಿಲ್ಲಾಧಿಕಾರಿಯವರಿಗೆ ಸನ್ಮಾನ



ಭಾಗವಹಿಸಿದ ಸಹಕಾರಿಗಳು



ಮಾನ್ಯ ಶಾಸಕರಿಗೆ ಸನ್ಮಾನ



## ಸ್ವಾಭಿಮಾನಿ ಸಹಕಾರ ಮಾಸ ಪತ್ರಿಕೆಯ ವಿಶೇಷ ಸಂಚಿಕೆ : ಸಹಕಾರ ವಾರಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ

ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಮಾಸ ಪತ್ರಿಯೆ ವಿಶೇಷ ಸಂಚಿಕೆಯನ್ನು ಮಾಲೂರು ಕ್ಷೇತ್ರದ ಶಾಸಕ ಹಾಗೂ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಅಧ್ಯಕ್ಷ ಶ್ರೀ ಕೆ.ವೈ.ನಂಜೇಗೌಡರವರು ಹಾಗೂ ಕೋಲಾರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಬ್ಯಾಲಹಳ್ಳಿ ಗೋವಿಂದೇಗೌಡರವರು ಬಿಡುಗಡೆ ಮಾಡಿದರು

## ಉತ್ತಮ ಸಹಕಾರ ಸಂಸ್ಥೆಗಳಿಗೆ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ

**ಸನ್ಮಾನಿತ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳು (ಸೌಹಾರ್ದ ಸಹಕಾರಿ ಕ್ಷೇತ್ರದ ರಾಜ್ಯಮಟ್ಟದ ಪ್ರಶಸ್ತಿ)**

1. ಸವಿತಾ ಸಮಾಜ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ
2. ಶ್ರೀ ಬಸವೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ
3. ಶ್ರೀ ಶಿವಲಿಂಗ ಸೌಹಾರ್ದ ಪತ್ತಿ ಸಹಕಾರಿ ನಿ., ಬೆಳಗಾವಿ
4. ಶ್ರೀ ಶಾಂತೇಶ್ವರ ಸೌಹಾರ್ದ ಪತ್ತಿ ಸಹಕಾರಿ ನಿ., ವಿಜಯಪುರ
5. ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು

**ಸನ್ಮಾನಿತ ಶ್ರೇಷ್ಠ ಸಹಕಾರಿಗಳು (ಸೌಹಾರ್ದ ಸಹಕಾರಿ ಕ್ಷೇತ್ರದ ರಾಜ್ಯಮಟ್ಟದ ಪ್ರಶಸ್ತಿ)**

1. **ಶ್ರೀ ಕೆ.ಎಮ್ ರಾಜಶೇಖರ,** ಮೈಸೂರು ಪತ್ತಿನ ಸೌಹಾರ್ದ ಸಹಕಾರಿ ನಿ., ಮೈಸೂರು.
2. **ಶ್ರೀ ರಂಗಪ್ಪ ನಾಯಕ ಪ್ಯಾಪಲಿ,** ಸಾಯಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸುರಪುರ.
3. **ಶ್ರೀ ಚಂದ್ರಶೇಖರಪ್ಪ ಬಸಪ್ಪ ಬಡ್ನಿ,** ದಿ ಮುಳಗುಂದ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ., ಮುಳಗುಂದ.
4. **ಶ್ರೀ ಪ್ರಕಾಶ ಜಿನಗೌಡ ಪಾಟೀಲ್,** ಸದಲಗಾ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ ನಿ.,
5. **ಶ್ರೀ ಯು.ಹೆಚ್.ರಾಮಪ್ಪ,** ಕೃಷಿಕ ಪತ್ತಿನ ಸೌಹಾರ್ದ ಸಹಕಾರಿ ನಿ., ಸಾಗರ

ಪತ್ತಿನ ಸಹಕಾರ ಸಂಘಗಳು ರಾಜ್ಯ ಮಟ್ಟ – 5 ಪ್ರಶಸ್ತಿ

ಶ್ರೇಷ್ಠ ಸಹಕಾರಿಗಳು ರಾಜ್ಯ ಮಟ್ಟ – 5 ಪ್ರಶಸ್ತಿ

ಅಖಂಡ ಕೋಲಾರ ಜಿಲ್ಲಾ ಉತ್ತಮ ಕೃಷಿ ಪತ್ತಿನ ಸಹಕಾರ ಸಂಘಗಳು ಪ್ರಶಸ್ತಿ – 12

ಅಖಂಡ ಕೋಲಾರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರಶಸ್ತಿ – 11

ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರಶಸ್ತಿ – 2

ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಸಹಕಾರ ಸಂಘಗಳಿಗೆ ಉತ್ತಮ ಸಹಕಾರ ಸಂಘಗಳ ಪ್ರಶಸ್ತಿ – 8

6. ಚಿಕ್ಕ ಬಳ್ಳಾಪುರ ಜಿಲ್ಲಾ ಶ್ರೇಷ್ಠ ಸಹಕಾರಿ – 1

ಎಲ್ಲ ಸನ್ಮಾನಿತರಿಗೆ ಶಾಲು, ಮೊಮೆಂಟೊ ಹಾ ಹಾರ ಹಾಕಿ ಸನ್ಮಾನಿಸಲಾಯಿತು.

### ವಂದನಾರ್ಪಣೆ



ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಶ್ರೀ ಹೆಚ್.ವಿ.ನಾಗರಾಜರವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮದ ಪ್ರಚಾರವನ್ನು ಪತ್ರಿಕೆ ಹಾಗೂ ಎಲೆಕ್ಟ್ರೋನಿಕ್ ಮಿಡಿಯಾಗಳ ಮೂಲಕ ವ್ಯಾಪಕವಾಗಿ ಮಾಡಲಾಗಿತ್ತು.

**ಸಹಕಾರ ಸಪ್ತಾಹದ ಯಶಸ್ವಿ ಆಚರಣೆಗೆ ಸಹಕರಿಸಿದ ಎಲ್ಲಾ ಸಹಕಾರಿಗಳಿಗೆ, ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ಧನ್ಯವಾದಗಳು.**

## 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ಸರಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರು



ಶ್ರೀ ಎಸ್.ಆರ್ ಸತೀಶ್ಚಂದ್ರ



ಶ್ರೀ ಎಸ್.ಆರ್ ಪಾಟೀಲ



ಶ್ರೀ ಹನುಮಂತಪ್ಪ ಕಾಮನೂರು



ಶ್ರೀ ಎಸ್ ಎಸ್ ಪಾಟೀಲ

## ಸಂಯುಕ್ತ ಸಹಕಾರಿಯ 19ನೇ ಸಾಮಾನ್ಯ ಸಭೆ 19ನೇ ಡಿಸೆಂಬರ್ 2020

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 19ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 19.12.2020 ನೇ ಶನಿವಾರ ದಂದು ವಿಡಿಯೋ ಕಾನ್ಫರೆನ್ಸ್ / ವರ್ಚುವಲ್ ಮೀಟಿಂಗ್ ಮೂಲಕ ನಡೆಸಲಾಗುವುದು.**

**link : https://zoom.us/webinar/register/WN_DY6EVAnlSJaXa-vMFoFOcw**

**ID : 923 2027 2190**

**Password : 2020**

## ಪತ್ರಿಕಾ ಗೋಷ್ಠಿ




**ಚಿಕ್ಕಬಳ್ಳಾಪುರ:** 67ನೇ ಅಖಿಲ ಭಾರತ ಸಹಕಾರ ಸಪ್ತಾಹ–2020 ಇದರ ಅಂಗವಾಗಿ ದಿನಾಂಕ 13.11.2020 ರಂದು ಬೆಳಗ್ಗೆ 11:30 ಕ್ಕೆ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಇವರ ಘನ ಅಧ್ಯಕ್ಷತೆಯಲ್ಲಿ ಪತ್ರಿಕಾಗೋಷ್ಠಿಯನ್ನು ಜಿಲ್ಲಾ ಪತ್ರಕರ್ತರ ಭವನ ಚಿಕ್ಕಬಳ್ಳಾಪುರ ಇಲ್ಲಿ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಶ್ರೀ ಹೆಚ್.ವಿ ನಾಗರಾಜು ರವರು, ಅಧ್ಯಕ್ಷರು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಒಕ್ಕೂಟ, ಶ್ರೀ ಶರಣಗೌಡ ಜಿ ಪಾಟೀಲ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ ಬೆಂಗಳೂರು, ಶ್ರೀಮತಿ ಬಿ. ಹೆಚ್ ಮಂಜುಳಾ ರವರು ಉಪನಿಬಂಧಕರು, ಚಿಕ್ಕಬಳ್ಳಾಪುರ ಇವರು ಉಪಸ್ಥಿತರಿದ್ದರು.

## ಸೌಹಾರ್ದ ಸಹಕಾರಿಗಳ ಸಭೆ

**ಚಿಕ್ಕಬಳ್ಳಾಪುರ :** 67ನೇ ಅಖಿಲ ಭಾರತ ಸಹಕಾರ ಸಪ್ತಾಹ–2020 ಇದರ ಅಂಗವಾಗಿ ದಿನಾಂಕ 13.11.2020 ರಂದು ಮಧ್ಯಾಹ್ನ 12:30 ಘಂಟೆಗೆ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು, ಇವರ ಘನ ಅಧ್ಯಕ್ಷತೆಯಲ್ಲಿ ಸೌಹಾರ್ದ ಸಹಕಾರಿಗಳ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಶ್ರೀ ಶರಣ ಗೌಡ ಜಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ, ಉಪಸ್ಥಿತರಿದ್ದರು. ಜಿಲ್ಲಾ ಸಂಯೋಜಕರುಗಳಾದ ಶ್ರೀ ರಾಜೇಶ್ ಕೆ.ಎಂ ಹಾಗೂ ಶ್ರೀ ಉಮೇಶ್ ಎ.ಎಸ್ ರವರು ಭಾಗವಹಿಸಿದ್ದರು. ಚಿಕ್ಕಬಳ್ಳಾಪುರ ಜಿಲ್ಲೆಯ 25 ಸಹಕಾರ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

**ಉಡುಪಿ :** ಉಡುಪಿ ಜಿಲ್ಲೆಯ ಹೆಬ್ರಿ ತಾಲ್ಲೂಕಿನ ಪ್ರತಿಷ್ಠಿತ ಸಹಕಾರ ಸಂಘವಾದ ಶ್ರೀ ಅನಂತ ಪದ್ಮನಾಭ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಇದನ್ನು ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತಿಸುವ ಉದ್ದೇಶದಿಂದ ಮಾತುಕತೆ ಬಳಿಕ ಅಂತಿಮವಾಗಿ ಸದರಿ ಸಹಕಾರ ಸಂಘದ ಆಡಳಿತ ಮಂಡಳಿಯು ಸೌಹಾರ್ದ ಸಹಕಾರಿ ಕಾಯ್ದೆಗೆ ಪರಿವರ್ತನೆಯಾಗಲು ಸರ್ವಾನುಮತದಿಂದ ನಿರ್ಣಹಿಸಿರುತ್ತಾರೆ ಮತ್ತು ಇದೇ ಸಹಕಾರ ವರ್ಷದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ವಿಷಯವನ್ನು ಮಂಡನೆ ಮಾಡಿ ಅನುಮೋದನೆ ಪಡೆದುಕೊಳ್ಳಲು ನಿರ್ಣಹಿಸಿರುತ್ತಾರೆ. ಸದರಿ ಸಹಕಾರಿಯ ಒಟ್ಟು ದುಡಿಯುವ ಬಂಡವಾಳವು 25 ಕೋಟಿಗಳಾಗಿರುತ್ತದೆ.

## ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳದ 4ನೇ ಸಾಮಾನ್ಯ ಸಭೆ ದಿನಾಂಕ 19ನೇ ಡಿಸೆಂಬರ್ 2020

**ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳದ 4ನೇ ಸಾಮಾನ್ಯ ಸಭೆಯು ದಿನಾಂಕ 19ನೇ ಡಿಸೆಂಬರ್ 2020 ರಂದು ಹೋಟೇಲ್ ಪಾರಿಜಾತ ಗೇಟ್ ವೇ, ನಂ 26//4 & 5 , ಡಾ. ರಾಜಕುಮಾರ್ ರಸ್ತೆ, ಸರ್ಕಾರಿ ಸಾಬೂನು ಕಾರ್ಖಾನೆ ಎದುರುಗಡೆ, ರಾಜಾಜಿನಗರ, ಬೆಂಗಳೂರು ಇಲ್ಲಿ ನಡೆಸಲಾಗುವುದು.**

# ಬೀದರನಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ

## ಸಹಕಾರಿ ಚಳುವಳಿಯ ಮೂಲಕ ಆತ್ಮನಿರ್ಭರ ಭಾರತ ಸಾಧ್ಯ – ಜ್ಯಾಂತೀಕರ,



**ಬೀದರ :** ಸಹಕಾರಿಯು ನಮ್ಮ ಮೂಲ ಮಂತ್ರ ಭಾರತದಲ್ಲಿ ಸಹಕಾರ ಚಳುವಳಿಗೆ ತನ್ನದೆಯಾದ ಇತಿಹಾಸವಿದೆ. ಈ ಚಳುವಳಿಯನ್ನು ಮನೆ ಮನಗಳಲ್ಲಿ ಮೂಡಿಸಿ ಆತ್ಮನಿರ್ಭರ ಭಾರತದ ಕನಸು ಸಾಕಾರಗೊಳಿಸಿ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಕರೆ ನೀಡಿದರು. ನಗರದ ಲೋಕಮುದ್ರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತ ಕಲಬುರಗಿ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ 67ನೇ ಅಖಿಲ ಭಾರತ ಸಹಕಾರ ಸಪ್ತಾಹ–2020ರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಕರೋನಾ ಸಂದರ್ಭದಲ್ಲಿ ಸಹಕಾರಿಗಳು ಕಷ್ಟದ ದಿನಗಳು ಅನುಭವಿಸಿದವು, ಅದರಲ್ಲೂ ಯಾರು ಎದೆಗುಂದದೆ ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡುವ ಮೂಲಕ ಮಾದರಿಯಾದವು ಎಂದರು. ಈ ವರ್ಷದ ಮುಖ್ಯ ಧ್ಯೇಯವೆಂದರೆ ಕರೋನಾ–ಸೋಂಕು–ಆತ್ಮನಿರ್ಭರ ಭಾರತ–ಸಹಕಾರ ಸಂಸ್ಥೆಗಳು ಎಂಬ ವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಪ್ರತಿಯೊಬ್ಬರು ಆತ್ಮನಿರ್ಭರರಾಗಿ ಉತ್ತಮ ಜೀವನ ನಡೆಸುವಂತಾಗಲಿ ಎಂದು ಹಾರೈಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಉಪನ್ಯಾಸಕರಾಗಿ ಆಗಮಿಸಿದ ಶ್ರೀ ರವಿ ಭಾತಂಬ್ರೆ ಇವರು ಸಹಕಾರ ಕ್ಷೇತ್ರಕ್ಕೆ ಯುವಜನ, ಮಹಿಳೆಯು ದುರ್ಬಲ ವರ್ಗದವರು ಸೇರಿದಾಗ ಮಾತ್ರ ಚಳುವಳಿ ಯಶಸ್ವಿಯಾಗಲು ಸಾಧ್ಯವೆಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್ ವಹಿಸಿಕೊಂಡಿದರು. ಸಹಕಾರ ಧ್ವಜಾರೋಹಣವನ್ನು ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಶ್ರೀಕಾಂತ ಸ್ವಾಮಿ ಸೋಲಪೂರ ನೇರವೆರಿಸಿದರು. ಸಹಕಾರ ಸಪ್ತಾಹ–2020 ಕುರಿತು ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ನಡೆಸಿಕೊಟ್ಟರು. ವೇದಿಕೆಯ ಮೇಲೆ ಬೀದರ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀಮತಿ ಮಯಾದೇವಿ ಸಿಂದನಕೇರಾ, ರಾಜಶೇಖರ ನಾಗಮುರ್ತಿ, ಮುಖ್ಯ ಕಾರ್ಯನಿರ್ವಾಹಕರಾದ ಅಮೃತ ಹೊಸಮನಿ, ಲೋಕಮುದ್ರ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಸುಭಾಷ ಶೆಡೋಳೆ ವಿಜಯಕುಮಾರ ಸಿಂದೆ, ಸಚಿನ ಬಿರಾದಾರ, ಬಸವರಾಜ ಹುಡಗೆ, ಸತೀಶ ಭಾತಂಬ್ರಾ, ಸಾವಿತ್ರಿ, ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ಓಂಕಾರ ಧರಣೆ, ಶ್ರೀ ವೀರಶೆಟ್ಟಿ ಕೆ, ಉಪಸ್ಥಿತರಿದ್ದರು. ಶರಣೆ ಮಲ್ಲಮ್ಮ ಇವರು ಸ್ವಾಗತಿಸಿದರು ವೀರಶಟ್ಟಿ ಕಾಮಣ್ಣಾ ನಿರೂಪಿಸಿದರು, ಸುಭಾಷ ಶೇಡೊಳೆ ವಂದಿಸಿದರು. ಭಾಲ್ಕಿ ತಾಲ್ಲೂಕಿನ 50ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ಸನ್ಮಾನ

**ಬೆಳಗಾವಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನೂತನವಾಗಿ ಆಯ್ಕೆಗೊಂಡ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮತ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿಯ ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಬ್ಬಂದಿಗಳು ಸ್ವಾಗತವನ್ನು ಕೋರಿ ಸನ್ಮಾನಿಸಲಾಯಿತು.

**ಬೆಳಗಾವಿ:** 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ದಿನಾಚರಣೆಯ ನಿಮಿತ್ತ ಬೆಳಗಾವಿ ಪ್ರಾಂತೀಯ ಕಛೇರಿಯ ಆವರಣದಲ್ಲಿ ಧ್ವಜಾರೋಹಣ ನೇರವೆರಿಸಲಾಯಿತು.

**ಮೈಸೂರು :** 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ದಿನಾಚರಣೆಯ ನಿಮಿತ್ತ ಮೈಸೂರು ಪ್ರಾಂತೀಯ ಕಛೇರಿಯ ಆವರಣದಲ್ಲಿ ಧ್ವಜಾರೋಹಣ ನೇರವೆರಿಸಲಾಯಿತು.

## ಭೇಟಿ

**ಬೆಳಗಾವಿ :** ಕರ್ನಾಟಕರ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆಳಗಾವಿ ಪ್ರಾಂತೀಯ ಕಛೇರಿಗೆ ಶ್ರೀ ಪ್ರಸಾದ ರೆಡ್ಡಿ, ಮಾನ್ಯ ಜಂಟಿ ನಿಬಂಧಕರು(ಐಸಿಡಿಪಿ) ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಹಾಗೂ ಶ್ರೀ ಮಂಜುನಾಥ ಸಿಂಗ್, ಮಾನ್ಯ ಉಪನಿಬಂಧಕರು 441 ನ್ಯಾಯಾಲಯ, ಬೆಂಗಳೂರು, ಇವರು ಭೇಟಿ ನೀಡಿದರು.

**ಕಲಬುರಗಿ :** ದಿನಾಂಕ 14.11.2020 ರಂದು ಕಲಬುರಗಿ ಪ್ರಾಂತದಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ದಿನಾಚರಣೆಯನ್ನು ಆಚರಿಸಲಾಯಿತು. ಧ್ವಜಾರೋಹಣವನ್ನು ಪ್ರಾಂತೀಯ ವ್ಯವಸ್ಥಾಪಕರು ನೇರವೆರಿಸಿ ಸಹಕಾರ ಸಪ್ತಾಹ ದಿನಾಚರಣೆಯಿಂದ ಜನಸಾಮನ್ಯರಿಗೂ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡುತ್ತಿದೆ ಎಂದರು. ಈ ಕಾರ್ಯಕ್ರಮದಲ್ಲಿ ಪ್ರಾಂತದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮಗಳು

### ಬೆಂಗಳೂರು ವಿಭಾಗ

## ಆದಾಯ ತೆರಿಗೆ ಮತ್ತು ಜಿಎಸ್‌ಟಿ ತೆರಿಗೆಯ ಇತ್ತೀಚಿನ ಬೆಳವಣಿಗೆಗಳ ಕುರಿತು ತರಬೇತಿ ಕಾರ್ಯಕ್ರಮ

**ಚಿತ್ರದುರ್ಗ ಹಾಗೂ ದಾವಣಗೆರೆ** : ದಿನಾಂಕ 05.11.2020 ರಂದು ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಗಾಗಿ ಆದಾಯ ತೆರಿಗೆ ಮತ್ತು ಜಿಎಸ್‌ಟಿ ತೆರಿಗೆಯ ಇತ್ತೀಚಿನ ಬೆಳವಣಿಗೆಗಳು ವಿಷಯದ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯ ಪ್ರಾಸ್ತಾವಿಕ ನುಡಿಯನ್ನು ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಬಿ.ವಿ ರವೀಂದ್ರನಾಥ್ ಸನ್ನದು ಲೆಕ್ಕಪರಿಶೋಧಕರು, ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ನಡೆಸಿಕೊಟ್ಟರು. 54 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

### ಮೈಸೂರು ವಿಭಾಗ

## 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕುರಿತು ಉಪನ್ಯಾಸ ಕಾರ್ಯಕ್ರಮ "ಸಹಕಾರಿಗಳಲ್ಲಿ ಸಹಕಾರದ ಬಲವರ್ಧನೆ "

**ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ & ಚಿಕ್ಕಮಂಗಳೂರು :** ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ & ಚಿಕ್ಕಮಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರಿಗಾಗಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ 2020ರ "ಕರೋನಾ ಸೋಂಕು, ಆತ್ಮನಿರ್ಭರ್ ಭಾರತ ಮತ್ತು ಸಹಕಾರ" ಎಂಬ ಧ್ಯೇಯದೊಂದಿಗೆ ಆಯೋಜಿಸಿರುವ "ಸಹಕಾರಿಗಳಲ್ಲಿ ಸಹಕಾರದ ಬಲವರ್ಧನೆ" ಎಂಬ ವಿಷಯದ ಕುರಿತು ದಿನಾಂಕ: 17.11.2020ರ ಮಂಗಳವಾರ ಮಧ್ಯಾಹ್ನ 03:00 ರಿಂದ 04:30ರ ವರೆಗೆ "ವೀಡಿಯೋ ಕಾನ್ಫರೆನ್ಸ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮಾಡಿದರು. ನಂತರ ಶ್ರೀ ಸದಾಶಿವ ಶೆಟ್ಟಿ, ಮಾನ್ಯ ವೃತ್ತಿಪರ ನಿರ್ದೇಶಕರು ಇವರು ಮುಖ್ಯ ಅಥಿತಿಗಳ ಭಾಷಣ ಮಾಡಿದರು. ನಂತರ ಡಾ. ಎಸ್.ಎ. ಸಿದ್ಧಾಂತಿ, ಮಾನ್ಯ ನಿರ್ದೇಶಕರು (ನಿವೃತ್ತ) ಆರ್‌ಐಸಿಎಂ, ಬೆಂಗಳೂರು ಇವರು "ಸಹಕಾರಿಗಳಲ್ಲಿ ಸಹಕಾರದ ಬಲವರ್ಧನೆ" ಕುರಿತು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 62 ಸೌಹಾರ್ದ ಸಹಕಾರಿಗಳಿಂದ 74 ಪ್ರತಿನಿಧಿಗಳು ಭಾಗವಹಿಸಿದ್ದರು.

## "ಸಹಕಾರ ರಂಗದ ಮೂಲಕ ಸಾಮಾಜಿಕ ಜಾಲತಾಣ, ಡಿಜಿಟಲೀಕರಣ ಹಾಗೂ ಆರ್ಥಿಕ ಸೇರ್ಪಡೆ"

**ಉಡುಪಿ ಮತ್ತು ಮಂಗಳೂರು** : ಉಡುಪಿ ಮತ್ತು ಮಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಅಧ್ಯಕ್ಷರು/ ಉಪಾಧ್ಯಕ್ಷರು/ನಿರ್ದೇಶಕರಿಗಾಗಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ 2020ರ "ಕರೋನಾ ಸೋಂಕು, ಆತ್ಮನಿರ್ಭರ್ ಭಾರತ ಮತ್ತು ಸಹಕಾರ" ಎಂಬ ಧ್ಯೇಯದೊಂದಿಗೆ ಆಯೋಜಿಸಿರುವ "ಸಹಕಾರ ರಂಗದ ಮೂಲಕ ಸಾಮಾಜಿಕ ಜಾಲತಾಣ, ಡಿಜಿಟಲೀಕರಣ ಹಾಗೂ ಆರ್ಥಿಕ ಸೇರ್ಪಡೆ" ಎಂಬ ವಿಷಯದ ಕುರಿತು ದಿನಾಂಕ: 20.11.2020ರ ಶುಕ್ರವಾರ ಮಧ್ಯಾಹ್ನ 03:00 ರಿಂದ 04:30ರ ವರೆಗೆ "ವೀಡಿಯೋ ಕಾನ್ಫರೆನ್ಸ್" ಮೂಲಕ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಸದರಿ ತರಬೇತಿ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಪ್ರಾಸ್ತಾವಿಕ ನುಡಿಯನ್ನು ಮಾಡಿದರು. ನಂತರ ಶ್ರೀ ಸದಾಶಿವ ಶೆಟ್ಟಿ, ಮಾನ್ಯ ವೃತ್ತಿಪರ ನಿರ್ದೇಶಕರು ಇವರು ಮುಖ್ಯ ಅತಿಥಿಗಳ ಭಾಷಣ ಮಾಡಿದರು. ನಂತರ ಶ್ರೀ ಶಿವಾನಂದ್ ಗಂಗಾಧರ್ ಕುಲ್ಕರ್ಣಿ, ಬ್ಯಾಂಕಿಂಗ್ ತಜ್ಞರು, ಬೆಂಗಳೂರು ಇವರು "ಸಹಕಾರ ರಂಗದ ಮೂಲಕ ಸಾಮಾಜಿಕ ಜಾಲತಾಣ, ಡಿಜಿಟಲೀಕರಣ ಹಾಗೂ ಆರ್ಥಿಕ ಸೇರ್ಪಡೆ" ಕುರಿತು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 148 ಸೌಹಾರ್ದ ಸಹಕಾರಿಗಳಿಂದ 148 ಪ್ರತಿನಿಧಿಗಳು ಭಾಗವಹಿಸಿದ್ದರು.



## ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಶ್ರೀ ರಮೇಶ ಕತ್ತಿ ಪುನರಾಯ್ಕೆ

**ಬೆಳಗಾವಿ :** ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನ ನೂತನ ಅಧ್ಯಕ್ಷರಾಗಿ ಶ್ರೀ ರಮೇಶ ಕತ್ತಿ ಇವರು ಪುನರಾಯ್ಕೆಯಾಗಿರುತ್ತಾರೆ.



## ಎನ್.ಸಿ.ಯು.ಐ ನ ಅಧ್ಯಕ್ಷರಾಗಿ ಶ್ರೀ ದಿಲೀಪ್‌ಬಾಯಿ ಸಂಘಾನಿ ಆಯ್ಕೆ

**ನವದೆಹಲಿ :** ರಾಷ್ಟ್ರೀಯ ಸಹಕಾರಿ ಯೂನಿಯನ್ ನ ನೂತನ ಅಧ್ಯಕ್ಷರಾಗಿ ಶ್ರೀ ದಿಲೀಪ್‌ಬಾಯಿ ಸಂಘಾನಿ ಇವರು ಆಯ್ಕೆಯಾಗಿರುತ್ತಾರೆ.

## ಸನ್ಮಾನ





**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೂತನ ವೃತ್ತಿಪರ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಲಕ್ಷ್ಮಣ ಮಾರುತಿ ಪವಾರ್ ಹಾಗೂ ಸದಾಶಿವ ಶೆಟ್ಟಿ ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಸನ್ಮಾನಿಸಲಾಯಿತು.

**ಕಲಬುರಗಿ :** ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ನೇಮಕಗೊಂಡ ಶ್ರೀ ದಾಯಫನ್ ಧಾರವಾಡಕರ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ಸಂಜೀವ ಮಹಾಜನರವರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮದ ನಿರ್ದೇಶಕರಾದ ಶ್ರೀ ಎಸ್ ಎಸ್ ಪಾಟೀಲ್ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಉಪಸ್ಥಿತರಿದ್ದರು.

**ಕಲಬುರಗಿ :** 13.11.2020 ರಂದು ಪ್ರಾಂತೀಯ ಕಛೇರಿಗೆ ಆಗಮಿಸಿದ ಕಲಬುರಗಿ ಪ್ರಾಂತದ ಜಂಟಿ ನಿಬಂಧಕರಾದ ಶ್ರೀ ಗೋಪಾಲ್ ಚವ್ಹಾಣ ಉಪ ನಿಬಂಧಕರಾದ ಶ್ರೀ ಸಿಎಸ್.ನಿಂಬಾಳಕರ್ ಇವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಕೊಪ್ಪಳ :** ದಿನಾಂಕ 28–11–2020, ಶನಿವಾರದಂದು ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಶ್ರೀ ಬಸವಭಾನು ಪತ್ತಿನ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ.ಜಿ.ಶೀಧರ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಅಮರೇಶ ಕುಳಗಿ, ಶ್ರೀ ಲಕ್ಷ್ಮೀ ವೆಂಕಟೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಿ.ಎಚ್.ಶರಣಪ್ಪ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಎಮ್.ರಮೇಶ, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ, ಶ್ರೀ ರಾಜಶೇಖರ ಶ್ರೇಷ್ಠಿ ರವರು ಉಪಸ್ಥಿತರಿದ್ದರು.

## "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜ್‌ಮೆಂಟ್ ಡಿಪ್ಲೋಮಾ"
## 3ನೇ ತಂಡದ ಪ್ರವೇಶ ಅರ್ಜಿಗಳ ಆಹ್ವಾನ
## ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ"
## 1ನೇ ಜನವರಿ 2021 ರಿಂದ ಪ್ರಾರಂಭ

## Applications called for 3rd Batch of "Diploma in Cooperation and Banking Management"(DCBM) 6 Months Distance Education Course starts from 1st January 2021

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ "ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ್ ಮೆನೇಜಮೆಂಟ"ನ 3ನೇ ತಂಡದ ಕೋರ್ಸ್‌ನ್ನು ಇದೇ ಜನವರಿ 2021 ರಿಂದ ಪ್ರಾರಂಭಿಸಲಾಗುತ್ತದೆ.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು (ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.**

**ಕೋರ್ಸ್ ಫೀ :** ರೂ. 5000/- (ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಕಂಟ್ಯಾಕ್ಟ ತರಗತಿಗಳ ವೆಚ್ಚ ರೂ 1500/- ಪ್ರತ್ಯೇಕ. **ಕೋರ್ಸ್‌ನ ಒಟ್ಟು ಫೀ ರೂ. 7670/- (6500 + 18% ಜಿಎಸ್‌ಟಿ)**

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ : 080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

ಸಹಿ/-

**(ಶರಣಗೌಡ ಜಿ. ಪಾಟೀಲ)**

**ವ್ಯವಸ್ಥಾಪಕ ನಿರ್ದೇಶಕರು**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

ಸಂಖ್ಯೆ : ಸಂಸ/ಆ.ವಾ.ಸ/ಸು–01/2020–21 ದಿನಾಂಕ : 18.11.2020

## ಅತೀ ಜರೂರು – ಆನ್‌ಲೈನ್ ವಾರ್ಷಿಕ ಸಭೆ ಕುರಿತ ಸುತ್ತೋಲೆ

ಇವರಿಗೆ :

ಮಾನ್ಯ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹಕರು

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು

ಮಾನ್ಯರೇ,

**ವಿಷಯ : ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ ಜರುಗಿಸಲು ಸಂಯುಕ್ತ ಸಹಕಾರಿಯಿಂದ ತಾಂತ್ರಿಕ ವ್ಯವಸ್ಥೆ ಒದಗಿಸುತ್ತಿರುವ ಕುರಿತು.**

**ಉಲ್ಲೇಖ : ಸರ್ಕಾರದ ಆದೇಶ ಸಂಖ್ಯೆ: ಸಿ 43 ಸಿಎಲ್‌ಎಮ್ 2020 (ಇ) ಬೆಂಗಳೂರು, ದಿನಾಂಕ:21.10.2020**

**ಕೋವಿಡ್ 19 ಮಹಾಮಾರಿ ಹರಡುವಿಕೆಯ ಕಾರಣಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ ನಡೆಸುವ ದಿನಾಂಕವನ್ನು ಡಿಸೆಂಬರ್ 25ರವರೆಗೆ ರಾಜ್ಯ ಸರ್ಕಾರ ವಿಸ್ತರಿಸಿ ಆದೇಶಿಸಿದೆ ಹಾಗೂ ಮುಂದುವರೆದು ಉಲ್ಲೇಖದ ಆದೇಶದ ಮೂಲಕ ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ಮೀಟಿಂಗ್ ಮೂಲಕ ಕೂಡ ವಾರ್ಷಿಕ ಸಾಮಾನ್ಯ ಸಭೆ ನಡೆಸಲು ರಾಜ್ಯ ಸರ್ಕಾರ ಅವಕಾಶ ನೀಡಿದೆ. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ವಿಷಯಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಗಮನಕ್ಕೆ ತರಲಾಗುತ್ತಿದೆ.**

1. **ಆಫ್‌ಲೈನ್ ಮೂಲಕ ಸಾಮಾನ್ಯ ಸಭೆ :** ರಾಜ್ಯ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು, ಕೋವಿಡ್ 19ರ ಸುರಕ್ಷತಾ ಕ್ರಮಗಳೊಂದಿಗೆ, ರಾಜ್ಯ ಸರ್ಕಾರ ನಿಗದಿಪಡಿಸಿದ ಸಂಖ್ಯೆಯ ಭಾಗವಹಿಸುವಿಕೆಯ ಮಿತಿಯೊಳಗೆ ಅಥವಾ ಹೆಚ್ಚಿನ ಸಂಖೆಯಯಲ್ಲಿ ಸದಸ್ಯರು ಪಾಲ್ಗೊಳ್ಳುತ್ತಿದ್ದಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿ ಪಡೆದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಧರಿಸುವುದು, ಸೆನಿಟೈಸರ್ ಬಳಸುವ ಕ್ರಮಗಳೊಂದಿಗೆ, ಪ್ರತಿ ವರ್ಷದಂತೆ ಆಫ್‌ಲೈನ್‌ನಲ್ಲಿ ಕೂಡ ಡಿಸೆಂಬರ್ 25ರ ಒಳಗಾಗಿ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲು ಅವಕಾಶವಿದೆ.

2. **ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ವ್ಯವಸ್ಥೆ ಮೂಲಕ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ :** ಹೆಚ್ಚಿನ ಸಂಖ್ಯೆಯ ಸದಸ್ಯರು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿರುವ ಸೌಹಾರ್ದ ಸಹಕಾರಿಗಳು ಆನ್‌ಲೈನ್ ಮೂಲಕ ವಾರ್ಷಿಕ ಸಾಮಾನ್ಯ ಸಭೆ ನಡೆಸುವುದು ಸೂಕ್ತವಾಗಿದೆ. ಆನ್‌ಲೈನ್ ಮೂಲಕ ವಾರ್ಷಿಕ ಸಾಮಾನ್ಯ ಸಭೆ ನಡೆಸುವ ಸಂದರ್ಭದಲ್ಲಿ ರಾಜ್ಯ ಸರ್ಕಾರ ನೀಡಿದ ಉಲ್ಲೇಖದ ಆದೇಶದಲ್ಲಿನ ವಿಷಯಗಳನ್ನು ಗಮನಿಸಿ ಪಾಲಿಸಲು ಸೌಹಾರ್ದ ಸಹಕಾರಿಗಳು ಕ್ರಮವಿಡುವುದು.

**ಸಂಯುಕ್ತ ಸಹಕಾರಿಯಿಂದ ಆನ್‌ಲೈನ್ ಪ್ಲಾಟ್‌ಫಾರಂ ಒದಗಿಸಿಕೊಡಬೇಕೆಂದು ಕೆಲವೊಂದು ಸೌಹಾರ್ದ ಸಹಕಾರಿಗಳು ಅಪೇಕ್ಷಿಸಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುತ್ತಿರುವುದರಿಂದ, ಝೂಮ್ ವಿಡಿಯೋ ವೆಬಿನಾರ್ ಅಪ್ಲಿಕೇಷನ್ (Zoom Video Webinar App) ಎನ್ನುವ ಆನ್‌ಲೈನ್ ಪ್ಲಾಟ್‌ಫಾರಂನ ಮೂಲಕ ಈ ಕೆಳಕಂಡ ನಿಬಂಧನೆಗೊಳಪಟ್ಟು ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗೆ ಆನ್‌ಲೈನ್ ಪ್ಲಾಟ್‌ಫಾರಂ ಒದಗಿಸಲು ಸಂಯುಕ್ತ ಸಹಕಾರಿಯು ತೀರ್ಮಾನಿಸಿದೆ.**

**ಸಂಯುಕ್ತ ಸಹಕಾರಿಯಿಂದ ಒದಗಿಸುವ ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ವಾರ್ಷಿಕ ಸಾಮಾನ್ಯ ಸಭೆ ವ್ಯವಸ್ಥೆಯ ನಿಬಂಧನೆಗಳು :**

1. "ಝೂಮ್ ವಿಡಿಯೋ ವೆಬಿನಾರ್ ಅಪ್ಲಿಕೇಷನ್" ಎನ್ನುವ ಆನ್‌ಲೈನ್ ಮೀಟಿಂಗ್ ಪ್ಲಾಟ್‌ಫಾರಂ ಅನ್ನು ಸಂಯುಕ್ತ ಸಹಕಾರಿಯಿಂದ ಖರೀದಿಸಿ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆಗೆ ಒಂದು ದಿನದ ಮಟ್ಟಿಗೆ ಒದಗಿಸಲಾಗುತ್ತದೆ.
2. ಗರಿಷ್ಠ ಒಂದು ಸಾವಿರದವರೆಗೆ ಸಾಮಾನ್ಯ ಸಭೆಗೆ ಹಾಜರಾಗುವ ಅರ್ಹ ಸದಸ್ಯರನ್ನು ಹೊಂದಿರುವ ಸೌಹಾರ್ದ ಸಹಕಾರಿಗಳಿಗೆ ಮಾತ್ರ ಸಂಯುಕ್ತ

ಸಹಕಾರಿಯ ಈ ತಾಂತ್ರಿಕ ಸೇವೆ ಲಭ್ಯವಿರುತ್ತದೆ.

3. ಸಂಯುಕ್ತ ಸಹಕಾರಿ ಒದಗಿಸುವ ಆನ್‌ಲೈನ್ ಮೀಟಿಂಗ್ ಪ್ಲಾಟ್‌ಫಾರಂಗೆ ಒಂದು ಸೌಹಾರ್ದ ಸಹಕಾರಿಯು ಒಂದು ದಿನದ ಮೀಟಿಂಗ್ ವ್ಯವಸ್ಥೆಗೆ ರೂ.5000/– ಗಳನ್ನು ಸಂಯುಕ್ತ ಸಹಕಾರಿಗೆ ಪಾವತಿಸಬೇಕಾಗುತ್ತದೆ.

4. ಹೋಸ್ಟಿಂಗ್ ಅಧಿಕಾರವನ್ನು ಸಂಯುಕ್ತ ಸಹಕಾರಿಯ ತಾಂತ್ರಿಕ ವ್ಯವಸ್ಥಾಪಕರು ಹೊಂದಿರುತ್ತಾರೆ ಹಾಗೂ ಕೋ ಹೋಸ್ಟಿಂಗ್/ಪ್ರೆಸೆಂಟರ್ ಅಧಿಕಾರವನ್ನು ಸೌಹಾರ್ದ ಸಹಕಾರಿಯ ಅಧ್ಯಕ್ಷರು ಅಥವಾ ಮುಖ್ಯಕಾರ್ಯನಿರ್ವಾಹಕರಿಗೆ ನೀಡಲಾಗುತ್ತದೆ.

5. ಸಭೆ ಮುಕ್ತಾಯವಾದ ನಂತರದಲ್ಲಿ ಸಭೆಯ ರೆಕಾರ್ಡಿಂಗ್ ಹಾಗೂ ಹಾಜರಾತಿಯನ್ನು ಸೌಹಾರ್ದ ಸಹಕಾರಿಗಳಿಗೆ ಕಳುಹಿಸಿಕೊಡಲಾಗುತ್ತದೆ.

6. ಒಂದು ದಿನಕ್ಕೆ ಒಂದು ಸೌಹಾರ್ದ ಸಹಕಾರಿಗೆ ಮಾತ್ರ ಈ ತಾಂತ್ರಿಕ ಸೇವೆ ಲಭ್ಯವಿರುವುದರಿಂದ ಮೊದಲು ನೋಂದಾಯಿಸಿದ ಸೌಹಾರ್ದ ಸಹಕಾರಿಗೆ ಆ ದಿನಾಂಕಕ್ಕೆ ಆದ್ಯತೆ ನೀಡಲಾಗುತ್ತದೆ. ನೋಂದಾಯಿತ ದಿನಾಂಕಗಳ ವಿವರಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ನಲ್ಲಿ ಪ್ರಕಟಿಸಲಾಗುವುದು.

**ಸೌಹಾರ್ದ ಸಹಕಾರಿಗಳು ನಿರ್ವಹಿಸಬೇಕಾದ ಕಾರ್ಯಗಳು :**

1. ಸಂಯುಕ್ತ ಸಹಕಾರಿಯಿಂದ ಈ ಸೇವೆಯನ್ನು ಅಪೇಕ್ಷಿಸುವ ಸೌಹಾರ್ದ ಸಹಕಾರಿಗಳು ತಮ್ಮ ಆಡಳಿತ ಮಂಡಳಿ ಸಭೆಯಲ್ಲಿ ಈ ವಿಷಯ ಚರ್ಚಿಸಿ ನಿರ್ಣಯದೊಂದಿಗೆ ಮನವಿ ಪತ್ರವನ್ನು ಸಂಯುಕ್ತ ಸಹಕಾರಿಯ ಈ ಮೇಲ್ ಐಡಿ : sindu@souharda.coop ಗೆ ಮೇಲ್ ಮಾಡುವ ಮೂಲಕ ಅಥವಾ ಸಂಖ್ಯೆ: 8884466708 ಗೆ whats app ಮೂಲಕ ಕಳುಹಿಸಿ ನೋಂದಾಯಿಸಿಕೊಳ್ಳಬೇಕು.

2. ಈ ತಾಂತ್ರಿಕ ಸೇವೆಗೆ ನೋಂದಾಯಿಸಿದ ಸೌಹಾರ್ದ ಸಹಕಾರಿಗಳು, ಸಂಯುಕ್ತ ಸಹಕಾರಿಯಿಂದ ಸೇವಾ ಅನುಮತಿ ದೊರೆತ ನಂತರ ಅಗತ್ಯ ಆನ್‌ಲೈನ್ ಮೀಟಿಂಗ ಐಡಿ/ಲಿಂಕ್ ಪಡೆದು ತಮ್ಮ ಸದಸ್ಯರಿಗೆ, ಉಪವಿಧಿ ತಿದ್ದುಪಡಿ ಇದ್ದಲ್ಲಿ 20 ದಿನಗಳ ಮುಂಚಿತವಾಗಿ ಹಾಗೂ ಉಪವಿಧಿ ತಿದ್ದುಪಡಿ ಇಲ್ಲದಿದ್ದಲ್ಲಿ 15 ದಿನಗಳ ಮುಂಚಿತವಾಗಿ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್ ಹಾಗೂ ವಿವರವಾದ ಮಾಹಿತಿಯೊಂದಿಗೆ ಕಳುಹಿಸಬೇಕು.

3. ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗುವ ಸದಸ್ಯರು, ಹಾಜರಾತಿಯಲ್ಲಿ ಅಗತ್ಯವಿರುವಂತೆ ಹೆಸರು ನೋಂದಣಿ ಮಾಡುವ (ಉದಾಹರಣೆಗೆ : ಸದಸ್ಯತ್ವ ಸಂಖ್ಯೆ ಹಾಗೂ ಹೆಸರು) ಬಗ್ಗೆ ಗಮನಿಸುವುದು, ಮೇಲ್ವಿಚಾರಣೆ ಮಾಡುವುದು ಸೌಹಾರ್ದ ಸಹಕಾರಿಯ ಜವಾಬ್ದಾರಿಯಾಗಿದೆ.

4. ವಾರ್ಷಿಕ ಸಾಮಾನ್ಯ ಸಭೆಗೆ ನಿಗದಿತ ಅವಧಿಗಿಂತ ಒಂದು ಗಂಟೆ ಮುಂಚೆ ಸದಸ್ಯರು ಲಾಗಿನ್ ಆಗುವಂತೆ ನೋಡಿಕೊಳ್ಳುವುದು, ಕೋರಂ ಗಮನಿಸುವುದು, ಸಭೆಯ ಕಾರ್ಯ ಕಲಾಪಗಳನ್ನು ನಡೆಸುವುದು ಸೌಹಾರ್ದ ಸಹಕಾರಿಯ ಅಧ್ಯಕ್ಷರ/ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿಯಾಗಿದೆ.

5. ಆನ್‌ಲೈನ್ ವಾರ್ಷಿಕ ಸಾಮಾನ್ಯ ಸಭೆ ನಡೆಸಲು ಸೌಹಾರ್ದ ಸಹಕಾರಿಯು ಉತ್ತಮ ಇಂಟರ್ನೆಟ್ ಸೌಲಭ್ಯವನ್ನು ಹೊಂದಿರಬೇಕು ಹಾಗೂ ಸಭೆಯಲ್ಲಿ ಭಾಗವಹಿಸುವ ಸಹಕಾರಿಯ ಸದಸ್ಯರು ಕೂಡ ಉತ್ತಮ ಇಂಟರ್ನೆಟ್ ಸೌಲಭ್ಯ ಹೊಂದುವ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡುವುದು ಸೌಹಾರ್ದ ಸಹಕಾರಿಯ ಜವಾಬ್ದಾರಿ.

6. ವಾರ್ಷಿಕ ಸಾಮಾನ್ಯ ಸಭೆಯ ಕೋಹೋಸ್ಟ್/ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು ವೆಬ್ ಕ್ಯಾಮರಾ ಹೊಂದಿರುವ ಲ್ಯಾಪ್‌ಟಾಪ್/ಡೆಸ್ಕಟಾಪ್ ಬಳಸುವುದು ಕಡ್ಡಾಯ.

**"ಝೂಮ್ ವಿಡಿಯೋ ವೆಬಿನಾರ್ ಅಪ್ಲಿಕೇಷನ್" ಕುರಿತು ಮಾಹಿತಿ :**

1. ಸಂಯುಕ್ತ ಸಹಕಾರಿಯ ಸಿಬ್ಬಂದಿ ಹೋಸ್ಟ್/ಆರ್ಗನೈಸರ್ ಆಗಿರುತ್ತಾರೆ. ಕೋ ಹೋಸ್ಟ್ ಜವಾಬ್ದಾರಿಯನ್ನು ಮುಖ್ಯಕಾರ್ಯನಿರ್ವಾಹಕರು/ಅಧ್ಯಕ್ಷರಿಗೆ ನೀಡಲಾಗುತ್ತದೆಯಾದ್ದರಿಂದ ಸಭೆಯ ಕಾರ್ಯಕಲಾಪಗಳ ಪೂರ್ಣ ಜವಾಬ್ದಾರಿ ಕೋ ಹೋಸ್ಟ್‌ನವರದ್ದೆ ಆಗಿರುತ್ತದೆ. ಇವರಿಗೆ ಸ್ಕ್ರೀನ್ ಷೇರಿಂಗ್, ಮ್ಯೂಟ್/ಅನ್‌ಮ್ಯೂಟ್ ಆಯ್ಕೆ ಬಳಸುವ ಮೂಲಕ ಸದಸ್ಯರ ಚರ್ಚೆಗಳ ನಿಯಂತ್ರಣ ಮಾಡುವ ಅಧಿಕಾರವಿರುತ್ತದೆ.

2. ಗರಿಷ್ಠ 1000 ಜನರು ಲಾಗಿನ್ ಐಡಿ/ಲಿಂಕ್ ಬಳಸಿ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಬಹುದು. ಇವರಿಗೆ ಸಭೆಯ ಚರ್ಚೆಗಳನ್ನು ಕೇಳಲು, ಪ್ರಸಂಟೇಶನ್ ನೋಡಲು, ಪೋಲಿಂಗ್ (ವೋಟಿಂಗ್) ಆಯ್ಕೆ ಬಳಸಲು ಅವಕಾಶವಿರುತ್ತದೆ.

3. ಸಹಕಾರಿಯ ಸದಸ್ಯರು ಉತ್ತಮ ಇಂಟರ್ನೆಟ್ ಸೌಲಭ್ಯ ಹೊಂದಿರುವ ಮೊಬೈಲ್/ಲ್ಯಾಪ್‌ಟಾಪ್/ಡೆಸ್ಕಟಾಪ್ ಮೂಲಕ ಆನ್‌ಲೈನ್ ಸಾಮಾನ್ಯ ಸಭೆಯಲ್ಲಿ

ಭಾಗವಹಿಸಬಹುದಾಗಿದೆ.

4. ಚರ್ಚೆಯಲ್ಲಿ ಭಾಗವಹಿಸುವ ಅಥವಾ ಪ್ರಶ್ನೆ ಕೇಳಲು ಇಚ್ಚಿಸುವ ಸದಸ್ಯರು 'ರೈಸ್ ಹ್ಯಾಂಡ್' ಆಯ್ಕೆ ಅಥವಾ 'ಚಾಟ್ ಆಯ್ಕೆ ಬಳಸಬಹುದಾಗಿದ್ದು, ಇವನ್ನು ಗಮನಿಸಿ ಅವರಿಗೆ ಮಾತನಾಡಲು ಕೋ ಹೋಸ್ಟ್ ಇವರು ಅನ್ ಮ್ಯೂಟ್ ಅಥವಾ ಪ್ಯಾನೆಲ್ ಲಿಸ್ಟ್‌ಗೆ ಸೇರ್ಪಡೆ ಮಾಡುವ ಮೂಲಕ ಅವಕಾಶ ನೀಡಬಹುದಾಗಿದೆ. ಪ್ರಶ್ನೆ ಮುಗಿದ ನಂತರ ಅವರನ್ನು ಮ್ಯೂಟ್ ಮಾಡುವುದು ಹಾಗೂ ಪ್ಯಾನೆಲ್ ಲಿಸ್ಟ್‌ನಿಂದ ತೆಗೆದಲ್ಲಿ ಮಾತ್ರ, ಉಳಿದ ಸದಸ್ಯರಿಗೆ ಈ ಅವಕಾಶ ನೀಡಲು ಸಾಧ್ಯವಾಗುತ್ತದೆ. ಈ ಪ್ರಕ್ರಿಯೆಯ ಮೇಲ್ವಿಚಾರಣೆ ಹಾಗೂ ಅವಕಾಶ ಮಾಡಿಕೊಡುವಿಕೆ ಸೌಹಾರ್ದ ಸಹಕಾರಿಯ/ಕೋ ಹೋಸ್ಟ್‌ನ ಜವಾಬ್ದಾರಿಯಾಗಿರುತ್ತದೆ.

5. ಹೋಸ್ಟ್, ಕೋ ಹೋಸ್ಟ್, ಪ್ಯಾನೆಲ್ ಲಿಸ್ಟ್‌ನಲ್ಲಿರುವವರು ಮಾತ್ರ ತಮ್ಮ ಸ್ವಂತ ವಿಡಿಯೋ ಅವಕಾಶ ಬಳಸಬಹುದಾಗಿದೆ, ಹಾಜರಾಗಿರುವ ಉಳಿದ ಸದಸ್ಯರಿಗೆ ವಿಡಿಯೋ ಷೇರಿಂಗ್ ಅವಕಾಶವಿರುವುದಿಲ್ಲ.

6. ಒಟ್ಟಿನಲ್ಲಿ ಝೂಮ್ ವಿಡಿಯೋ ವೆಬಿನಾರ್ ಅಪ್ಲಿಕೇಷನ್' ನಲ್ಲಿ ಹೋಸ್ಟ್, ಕೋ ಹೋಸ್ಟ್, ಪ್ಯಾನೆಲ್ ಲಿಸ್ಟ್‌ನಲ್ಲಿರುವವರ ವಿಡಿಯೋ, ಆಡಿಯೋ ಷೇರಿಂಗ್, ಸ್ಕ್ರೀನ್ ಷೇರಿಂಗ್, ಪ್ರಸಂಟೇಷನ್ ಅವಕಾಶ, ಹೋಸ್ಟ್ ಹಾಗೂ ಕೋ ಹೋಸ್ಟ್‌ಗೆ ಸದಸ್ಯರ ಮ್ಯೂಟ್/ಅನ್‌ಮ್ಯೂಟ್ ಅವಕಾಶ, ಸದಸ್ಯರಿಗೆ ಚಾಟ್, ರೈಸ್ ಹ್ಯಾಂಡ್, ಪೋಲಿಂಗ್ (ವೋಟಿಂಗ್) ಅವಕಾಶ ಹಾಗೂ ಹೋಸ್ಟ್/ಕೋ ಹೋಸ್ಟ್ ಅನುಮತಿಸಿದಲ್ಲಿ ಪ್ರಶ್ನೆ ಕೇಳುವ/ಮಾತನಾಡುವ ಅವಕಾಶವಿರುತ್ತದೆ.

ಈ ಮೇಲ್ಕಂಡ ವಿಷಯಗಳನ್ನು ಗಮನಿಸಿ ಸೌಹಾರ್ದ ಸಹಕಾರಿಗಳು ಅಗತ್ಯ ಕ್ರಮವಿಡುವ ಮೂಲಕ ಆಫ್‌ಲೈನ್ ಅಥವಾ ಆನ್‌ಲೈನ್ ವಾರ್ಷಿಕ ಸಾಮಾನ್ಯ ಸಭೆಯನ್ನು ಡಿಸೆಂಬರ್ 25ರೊಳಗಾಗಿ ನಡೆಸತಕ್ಕದ್ದು ಎನ್ನುವುದನ್ನು ಈ ಮೂಲಕ ತಿಳಿಸಿದೆ.

**ವಂದನೆಗಳೊಂದಿಗೆ,**

(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕ**

**ಗಮನಕ್ಕಾಗಿ :**

1. **ಹೆಚ್ಚಿನ ಮಾಹಿತಿಗೆ ಮೊಬೈಲ್: 8884466708 ಅಥವಾ 8884466707 ನ್ನು ಬೆಳಿಗ್ಗೆ 10.00 ರಿಂದ ಸಂಜೆ 06.00 ಗಂಟೆಯ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.**
2. **ವಾರ್ಷಿಕ ಸಾಮಾನ್ಯ ಸಭೆಯ ತಾಂತ್ರಿಕ ವ್ಯವಸ್ಥೆಯ ನೋಂದಣಿ ನಮೂನೆಯನ್ನು ಲಗತ್ತಿಸಿದ್ದು ಈ ಸೇವೆ ಅಪೇಕ್ಷಿಸುವ ಸೌಹಾರ್ದ ಸಹಕಾರಿಗಳು ಸದರಿ ನಮೂನೆಯನ್ನು ಭರ್ತಿ ಮಾಡಿ ಕಳುಹಿಸುವುದು.**

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 14,757 ಆಗಿರುತ್ತದೆ. ಇವುಗಳ ಪೈಕಿ 7,543 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,214.

**ನವಂಬರ್ ತಿಂಗಳ ಪ್ರಕರಣಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳು 159, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 1022.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,532 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 248 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,114 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1006 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 96 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 433 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ನವೆಂಬರ್ ತಿಂಗಳಿನಲ್ಲಿ 43 ಪ್ರಕರಣ ದಾಖಲಾಗಿರುತ್ತವೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ.ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

www.souharda.coop, Ph: 080–23378375–80, Email:souharda@souharda.coop

## ಸೌಹಾರ್ದ ಸಹಕಾರಿಗಳು ಆನ್‌ಲೈನ್ ವಾರ್ಷಿಕ ಸಭೆ ತಾಂತ್ರಿಕ ಸೇವೆಗಾಗಿ ಸಂಯುಕ್ತ ಸಹಕಾರಿಯಲ್ಲಿ ನೋಂದಣಿ ಅರ್ಜಿ

| | |
|---|---|
| ಸಹಕಾರಿಯ ಹೆಸರು & ವಿಳಾಸ<br><br><br>ಇ ಮೇಲ್ ಐಡಿ : | ಅಧ್ಯಕ್ಷರ ವಿವರ<br>ಹೆಸರು :<br>ಇ ಮೇಲ್ ಐಡಿ :<br>ವಾಟ್ಸ್ ಆಪ್ ಮೊಬೈಲ್ ಸಂಖ್ಯೆ : |
| ಕೋ ಹೋಸ್ಟ್ ಅಧಿಕಾರ ನೀಡಬೇಕಾದ ವ್ಯಕ್ತಿಯ ಹೆಸರು :<br>ಸಹಕಾರಿಯಲ್ಲಿನ ಹುದ್ದೆ :<br>ಇ ಮೇಲ್ ಐಡಿ :<br>ಮೊಬೈಲ್ ಸಂಖ್ಯೆ : | ಮುಖ್ಯಕಾರ್ಯನಿರ್ವಾಹಕರ ವಿವರ<br>ಹೆಸರು :<br>ಇ ಮೇಲ್ ಐಡಿ :<br>ವಾಟ್ಸ್ ಆಪ್ ಮೊಬೈಲ್ ಸಂಖ್ಯೆ : |
| ಆನ್‌ಲೈನ್ ವಾರ್ಷಿಕ ಸಾಮಾನ್ಯ ಸಭೆ ನಡೆಸುವ ದಿನಾಂಕ: | ಆನ್‌ಲೈನ್ ಸಭೆಗೆ ಹಾಜರಾಗಬಹುದಾದ ಸದಸ್ಯರ ಸಂಖ್ಯೆ |
| ಆನ್‌ಲೈನ್ ವಾರ್ಷಿಕ ಸಾಮಾನ್ಯ ಸಭೆ ಕುರಿತು ಚರ್ಚಿಸಿದ ಆಡಳಿತ ಮಂಡಳಿ ಸಭೆಯ ದಿನಾಂಕ :<br>ವಿಷಯ/ನಿರ್ಣಯ ಸಂಖ್ಯೆ : (ಲಗತ್ತಿಸುವುದು) | |
| ಗಮನಕ್ಕೆ : ಸಂಯುಕ್ತ ಸಹಕಾರಿಯಿಂದ ಸೇವಾ ಅನುಮತಿ ದೊರೆತ ನಂತರ ರೂ.5000/– ಗಳನ್ನು ಸಂಯುಕ್ತ ಸಹಕಾರಿಗೆ ಎನ್ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು. ಬ್ಯಾಂಕ್ ಖಾತೆ ವಿವರ :<br>**Name : Karnataka State Souharda Federal Cooperative Ltd., Bangalore**<br>**Account No. : 918020029522440** **IFSC Code : UTIB0000559**<br>**Bank : Axis Bank** **Branch : Rajaji Nagar** | |

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಆನ್‌ಲೈನ್ ವಾರ್ಷಿಕ ಸಾಮಾನ್ಯ ಸಭೆಯ ತಾಂತ್ರಿಕ ಸೇವೆ ಪಡೆಯಲು, ಸಂಯುಕ್ತ ಸಹಕಾರಿಯಿಂದ ನೀಡಲಾದ ಸುತ್ತೋಲೆ ಸಂಖ್ಯೆ : ಸಂಸ/ಆ.ವಾ.ಸ/ಸು–01/2020–21, ದಿನಾಂಕ : 18.11.2020 ಇದರಲ್ಲಿನ ಎಲ್ಲ ವಿವರ, ನಿಬಂಧನೆಗೊಳಪಟ್ಟು ................................................................................ಸೌಹಾರ್ದ ಸಹಕಾರಿ ನಿ., ಆದ ನಾವು ಸಿದ್ಧರಿರುತ್ತೇವೆ ಎಂದು ಈ ಮೂಲಕ ಪ್ರಮಾಣೀಕರಿಸಿ ದೃಢೀಕರಿಸಿದೆ.

**ಅಧ್ಯಕ್ಷರ ಸಹಿ** **ಮುಖ್ಯಕಾರ್ಯನಿರ್ವಾಹಕರ ಸಹಿ**

**ಸಹಕಾರಿಯ ಮೊಹರು**

# ಅವ್ಯವಹಾರ ಮಾಡಿರುವ ಸೌಹಾರ್ದ ಸಹಕಾರಿಗಳ ಮೇಲೆ ಜರುಗಿಸಿದ ಕಾನೂನು ಕ್ರಮಗಳು

**1. ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು (ಬಿಜಿಯು–0056) :**

ಶ್ರೀ ಕಣ್ವ ಸೌಹಾರ್ದ ಕೋ–ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದು ಠೇವಣಿದಾರರಿಗೆ ಠೇವಣಿ ಮರುಪಾವತಿ ಮಾಡದಿರುವ ಹಿನ್ನೆಲೆಯಲ್ಲಿ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಪರಿಶೀಲಿಸಲು ಸಹಕಾರಿಯ ಪರಿವೀಕ್ಷಣೆಗೆ ಸಂಯುಕ್ತ ಸಹಕಾರಿಯಿಂದ ಪರಿವೀಕ್ಷಣಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. ನಂತರದಲ್ಲಿ ಪರಿವೀಕ್ಷಣಾಧಿಕಾರಿಗಳು ಪರಿವೀಕ್ಷಣಾ ವರದಿಯನ್ನು ದಿನಾಂಕ 02.10.2019 ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಸಹಕಾರಿಯಲ್ಲಿ ಕಂಡುಬಂದ ಗಂಭೀರ ಹಣಕಾಸು ಅಕ್ರಮ/ವಂಚನೆ ಎಸಗಿರುವುದರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 25ರಡಿ ಸಹಕಾರಿಯ ನಿರ್ದೇಶಕರನ್ನು ಅನರ್ಹಗೊಳಿಸಿ ದಿನಾಂಕ 07.02.2020 ವಿಶೇಷಾಧಿಕಾರಿಯನ್ನು ನೇಮಕಮಾಡಲಾಯಿತು. ಹಾಗೂ ದಿನಾಂಕ 08.03.2020 ಪತ್ರಿಕಾ ಪ್ರಕಟಣಾ ಮೂಲಕ ಸಾರ್ವಜನಿಕರಿಗೆ ಸದರಿ ಸಹಕಾರಿಯ ಆಸ್ತಿಗಳನ್ನು ಖರಿದಿಸದಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ. ಹಾಗೂ ಸಂಯುಕ್ತ ಸಹಕಾರಿಯಿಂದ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಲಯ (441) ಅಧಿಭಾರ ಪ್ರಕರಣ ದಾಖಲಿಸಿ ನಿರ್ದೇಶಕರ 10 ಆಸ್ತಿಗಳನ್ನು ಆದೇಶ ಪೂರ್ವ ಜಪ್ತಿ ಆದೇಶ ಪಡೆಯಲಾಗಿದೆ. ಕಣ್ವ ಸಮೂಹಕ್ಕೆ ಸೇರಿದ ಆಸ್ತಿಗಳ ಪರಭಾರೆ ತಪ್ಪಿಸಲು ಲಭ್ಯ ಆಸ್ತಿಗಳ ಪಟ್ಟಿ ಹಾಗೂ ನಿರ್ದೇಶಕರ ಪಟ್ಟಿಯೊಂದಿಗೆ ಬೆಂಗಳೂರು ನಗರ, ಗ್ರಾಮಾಂತರ, ತುಮಕೂರು ಚಿಕ್ಕಬಳ್ಳಾಪುರ ಹಾಗೂ ಮಂಡ್ಯ ಜಿಲ್ಲೆಗಳ ಉಪನೋಂದಣಾಧಿಕಾರಿಗಳಿಗೆ ಹಾಗೂ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸಂಯುಕ್ತ ಸಹಕಾರಿಯಿಂದ ಪತ್ರ ಬರೆಯಲಾಗಿರುತ್ತದೆ.

ಠೇವಣಿದಾರರ ದೂರಿನ ಹಿನ್ನೆಲೆಯಲ್ಲಿ ಬಸವೇಶ್ವರ ನಗರ ಪೋಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಸಹಕಾರಿಯ ಕೇಂದ್ರ ಕಛೇರಿಯು ಸದರಿ ಪ್ರಕರಣದಲ್ಲಿ ಪೋಲೀಸರಿಂದ ಜಪ್ತಿಯಾಗಿರುತ್ತದೆ. ಆ ನಂತರ ಪ್ರಕರಣ ಸಿಸಿಬಿ ಗೆ ವರ್ಗಾವಣೆಯಾಗಿರುತ್ತದೆ. ಇದೇ ರೀತಿ ವರ್ತೂರು, ಬಾಣಸವಾಡಿ ಸೇರಿದಂತೆ ಅನೇಕ ಪೋಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿರುತ್ತವೆ. ಪ್ರಸ್ತುತ ರಾಜ್ಯ ಸರ್ಕಾರವು ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿರುತ್ತದೆ.

ಸಂಯುಕ್ತ ಸಹಕಾರಿಯ ಮನವಿ ಮೇರೆಗೆ ಕರ್ನಾಟಕ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004 ರಡಿ ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿಯವರನ್ನು ಸರ್ಕಾರವು ಸಕ್ಷಮ ಪ್ರಾಧಿಕಾರ ಎಂದು ದಿನಾಂಕ 16.05.2020 ರಂದು ನೇಮಕ ಮಾಡಿರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳ ಸೂಚನೆಯಂತೆ ಸಹಕಾರಿಯ ಪರಿವೀಕ್ಷಣಾ ವರದಿ, ಎಲ್ಲಾ ಬ್ಯಾಂಕ್ ಖಾತೆಗಳ ವಿವರ, ಎಲ್ಲಾ ನಿರ್ದೇಶಕರ ವಿವರ, ಎಲ್ಲಾ ಶಾಖೆಗಳ ವಿವರ, ಕಣ್ವ ಸಮೂಹದ ಎಲ್ಲಾ ಕಂಪನಿಗಳ ವಿವರ, ಕಣ್ವ ಸಮೂಹದ ಹಾಗೂ ಅದರ ನಿರ್ದೇಶಕರುಗಳಿಗೆ ಸಂಬಂಧಿಸಿದ ಆಸ್ತಿಗಳ (ಒಟ್ಟು 172 ಆಸ್ತಿಗಳು) ವಿವರ ಇತ್ಯಾದಿಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲಾಗಿದೆ. ಹಾಗೂ ಸಹಕಾರಿಯ ಅಕ್ರಮಗಳ ಕುರಿತು ಜಾರಿ ನಿರ್ದೇಶನಾಲಯದಿಂದ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮದಡಿ ಸಕ್ಷಮ ಪ್ರಾಧಿಕಾರ ನೇಮಕವಾಗಿದ್ದು, ಸಂಸ್ಥೆಯ ಎಲ್ಲಾ ದಾಖಲೆಗಳು/ಆಸ್ತಿಗಳು ಸಕ್ಷಮ ಪ್ರಾಧಿಕಾರದ ವಶಕ್ಕೆ ಹೋಗಿರುತ್ತದೆ. 4 ಪೋಲೀಸ್ ಠಾಣೆಗಳಲ್ಲಿ ಒಟ್ಟು 7 ಪ್ರಕರಣಗಳು ದಾಖಲಾಗಿದ್ದು, ಕ್ರಿಮಿನಲ್ ಪ್ರಕರಣಗಳ ಕುರಿತು ಸಿಐಡಿ ವಿಚಾರಣೆ ನಡೆಸುತ್ತಿದೆ. ಉಚ್ಛ ನ್ಯಾಯಾಲಯದಲ್ಲಿ ಎರಡು ರಿಟ್ ಅರ್ಜಿಗಳು ಸೇರಿದಂತೆ ಒಟ್ಟಾರೆ 6 ಪ್ರಕರಣಗಳ ವಿಚಾರಣೆ ನಡೆಯುತ್ತಿದೆ. ಗ್ರಾಹಕ ಸಂರಕ್ಷಣಾ ನ್ಯಾಯಾಲಯದಲ್ಲಿ 3 ವ್ಯಾಜ್ಯ ದಾಖಲಾಗಿರುತ್ತದೆ. ಸೌಹಾರ್ದ ನ್ಯಾಯಾಲಯದಲ್ಲಿ ಅಧಿಭಾರ ಅರ್ಜಿ ದಾಖಲಾಗಿದ್ದು ವಿಚಾರಣೆ ನಡೆಯುತ್ತಿದೆ. ಸೌಹಾರ್ದ ಕಾಯ್ದೆ ಕಲಂ 35 ರಡಿ ಶಾಸನಬದ್ಧ ವಿಚಾರಣೆ ಸಹ ನಡೆಯುತ್ತಿದೆ. ಮುಂದುವರೆದು ಸಹಕಾರಿಯ 2016–17 ರಿಂದ 2018–19 ವರೆಗಿನ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋದನೆಗಾಗಿ ಶ್ರೀಮತಿ ಸಾಧನಾ ಗಾಂವಕರ ಸಹಕಾರಿಗಳ ಲೆಕ್ಕಪರಿಶೋಧನಾ ಜಂಟಿ ನಿಬಂಧಕರು, ಬೆಂಗಳೂರು ಜಿಲ್ಲೆ ಇವರನ್ನು ಸಹಕಾರ ಲೆಕ್ಕಪರಿಶೋಧನಾ ಇಲಾಖೆಯಿಂದ ದಿನಾಂಕ 31.07.2020 ರಂದು ನೇಮಕ ಮಾಡಿ ಆದೇಶ ಮಾಡಿರುತ್ತಾರೆ.

**2. ಶ್ರೀ ಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋಆಪರೇಟಿವ್ ಲಿ., ಬೆಂಗಳೂರು(ಬಿಜಿಯು–0280)**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಾಯ್ದೆ ಕಲಂ 53(7)(ಯು)ರಡಿಯಲ್ಲಿ ಪರಿವೀಕ್ಷಣೆಗೆ ಆದೇಶಿಸಲಾಗಿತ್ತು ಸದರಿ ಪರಿವೀಕ್ಷಣೆಯಲ್ಲಿನ ಕಂಡುಬಂದ ಅಕ್ರಮದ ಕುರಿತು ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರನ್ನು ಅನರ್ಹಗೊಳಿಸಿ ಸಹಕಾರಿಗೆ ದಿನಾಂಕ 11.06.2020 ರಂದು ವಿಶೇಷಾಧಿಕಾ–ರಿಯನ್ನು ನೇಮಕಮಾಡಿ ಅದೇಶ ಮಾಡಲಾಗಿರುತ್ತದೆ. ಹಾಗೂ ದಿನಾಂಕ 03.07.2020 ರಂದು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಶ್ರೀ ಗುರು ಸಾರ್ವಭೌಮ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಕೆ.ಪಿ.ಐ.ಡಿ ಕಾಯ್ದೆ 2004 ರಡಿಯಲ್ಲಿ ಸಕ್ಷಮ ಪ್ರಾಧಿಕಾರವನ್ನು ನೇಮಕ ಮಾಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿರುತ್ತದೆ. ಅದರಂತೆ ದಿನಾಂಕ 23.07.2020 ರಂದು ಕರ್ನಾಟಕ ಸರ್ಕಾರವು ಶ್ರೀ ಗುರು ಸಾರ್ವಭೌಮ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಗೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಸಂರಕ್ಷಣೆ ಅಧಿನಿಯಮ 2004 ರಡಿಯಲ್ಲಿ 'ಮಾನ್ಯ ವ್ಯವಸ್ಥಾಪಕ

ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ಬೆಂಗಳೂರು ಇವರನ್ನು ಸಕ್ಷಮ ಪ್ರಾಧಿಕಾರವನ್ನಾಗಿ ನೇಮಕ ಮಾಡಲಾಗಿದೆ.

ಸಹಕಾರಿಯು ಜುಲೈ ಮಾಹೆಯಲ್ಲಿ ಸಹಕಾರಿಯು 8 ಸಾಲದ ಖಾತೆಗಳಿಂದ ಒಟ್ಟು ರೂ. 4,48,000/-ಗಳಷ್ಟು ಸಾಲವನ್ನು ವಸೂಲಾತಿಗೆ ಸಂಯುಕ್ತ ಸಹಕಾರಿಯಿಂದ ನೇಮಕವಾದ ವಿಶೇಷಾಧಿಕಾರಿಗಳು ಕ್ರಮವಿಟ್ಟು ಸಾಲ ವಸೂಲಾತಿಯನ್ನು ಮಾಡಿರುತ್ತಾರೆ, ಸಹಕಾರಿಯ ವಿಚಾರಣೆಯು ಸಿ.ಐ.ಡಿಯಿಂದ ವಿಚಾರಣೆ ನಡೆಸಿದ್ದು ವಿಚಾರಣೆಗೆ ವಿಶೇಷಾಧಿಕಾರಿಗಳು ಸಹಕರಿಸಲಾಗಿತ್ತಿದ್ದು ಮತ್ತು ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲಾಗುತ್ತಿದೆ ಅದೇ ರೀತಿಯಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ವಿಚಾರಣೆಯು ಜಾರಿಯಲ್ಲಿರುತ್ತದೆ. ಅವರಿಗೂ ಸಹ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸಲಾಗುತ್ತಿದೆ.

ಸಹಕಾರಿಯ 2019-20ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲು ಕ್ರಮವಿಡಲಾಗಿದೆ. ಸಹಕಾರಿಯಲ್ಲಿನ ಹಣಕಾಸಿನ ಅವ್ಯವಹಾರಗಳ ಕುರಿತು ಹಾಗೂ ಸಹಕಾರಿಯ ಹೆಸರಿನಲ್ಲಿ ಖರೀಧಿಸಿದ ಆಸ್ತಿಗಳ ಕುರಿತು ಯಾವುದೇ ಮಾಹಿತಿಯು ಸಹಕಾರಿಯ ಪ್ರಾರಂಭದಿಂದ ಇಲ್ಲಿಯವರೆಗಿನ ಲೆಕ್ಕ ಪರಿಶೋಧನೆಯಲ್ಲಿ ಕಂಡುಬರದ ಹಿನ್ನೆಲೆಯಲ್ಲಿ ಸದರಿ ಸಹಕಾರಿಯ 2015-16ನೇ ಸಾಲಿನಿಂದ 2018-19ನೇ ಸಾಲಿನ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆ ಕಾರ್ಯ ಚಾಲ್ತಿಯಲ್ಲಿರುತ್ತದೆ.

ಸಂಯುಕ್ತ ಸಹಕಾರಿಯಿಂದ ನೇಮಕವಾದ ವಿಶೇಷಾಧಿಕಾರಿಯು ಸಹಕಾರಿಯ ಚುನಾವಣೆಗಾಗಿ ಸಂಬಂಧಿಸಿದ ಸಹಕಾರ ಚುನಾವಣಾಧಿಕಾರಿಗಳಿಗೆ ದಿನಾಂಕ 24.11.2020 ರಂದು ಪತ್ರ ಬರೆದು ಕ್ರಮವಿಟ್ಟಿರುತ್ತಾರೆ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸಲು ವಿಶೇಷಾಧಿಕಾರಿಯು ಕ್ರಮವಿಟ್ಟಿರುತ್ತಾರೆ.

### 3. ಎಸ್.ಎಮ್.ಎನ್. ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ (ಬಿಜೆಪಿ-0075)

ಸಹಕಾರಿಯ ವಿರುದ್ದ ಠೇವಣಿದಾರರ ದೂರು ಸಂಯುಕ್ತ ಸಹಕಾರಿಗೆ ಸ್ವೀಕೃತಿಯಾದ ಹಿನ್ನಲೆಯಲ್ಲಿ ಸಹಕಾರಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಾಯ್ದೆ ಕಲಂ 53(7)(ಯು)ರಡಿಯಲ್ಲಿ ಪರಿವೀಕ್ಷಣೆಗೆ ಆದೇಶಿಸಲಾಗಿದೆ. ಸಹಕಾರಿಯ ಒಟ್ಟು 16 ನಿರ್ದೇಶಕರ ಪೈಕಿ 13 ಜನ ನಿರ್ದೇಶಕರು ರಾಜೀನಾಮೆ ನೀಡಿರುವುದರಿಂದ ಸಹಕಾರಿಯಲ್ಲಿ ಆಡಳಿತ ಮಂಡಳಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆಗಿಂತ ಕಡಿಮೆಯಾಗಿರುವುದರಿಂದ ಸಂವಿಧಾನಿಕ ಬಿಕ್ಕಟ್ಟು ಉಂಟಾಗಿರುವುದರಿಂದ ಸಂಯುಕ್ತ ಸಹಕಾರಿಯಿಂದ ವಿಶೇಷಾಧಿಕಾರಿಯವರನ್ನು ನೇಮಕ ಮಾಡಲಾಗಿತ್ತು. ಚುನಾವಣೆಗೆ ಯಾವುದೇ ನಾಮಪತ್ರ ಬಾರದ ಹಿನ್ನಲೆಯಲ್ಲಿ ಚುನಾವಣೆಯು ಜರುಗಿರುವುದಿಲ್ಲ.

ಪ್ರಸ್ತುತ ಮಾನ್ಯ ಸಹಕಾರಿಗಳ ಸಂಯುಕ್ತ ನಿಬಂಧಕರು, ಬೆಳಗಾವಿ ಇವರ ಆದೇಶ ಸಂಖ್ಯೆ:ಜೆಆರ್‌ಎಲ್/ಬಿ/ಸಿಆರ್-31/2019-20ರ ಮೂಲಕ ಮಾನ್ಯ ಸಹಕಾರಿಗಳ ಉಪ ನಿಬಂಧಕರು, ವಿಜಯಪುರ ಜಿಲ್ಲೆ, ಇವರನ್ನು ಸಹಕಾರಿಗೆ ವಿಚಾರಣಾಧಿಕಾರಿಯಾಗಿ ನೇಮಕ ಮಾಡಿರುತ್ತಾರೆ.

ವಿಚಾರಣಾಧಿಕಾರಿಗಳು ತಮ್ಮ ವರಧಿ ಸಲ್ಲಿಸಿದ್ದು ಸದರಿ ವರಧಿಯಲ್ಲಿ ದುರುಪಯೋಗವಾದ ಹಣದ ವಸೂಲಿಗಾಗಿ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಾಯ್ದೆ ಕಲಂ 37ರಂತೆ ಕ್ರಮವಿಟ್ಟು, ಸದರಿ ಆಪಾದಿತರ ಸ್ಥಿರಾಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ವಸೂಲಿಯ ಕ್ರಮ ಜರುಗಿಸಲು ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 44ರ ಮೇರೆಗೆ ಕ್ರಮವಿಡಲು ಸೂಚಿಸಿ ಸದರಿ ವಿಚಾರಣಾ ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಈ ಹಿನ್ನಲೆಯಲ್ಲಿ ದಿನಾಂಕ: 08.09.2020 ರಂದು ವಿಜಯಪುರ ನಗರದ ಗಾಂಧಿ ಚೌಕ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. (ಎಫ್.ಐ.ಆರ್ ಸಂಖ್ಯೆ: 145/2020), ವಿಚಾರಣಾ ವರದಿಯಲ್ಲಿ ಉಲ್ಲೇಖವಾದ ಆರೋಪಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ ಈ ಎಲ್ಲ ಹಣಕಾಸು ಅಪರಾಧ ಪ್ರಕರಣಗಳ ಹಿನ್ನಲೆಯಲ್ಲಿ ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿದಾರರ ಹಿತರಕ್ಷಣಾ ಕಾಯ್ದೆ 2004 ರಂತೆ "ಸಕ್ಷಮ ಪ್ರಾಧಿಕಾರ" (ಕಾಂಪಿಟೆಂಟ್ ಅಥಾರಿಟಿ)ವನ್ನು ನೇಮಕ ಮಾಡಲು ಮಾನ್ಯ ಸಹಕಾರಿಗಳ ನಿಬಂಧಕರಿಗೆ ಪತ್ರ ಬರೆದು ಕ್ರಮವಿಡಲಾಗಿದೆ.

ಮುಂದುವರೆದು ಸಹಕಾರಿಯ ವಿಚಾರಣಾ ವರದಿಯಲ್ಲಿ ತಿಳಿಸಿರುವಂತೆ, ಸಹಕಾರಿಯ ಹಾಲಿ ಆಡಳಿತ ಮಂಡಳಿ, ಹಿಂದಿನ ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಸಹಕಾರಿಯ ವ್ಯವಸ್ಥಾಪಕರು, ಸಿಬ್ಬಂಧಿಗಳಿಗೆ ಮತ್ತು ಸಹಕಾರಿಯ ಪದಾಧಿಕಾರಿಗಳಿಗೆ ಅಧಿಭಾರ ಪ್ರಕರಣದ ಕುರಿತು ದಿನಾಂಕ: 16.10.2020 ರಂದು ಅಧಿಭಾರ ಪ್ರಕರಣದ ಕುರಿತು ನೋಟಿಸ್ ಕಳುಹಿಸಿ ಕ್ರಮವಿಡಲಾಗಿದೆ ಹಾಗೂ ದಿನಾಂಕ 30.11.2020 ರಂದು ಪ್ರಕರಣವನ್ನು ಜಾರಿ ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡುವ ಕುರಿತು ಮಾನ್ಯ ಸಹಕಾರಿಗಳ ನಿಬಂಧಕರಿಗೆ ಪತ್ರ ಬರೆದು ಕ್ರಮವಿಡಲಾಗಿದೆ.

### 4. ಶ್ರೀ ಬಸವೇಶ್ವರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ (ಬಿಜಿಎಮ್-0473)

ಸಹಕಾರಿಯು ಠೇವಣಿದಾರ ಠೇವಣಿ ಮೊತ್ತವನ್ನು ಮರುಪಾವತಿಸದ ಕುರಿತು ಹಲವಾರು ದೂರಗಳು ಸಂಯುಕ್ತ ಸಹಕಾರಿಗೆ ಸಲ್ಲಿಕೆಯಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಪರಿಶೀಲಿಸಲು ಸಹಕಾರಿಯ ಪರಿವೀಕ್ಷಣೆಗೆ ಸಂಯುಕ್ತ ಸಹಕಾರಿಯಿಂದ ಪರಿವೀಕ್ಷಣಾಧಿಕಾರಿಯನ್ನು ನೇಮಕ ಮಾಡಲಾಗಿತ್ತು. ನಂತರದಲ್ಲಿ ಪರಿವೀಕ್ಷಣಾಧಿಕಾರಿಗಳು ಪರಿವೀಕ್ಷಣಾ ವರದಿಯನ್ನು ದಿನಾಂಕ 02.11.2018 ರಂದು ಸಲ್ಲಿಸಿರುತ್ತಾರೆ. ನಂತರದಲ್ಲಿ

ಪರಿವೀಕ್ಷಣಾ ವರದಿಯ ಆಧಾರದ ಮೇಲೆ ಚಿಕ್ಕೋಡಿ ಪೋಲಿಸ ಠಾಣೆಯಲ್ಲಿ ಫಿರ್ಯಾದನ್ನು ದಾಖಲಿಸಲು ಹಲವಾರು ಬಾರಿ ಪ್ರಯತ್ನಿಸಿದರೂ, ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಳ್ಳದ ಹಿನ್ನೆಲೆಯಲ್ಲಿ ಸಹಕಾರಿಯ ವಿರುದ್ಧ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 68 ಮತ್ತು ಅಪರಾಧಿಕಾ ದಂಡ ಸಂಹಿತೆ ಕಲಂ 200ರಡಿಯಲ್ಲಿ ಖಾಸಗಿ ಫಿರ್ಯಾದನ್ನು ನ್ಯಾಯಾಲಯದ ಮೂಲಕ ದಾಖಲಿಸಲಾಗಿರುತ್ತದೆ. ಪ್ರಕರಣ ಸಂಖ್ಯೆ:238/2019 ಆಗಿರುತ್ತದೆ. ಪ್ರಸ್ತುತ ದಿನಾಂಕ 30.10.2019 ರಂದು ಮಾನ್ಯ ಸಹಕಾರಿಗಳ ಉಪ ನಿಬಂಧಕರು, ಬೆಳಗಾವಿ ಇವರು ಸಹಕಾರಿಯ ಶಾಸನಬದ್ಧ ವಿಚಾರಣೆಗೆ ವಿಚಾರಣಾಧಿಕಾರಿಯನ್ನು ನೇಮಕ ಮಾಡಿ ಆದೇಶಿಸಿರುತ್ತಾರೆ. ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು ಸಲ್ಲಿಸದಿರುವುದಿಲ್ಲ ಹಾಗೂ ಸಹಕಾರಿಯು ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದರಿಂದ, ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಲ್ಲಿ ಗೊತ್ತುಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ನಡೆಸದಿದ್ದರೇ ಮುಂದಿನ ಆಡಳಿತ ಮಂಡಲಿಗೆ ನಿರ್ದೇಶಕರಾಗಿ ಚುನಾಯಿತನಾಗಲು ಅಥವಾ ನಿರ್ದೇಶಕರಾಗಿ ಮುಂದುವರೆಯಲು ಅನರ್ಹರಾಗುತ್ತಾರೆ. ಸದರಿ ಎಲ್ಲಾ ಕಾರಣಗಳಿಂದ ಸದರಿ ಸಹಕಾರಿಯ ಆಡಳಿತ ಮಂಡಲಿಯ ಎಲ್ಲ ಸದಸ್ಯರನ್ನು ಅನರ್ಹಗೊಳಿಸಿ, ವಿಶೇಷಾಧಿಕಾರಿಯನ್ನು ದಿನಾಂಕ 30.01.2020 ರಂದು ಆದೇಶದ ಮೂಲಕ ಶ್ರೀ ಪ್ರವೀಣ ಕಾಂಬಳೆ, ವಕೀಲರು, ಬೆಳಗಾವಿ ಇವರನ್ನು ನೇಮಕ ಮಾಡಲಾಗಿರುತ್ತದೆ. ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸಭೆಯ ನಿರ್ಣಯದನುಸಾರ ಪ್ರಕರಣದ ಕುರಿತು ಕ್ರಮ ಜರುಗಿಸಲು ಜಾರಿ ನಿರ್ದೇಶನಾಲಯಕ್ಕೆ ಶಿಫಾರಸ್ಸು ಮಾಡಿ ಕ್ರಮವಿಡಲಾಗಿದೆ.

**5. ಬೆಳ್ಳಿ ಬೆಳಕು ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಟಿ.ದಾಸರಹಳ್ಳಿ, ಬೆಂಗಳೂರು.(ಬಿಜಿಯು-0273)**

ಸದರಿ ಸಹಕಾರಿಯ ಕುರಿತಂತೆ ಠೇವಣಿದಾರರ ದೂರುಗಳು ಸಂಯುಕ್ತ ಸಹಕಾರಿಗೆ ಸ್ವೀಕೃತಗೊಂಡ ಹಿನ್ನಲೆಯಲ್ಲಿ ಸಹಕಾರಿಗೆ ಠೇವಣಿದಾರರ ಮನವಿ ಪರಶೀಲಿಸಿ ಠೇವಣಿ ಮೊತ್ತವನ್ನು ಮರುಪಾವತಿಸಲು ಪತ್ರಗಳ ಮುಖೇನ ನಿರ್ದೇಶನ ನೀಡಲಾಗಿತ್ತು. ಅದಾಗ್ಯೂ ಸಹಕಾರಿಯಿಂದ ಯಾವುದೆ ಕ್ರಮವಿಡದ ಹಿನ್ನಲೆಯಲ್ಲಿ ಸಂಯುಕ್ತ ಸಹಕಾರಿಯಿಂದ ಬಾಗಲಗುಂಟೆ ಪೊಲೀಸ್ ಠಾಣೆ, ಬೆಂಗಳೂರು-73ರಲ್ಲಿ ದಿನಾಂಕ 06.11.2020ರಂದು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಮತ್ತು ಹಿಂದಿನ ಹಾಗೂ ಹಾಲಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.

ಸದರಿ ಸಂಯುಕ್ತ ಸಹಕಾರಿಯ ದೂರಿನ ಮೇರೆಗೆ ಬಾಗಲಗುಂಟೆ ಪೊಲೀಸ್ ಠಾಣೆ ಮೊ.ಸಂ.302/2020 ಕಲಂ 406,415,417,419,420,465,467, 470,471,477(ಎ) ಸಹಿತ 149 ಐಪಿಸಿ ರೀತ್ಯಾ ಪ್ರಕರಣ ದಾಖಲಗೊಂಡು ತನಿಖೆ ಪ್ರಗತಿಯಲ್ಲಿದೆ.

## ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಯ 13ನೇ ಸಾಮಾನ್ಯ ಸಭೆ

## ಸದಸ್ಯರ ಭಾಗವಹಿಸುವುದರಿಂದ ಸಹಕಾರಿ ಬೆಳವಣಿಗೆ ಸಾಧ್ಯ - ವಾಯ್.ಟಿ. ಪಾಟಿಲ್

**ಯಾದಗಿರಿ :** ದಿನಾಂಕ 06.11.2020 ರಂದು ಕೆಂಭಾವಿ ನಗರದ ಹೆಮ್ಮರೆಡ್ಡಿ ಮಲ್ಲಮ್ಮ ಸಭಾ ಭವನದಲ್ಲಿ ಆಯೋಜಿಸಿದ ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ., ಕೆಂಭಾವಿ ಇದರ 13ನೇ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಸಹಕಾರಿಯ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ವಾಯ್.ಟಿ.ಪಾಟೀಲ್ ಇವರು ಉದ್ಘಾಟಿಸಿ ಮಾತನಾಡಿದರು. ಸಹಕಾರಿಯ ಬೆಳವಣಿಗೆ ಸದಸ್ಯರ ವ್ಯವಹಾರದ ಮೇಲೆ ಆಧರಿಸಿದೆ, ತಾವು ಹೆಚ್ಚಿನ ವ್ಯವಹಾರವನ್ನು ಸಹಕಾರಿಯ ಮೂಲಕ ಮಾಡಿದಾಗ ಅದರ ಲಾಭ ಎಲ್ಲ ಸದಸ್ಯರಿಗೆ ಬರುತ್ತದೆ ತಾವು ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಸಹಕಾರಿಯ ಅಭಿವೃದ್ಧಿಗೆ ಸಹಕರಿಸಲು ಕೊರಿದರು.

ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಾಂತಗೌಡ ಎಮ್. ಬಿರಾದರ ಇವರು ಮಾತನಾಡಿ ಕಳೆದ 13 ವರ್ಷಗಳಿಂದ ಸಹಕಾರಿಯು ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡುತ್ತಿದೆ ಇದಕ್ಕೆ ಕಾರಣರಾದ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದ ಶ್ರಮ ಅಡಗಿದೆ ಎಂದು ನುಡಿದರು. ಸದಸ್ಯರು ತಾವು ಹೆಚ್ಚಿನ ಠೇವಣಿಗಳನ್ನು ಸಹಕಾರಿಗೆ ನೀಡುವ ಮೂಲಕ ಸಾಲ ಸೌಲಭ್ಯಗಳಿಂದ ವಂಚಿತರಾದ ಸದಸ್ಯರಿಗೆ ಅನುಕೂಲಮಾಡಿಕೊಡಲು ಮನವಿ ಮಾಡಿದರು.

ಸಾಮಾನ್ಯ ಸಭೆಯ ವೇದಿಕೆಯ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಶರಣಬಸಪ್ಪ ದಿಗ್ಗಾವಿ, ನಿರ್ದೇಶಕರಾದ ಶ್ರೀ ರವಿಂದ್ರ ಧರಿ, ರಾಮನಗೌಡ ಎಸ್. ಹೂನ್ನಗನೂರ, ಶ್ರೀ ಮಲ್ಲನಗೌಡ ಪಾಟೀಲ್, ಶ್ರೀ ಕನಕಪ್ಪ ಹೂನ್ನಗನೂರ, ಶ್ರೀ ಯಂಕೊಬಾ ನಾಯಕ್, ಶ್ರೀ ಮಲ್ಲರೆಡ್ಡಿ ಹತ್ತಿಕುಣಿ, ಶ್ರೀ ಅಯ್ಯನಗೌಡ ಲಕ್ಕುಂಡಿ, ಶ್ರೀಮತಿ ನಿಲಮ್ಮ ಗಂಡ ರಾಜಶೇಖರ, ಶ್ರೀಮತಿ ಸುರೇಖಾ ಗಂಡ ಸಿದ್ದನಗೌಡ ಸಹಕಾರಿಯ ಸದಸ್ಯರು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸಿದ್ದನಗೌಡ ಎಸ್.ಪಾಟೀಲ್, ಸ್ವಾಗತಿಸಿ ವಂದಿಸಿದರು.

## ಉದ್ಘಾಟನೆ




**ಚಿತ್ರದುರ್ಗ:** ದಿನಾಂಕ 27.11.2020 ರಂದು ಹೊಯ್ಸಳ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ. ಇದರ ನೂತನ ಕಟ್ಟಡದ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಬೆಳಿಗ್ಗೆ 10.30ಕ್ಕೆ ಚಳ್ಳಕೆರೆ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ಜಿ.ಎಂ. ಸಿದ್ದೇಶ್ವರ್, ಮಾನ್ಯ ಸಂಸದರು ಹಾಗೂ ಮಾಜಿ ಕೇಂದ್ರ ಸಚಿವರು, ಭಾರತ ಸರ್ಕಾರ. ಶ್ರೀ ಡಿ. ಸುಧಾಕರ್, ಮಾಜಿ ಸಚಿವರು, ಕರ್ನಾಟಕ ಸರ್ಕಾರ. ಹಾಗೂ ಹಾಲಿ ಸಿ.ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ. ರಘುಮೂರ್ತಿ, ಜನಪ್ರಿಯ ಶಾಸಕರು, ಚಳ್ಳಕೆರೆ ವಿಧಾನ ಸಭಾ ಕ್ಷೇತ್ರ. ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿಯವರು, ಮಾನ್ಯ ಅಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು. ಶ್ರೀ ಎಸ್. ಆರ್. ಲಕ್ಷ್ಮೀಕಾಂತರೆಡ್ಡಿಯವರು, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು. ಇವರುಗಳು ಭಾಗವಹಿಸಿದ್ದರು.




**ಮೈಸೂರು :** ದಿನಾಂಕ 06.11.2020ರಂದು ಪ್ರಭು ಶ್ರೀರಾಮ ಸೌಹಾರ್ದ ಸಹಕಾರಿ ನಿ., ಇಲವಾಲ, ಮೈಸೂರು ಇದರ ಉದ್ಘಾಟನೆ & ಸರ್ವ ಸದಸ್ಯರ ಪ್ರಥಮ ವಾರ್ಷಿಕ ಮಹಾಸಭೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ ರಾಜೀವ್ ಇವರು ನೆರವೇರಿಸಿದರು. ಮುಖ್ಯ ಅತಿಥಿಯಾಗಿ ಶ್ರೀ ಹರೀಶ್ ಕುಮಾರ್, ಮಾನ್ಯ ಸಹಾಯಕ ನಿಬಂಧಕರು, ಮೈಸೂರು ಉಪ ವಿಭಾಗ, ಮೈಸೂರು ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣಶೆಟ್ಟಿ, ಉಪಾಧ್ಯಕ್ಷರಾದ ಶ್ರೀ ಜಗದೀಶ್ ಹೆಬ್ಬಾರ್, ಮೈಸೂರು, ಮಂಡ್ಯ & ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಎಂ, ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.

## ವಾರ್ಷಿಕೋತ್ಸವ



**ಉಡುಪಿ :** ಮದರ್ ಮೇರಿ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸತೆಕಟ್ಟೆ ಉಡುಪಿ ಇದರ ಮೊದಲ ವಾರ್ಷಿಕೋತ್ಸವ ಸಮಾರಂಭವು ಸಹಕಾರಿಯ ಶಾಖಾ ಆವರಣದಲ್ಲಿ ದಿನಾಂಕ 17.11.2020 ರಂದು ನಡೆಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ, ಧರ್ಮಗುರುಗಳು ಮಿಲಾಗ್ರೀಸ್ ಚರ್ಚ್ ಕಲ್ಯಾಣಪುರ ಮತ್ತು ಶ್ರೀ ವಿಜಯ್ ಬಿ.ಎಸ್, ಉಡುಪಿ ಜಿಲ್ಲಾ ಸಂಯೋಜಕರ, ಇವರು ಉಪಸ್ಥಿತರಿದ್ದರು.

ಮೊದಲಿಗೆ ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರಾದ ಶ್ರೀ ಕಾರ್ಲಿಸ್ ಡಿಕುನ್ಹಾ ಇವರು ಸಹಕಾರಿಯ ಏಳಿಗೆಯ ವರದಿ ಸಾದರ ಪಡಿಸಿದರು. ನಂತರ ಶ್ರೀ ಮಂಜುನಾಥ್ ಎಸ್ ಕೆ ಇವರು ಮಾತನಾಡಿ ಮೊದಲು ಸೌಹಾರ್ದ ಸಹಕಾರಿಯ ಪರಿಚಯ ಮತ್ತು ಮೂಲ ಧ್ಯೇಯವನ್ನು ಸಹಕಾರಿಯ ಸದಸ್ಯಯರಿಗೆ ವಿವರಿಸಿದರು ಮತ್ತು ಸಹಕಾರಿಯು ವರ್ಷದಲ್ಲಿ 4.05 ಕೋಟಿ ದುಡಿಯುವ ಬಂಡವಾಳದೊಂದಗೆ 1000ಕ್ಕೂ ಅಧಿಕ ಗ್ರಾಹಕರಿಗೆ ಸೇವೆ ನೀಡುತ್ತಿರುವ ಸಹಕಾರಿ ಸಾಧನೆಯನ್ನು ಶ್ಲಾಘಿಸಿ ಶುಭಕೋರಿದರು.



**ಚಾಮರಾಜನಗರ :** ಚಾಮರಾಜನಗರಕ್ಕೆ ಭೇಟಿ ನೀಡಿದ್ದ ಹೆಚ್.ವಿ ರಾಜೀವ್, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಮತ್ತು ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಇವರನ್ನು ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಎಸ್. ಬಾಲಸುಬ್ರಹ್ಮಣ್ಯಂ, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಹಾಜರಿದ್ದರು.



**ಚಾಮರಾಜನಗರ:** ಶ್ರೀ ಮುರುಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ, ಇದರ ಸದಸ್ಯರುಗಳಿಗೆ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳು ಸಾಲದ ಚೆಕ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಕಾಳನಹುಂಡಿಯ ಶ್ರೀ ಶಿವಕುಮಾರ ಸ್ವಾಮಿಗಳು, ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ನಂಜುಂಡಸ್ವಾಮಿ ಉಪಾಧ್ಯಕ್ಷರಾದ ಶ್ರೀ ಜಿ.ಪ್ರಸನ್ನ ರವರು, ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಂ.ಆರ್.ಸ್ವಾಮಿ ಉಪಸ್ಥಿತರಿದ್ದರು.



**ಹೊಸಹಳ್ಳಿ :** ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಇ-ಸ್ಟಾಂಪಿಂಗ್ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ ಉ ಬೇವಿನಹಳ್ಳಿ ಉದ್ಘಾಟಿಸಿ ಮಾತನಾಡಿದರು. ಸಹಕಾರಿಯ ಇ-ಸ್ಟಾಂಪಿಂಗ್ ವ್ಯವಹಾರ ಲಾಭದಾಯಕವಲ್ಲ ಎಂದು ಗೊತ್ತಿದ್ದರೂ ಸಹ ಸದಸ್ಯರಿಗೆ ಸೇವೆ ನೀಡಬೇಕೆಂಬ ಸದುದ್ದೇಶದಿಂದ ಈ ದಿನ ಇ-ಸ್ಟಾಂಪಿಂಗ್ ಸೇವೆ ಪ್ರಾರಂಭಿಸುತ್ತಿರುವುದು ಎಂದು ತಿಳಿಸಿದರು.



**ಮೂಡಲಗಿ :** ಕಲ್ಲೋಳಿ ಪಟ್ಟಣದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ಸಭಾ ಭವನದಲ್ಲಿ ಬುಧವಾರ ಡಿಸೆಂಬರ್ 03 ರಂದು ನಡೆದ 526ನೇ ಕನಕದಾಸರ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷ ರಾಜಪ್ಪ ಗೋಸಬಾಳ ಅಧ್ಯಕ್ಷತೆ ವಹಿಸಿದ್ದರು, ನಿರ್ದೇಶಕರಾದ ಪರಪ್ಪ ಮಳವಾಡ, ಮಲ್ಲಿಕಾರ್ಜುನ ಹುಲೆನ್ನವರ, ಸೋಮನಿಂಗ ಹಡಗಿನಾಳ, ಸಿದ್ದಪ್ಪ ಹೆಬ್ಬಾಳ, ಅಡಿವೆಪ್ಪ ಕುರಬೇಟ, ತುಕಾರಾಮ ಪಾಲ್ಕಿ, ಪ್ರಧಾನ ವ್ಯವಸ್ಥಾಪಕರಾದ ಹಣಮಂತ ಕಲಕುಟ್ರಿ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು, ಸಹಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.




**ಚಾಮರಾಜನಗರ :** ನವ್ಯಕರ್ನಾಟಕ ವಿವಿದ್ದೊದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 10ನೇ ವರ್ಷದ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆಯನ್ನು ಶ್ರೀ ನಂಜುಂಡಸ್ವಾಮಿ .ಎಂ ಅಧ್ಯಕ್ಷರು, ನವ್ಯ ಕರ್ನಾಟಕ ವಿವಿದ್ದೊದ್ದೇಶ ಸೌಹಾರ್ದ ಸಹಕಾರಿ ನಿ., ಇವರು ವಹಿಸಿದ್ದರು. ವೇದಿಕೆ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್. ಮಂಜು(ಹರವೆ), ಆಡಳಿತ ಮಂಡಳಿ ನಿರ್ದೇಶಕರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಿಇಓ ಶ್ರೀ ಶಿವಕುಮಾರ್ .ಆರ್, ಸಹಾಯಕರು ಮತ್ತು ಪಿಗ್ಮಿ ಸಂಗ್ರಹಕಾರರು ಸಹಕಾರಿಯಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟ ಕಾರಣ ಆಡಳಿತ ಮಂಡಳಿ ಸದಸ್ಯರಿಗೆ ನೆನೆಪಿನ ಕಾಣಿಕೆ ನೀಡಿ ಗೌರವ ಸಲ್ಲಿಸಿದರು.



**ಮಂಡ್ಯ:** ಮಾರುತಿ ಸೌಹಾರ್ದ ಸಹಕಾರಿ ನಿ., ಬೆಳ್ಳೂರು ಕ್ರಾಸ್ ಇದರ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲಾಯಿತು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತಿಯಲ್ಲಿ ನಡೆಯಿತು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು



**ಉಡುಪಿ :** ನಿರ್ಮಾಣ್ ವಿವಿದೋದ್ಧೇಶ ಸೌಹಾರ್ದ ಸಹಕಾರಿ, ಉಡುಪಿ ಇದರ 9ನೇ ವಾರ್ಷಿಕ ಸಾಮಾನ್ಯ ಮಹಾಸಭೆಯು ದಿನಾಂಕ 01–11–2020ರ ಭಾನುವಾರ 3:00 ಘಂಟೆಗೆ ಹೋಟೇಲ್ ನೈವೇದ್ಯದ 'ಅನುಗ್ರಹ' ಸಭಾಂಗಣದಲ್ಲಿ ಜರುಗಿತು. ಅಧ್ಯಕ್ಷತೆ ವಹಿಸಿದ ಸಹಕಾರಿಯ ಅಧ್ಯಕ್ಷರಾದ ಮಂಚಿ ಶ್ರೀ ನಿತ್ಯಾನಂದ ನಾಯಕ್‌ರವರು ಗಣ್ಯರನ್ನು ಸ್ವಾಗತಿಸುತ್ತಾ ಮಾತನಾಡಿ, ಸಹಕಾರಿಯು 9.90ಕೋಟಿ ರೂಪಾಯಿಗೂ ಅಧಿಕ ವ್ಯವಹಾರ ನಡೆಸಿ 28.4ಲಕ್ಷ ರೂ. ಲಾಭಗಳಿಸಿದೆ ಎಂದು ತಿಳಿಸಿದರು. ಸಹಕಾರಿಯ ಸದಸ್ಯರಿಗೆ ಶೇ. 17 ಲಾಭಾಂಶವನ್ನು ಘೋಷಿಸಿದರು. ಇದೇ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಮಂಡಳಿಯು ನಡೆಸಿದ ವಾಣಿಜ್ಯ ವಿಭಾಗದ ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ 8ನೇ ಸ್ಥಾನ ಪಡೆದ ಸಹಕಾರಿಯ ಸದಸ್ಯರಾದ ಕೆ. ಸತ್ಯನಾರಾಯಣ ಪ್ರಭುರವರ ಮಗನಾದ ಕೆ. ನಾಗರಾಜ ಕಬ್ಯಾಡಿ ಇವರ ಸಾಧನೆಯನ್ನು ಗುರುತಿಸಿ ಅಬಿನಂಧಿಸಲಾಯಿತು. ಸಹಕಾರಿಯ ಎಲ್ಲಾ ನಿರ್ದೇಶಕರು ಹಾಜರಿದ್ದರು. ನಿರ್ದೇಶಕರಾದ ಶ್ರೀ ಬಿ. ಸುದರ್ಶನ ನಾಯಕ್ ವಂದಿಸಿದರು, ಕು! ನವ್ಯ ಅವರು ಪ್ರಾರ್ಥಿಸಿದರು, ಮುಖ್ಯ ಕಾರ್ಯನಿರ್ವಾಹಕರಾದ ಪ್ರದೀಪ. ಕೆ ಕಾರ್ಯಕ್ರಮವನ್ನು ನಿರೂಪಿಸಿದರು.



**ಚಿಕ್ಕಬಳ್ಳಾಪುರ :** ದಿನಾಂಕ 24.10.2020 ರಂದು ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ನಿ., ಚಿಕ್ಕಬಳ್ಳಾಪುರ ಸಹಕಾರಿಯ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಸಭಾಂಗಣದಲ್ಲಿ ಜರುಗಿತು.



**ಚಾಮರಾಜನಗರ :** ಜನಪರ ಸೌಹಾರ್ದ ಕ್ರೆಡಿಟ್ ಕೋ–ಅಪ್ ಲಿ., ಚಾಮರಾಜನಗರ ಇದರ 2019–20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಯನ್ನು ಶ್ರೀ ವೀರಭದ್ರಸ್ವಾಮಿ, ಅಧ್ಯಕ್ಷರು, ಶ್ರೀ ಅಕ್ಷಯಶ್ರೀ ಸೌಹಾರ್ದ ಸಹಕಾರಿ ನಿ., ಚಾ.ನಗರ ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಂಗಸ್ವಾಮಿ ರವರು & ಉಪಾಧ್ಯಕ್ಷರಾದ ಶ್ರೀ ಎಲ್. ಉಪೇಂದ್ರ ರವರು, ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಇಓ ಶ್ರೀ ಲಿಂಗರಾಜು ಹಾಜರಿದ್ದರು.



**ಚಾಮರಾಜನಗರ :** ರೇನಾ ವಿವಿದ್ದೊದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2019–20ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಯನ್ನು ಶ್ರೀ ವೀರಭದ್ರಸ್ವಾಮಿ, ಅಧ್ಯಕ್ಷರು, ಶ್ರೀ ಅಕ್ಷಯಶ್ರೀ ಸೌಹಾರ್ದ ಸಹಕಾರಿ ನಿ., ಚಾ.ನಗರ ಇವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಜೆ ಪ್ರಕಾಶ್ ರವರು & ಉಪಾಧ್ಯಕ್ಷರಾದ ಶ್ರೀ ರಾಜಣ್ಣ ರವರು, ಆಡಳಿತ ಮಂಡಲಿ ಸದಸ್ಯರು ಹಾಗೂ ಸಿಇಓ ಶ್ರೀ ಪದ್ಮನಾಭ್ ಹಾಜರಿದ್ದರು.



**ಅಂಕೋಲಾ:** ದಿನಾಂಕ 09.11.2020 ರಂದು ನಡೆದ ಸೂರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ.



**ಬೆಂಗಳೂರು :** ವಿಶ್ವಗುರು ಬಸವಣ್ಣ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್‌ನ 2019–20ನೇ ಸಾಲಿನ 5ನೇ ವಾರ್ಷಿಕ ಸರ್ವಸದಸ್ಯರ ಮಹಾ ಸಭೆಯು ದಿನಾಂಕ 08.11.2020ರ ಭಾನುವಾರ ಬೆಂಗಳೂರಿನಲ್ಲಿ ಜರುಗಿತು. ಸದರಿ ಸಭೆಯ ಉದ್ಘಾಟನೆಯನ್ನು ಸಹಕಾರಿಯ ಹಿರಿಯ ಸದಸ್ಯರಾದ ಶ್ರೀ ಎಸ್.ವಿ.ನಾಗರಾಜಯ್ಯ ಮತ್ತು ಶ್ರೀ ಗಿರಿಯಪ್ಪ ಎಸ್.ಯಲಿವಾಳ ಅವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಈ ಸಂದರ್ಭದಲ್ಲಿ ಕಳೆದ ಐದು ವರ್ಷಗಳಿಂದ ಸಹಕಾರಿಯನ್ನು ಯಶಸ್ವಿಯಾಗಿ ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಸಿ.ಪಾಲನೇತ್ರಪ್ಪ ಇವರನ್ನು ಮಂಡಳಿಯ ನಿರ್ದೇಶಕರು ಹಾಗೂ ಸದಸ್ಯರುಗಳು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.



**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ 67ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾರಿಯ ಧ್ವಜಾರೋಹಣ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ನಿಂ ಆಸಂಗಿ ಇವರು ಅಧ್ಯಕ್ಷತೆಯಲ್ಲಿ ದಿನಾಂಕ 14/11/2020 ರ ಶನಿವಾರ ಬೆಳಿಗ್ಗೆ 10.30 ಘಂಟೆಗೆ ಸಹಕಾರಿಯ ಕಛೇರಿಯ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಎಸ ಎಂ ಪಾಟೀಲ ಸಾ// ಮಲ್ಲಸಮುದ್ರ ಇವರು ನೇರವೇರಿಸಿದರು ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಪ್ಪ ಬಿ ಕಲಕೇರಿ, ಶ್ರೀ ಅಶೋಕ ಎಸ್ ಸಂಕಣ್ಣವರ ಶ್ರೀ ಸಿದ್ದನಗೌಡ ಪಾಟೀಲ, ಶ್ರೀ ಶಿವಪ್ರಭು ನೀಲಗುಂದ ಹಾಗೂ ಸವಿತಾ ಎಂ ಪಾಟೀಲ ಮುಂತಾದವರುಗಳು ಸಹಕಾರಿಯ ಆಂದೋಲನದ ಬಗ್ಗೆ ಸಹಕಾರಿಯ ಪ್ರಜಾಪ್ರಭುತ್ವದ ಬಗ್ಗೆ ಸಹಕಾರಿಯ ಮಾರಾಟದ ಬಗ್ಗೆ ಸಹಕಾರಿಯ ಪರಿಸರ & ಉತ್ತಮ ಜೀವನದ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸಹಕಾರಿ ಕ್ಷೇತ್ರದಲ್ಲಿ ವೃತ್ತಿಪರ ಬಗ್ಗೆ ಸಹಕಾರಿ ಸಂಘಗಳ ಮಹಿಳೆಯವರಿಗೆ ಯುವಕರಿಗೆ ಅಧಿಕಾರಿಕರಣದ ಬಗ್ಗೆ ವಿವರವಾಗಿ ತಿಳಿಸಿದರು.

ವೀರಶೈವ ಪಂಚಮಸಾಲಿ ಸೌಹಾರ್ದ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 08.11.2020 ರಂದು ರವಿವಾರ ಗದಗ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಎ.ಪಿ.ಎಂ.ಸಿ ರಸ್ತೆ, ಗದಗದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಎಂ ಪಾಟೀಲ ಮಲ್ಲಸಮುದ್ರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.



**ದಕ್ಷಿಣ ಕನ್ನಡ :** ಕೋವಿಡ್ ಸಂಕಷ್ಟದ ಹೊರತಾಗಿಯೂ ಸಹಕಾರಿಯು 14.28 ಲಕ್ಷ ರೂ ಲಾಭಾಂಶ ಪಡೆದಿದ್ದು, ಸತತ ನಾಲ್ಕು ವರ್ಷಗಳಿಂದ 'ಎ' ದರ್ಜೆಯಲ್ಲಿ ಕಾರ್ಯವಿರ್ವಹಿಸುತ್ತಿದೆ. ಸದಸ್ಯರಿಗೆಲ್ಲ ಶೇ.12 ಡಿವಿಡೆಂಡ್ ನೀಡಲು ಶಿಫಾರಸ್ಸು ಮಾಡಲಾಗಿದೆ ಎಂದು ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಉಪಾಧ್ಯಕ್ಷೆ ಉಷಾ ಭಂಡಾರಿ ಹೇಳಿದರು. ಮೂಡುಬಿದಿರೆ ಸ್ವರ್ಣಮಂದಿರದಲ್ಲಿ ನಡೆದ ಸೌಹಾರ್ದ ಸಹಕಾರಿಯ 2019–20ನೇ ಸಾಲಿನ ಮಹಾಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಡೆಪಾಸಿಟ್ ಹಾಗೂ ಸಾಲ ಮರುಪಾವತಿಯಿಂದ ಸಹಕಾರಿ ಅಭಿವೃದ್ಧಿಗೆ ಸಹಕರಿಸಿದ ಹಿದಾಯತ್ತುಲ್ಲಾ, ದೇವರಾಜ್ ಜೈನ್, ರಮೇಶ್, ರವಿ .ಎಲ್. ಸುವರ್ಣ, ಉಗ್ಗಪ್ಪ ಪೂಜಾರಿ, ಸತ್ಯನಾರಾಯಣ ತಂತ್ರಿ, ಚೆಲುವಯ್ಯ ಆಚಾರಿ ಹಾಗೂ ಪಿಗ್ಮಿ ಸಂಗ್ರಹದಲ್ಲಿ ಸಾಧನೆ ಮಾಡಿದ ದಿನೇಶ್ ಅವರಿಗೆ ಸನ್ಮಾನ, ಪ್ರತಿಭಾನ್ವಿತರಿಗೆ ವಿದ್ಯಾರ್ಥಿ ವೇತನ ನೀಡಲಾಯಿತು. ಸಹಕಾರಿಯ ನಿರ್ದೇಶಕರಾದ ಸುರೇಶ್ ಪೂಜಾರಿ ಎಂ., ಗೋಪಾಲ್ ಶೆಟ್ಟಿಗಾರ್, ರಮೇಶ್ ಎಸ್ ಶೆಟ್ಟಿ, ರಾಜೇಂದ್ರ ಬಿ., ರವೀಂದ್ರ ಕರ್ಕೇರ, ಶರತ್ ಜೆ. ಶೆಟ್ಟಿ, ಶಂಕರ ನಾರಾಯಣ ಭಟ್, ರತ್ನಾಕರ ಪೂಜಾರಿ, ನಾಗೇಶ್ ನಾಯ್ಕ್, ಹೇಮಾ ಕೆ. ಪೂಜಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯು.ಆರ್ ಮಧ್ಯಸ್ಥ ಉಪಸ್ಥಿತರಿದ್ದರು.



**ಮಡಿಕೇರಿ :** ಕೊಡಗು ವಿದ್ಯಾ ಇಲಾಖಾ ನೌಕಾರರ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 11.10.2020 ರಂದು ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸಭಾಂಗಣ ಮಡಿಕೇರಿಯಲ್ಲಿ ನಡೆಯಿತು.



**ಮಂಡ್ಯ:** ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಭಾರತೀನಗರ, ಮದ್ದೂರು ತಾಲ್ಲೂಕು ಇದರ ವತಿಯಿಂದ ಸದಸ್ಯರ ಅನುಕೂಲಕ್ಕಾಗಿ ದಿನಾಂಕ 23.11.2020 ರಂದು "ಸಹಕಾರಿ ಮಳಿಗೆ" ಯನ್ನು ಉದ್ಘಾಟಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಸಿದ್ದಲಿಂಗಯ್ಯ, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀಮತಿ ಪೂರ್ಣಿಮಾ ಹಾಜರಿದ್ದರು.

**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ 67ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾರಿಯ ಧ್ವಜಾರೋಹಣ ಸಹಕಾರಿಯ ನಿರ್ದೇಶಕಿಯರಾದ ಶ್ರೀಮತಿ ಎಸ ವ್ಹಿ ಪಾಟೀಲ ಅವರ ಅಧ್ಯಕ್ಷತೆಯಲ್ಲಿ 14/11/2020 ರ ಶನಿವಾರ ಬೆಳಿಗ್ಗೆ 10.30 ಘಂಟೆಗೆ ಸಹಕಾರಿಯ ಕಛೇರಿಯ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಕೆ ಎಸ ಹೊಸಮತ ಅವರು ನೆರವೇರಿಸಿದರರು ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಕಾರವಾರ:** ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೇಡಿಟ್ ಸೌಹಾರ್ದ ಸಹಕಾರಿ ನಿಯಮಿತ ಸದಾಶಿವಗಡ, ಕಾರವಾರ. ಇದರ ಪ್ರಧಾನ ಕಛೇರಿಯಲ್ಲಿ ದಿನಾಂಕ 14/11/2020 ರಂದು 67ನೇ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರಿಯ ಆಡಳಿತ ಮಂಡಳಿಯವರಾದ ಶ್ರೀ. ಪುತ್ತು ದತ್ತಾ ಕಲ್ಗುಟಕರ ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ದಿಕ್ಷಾ ಕಲ್ಗುಟಕರ ಇವರು ಸಹಕಾರಿಯ ಧ್ವಜಾರೋಹಣ ಮಾಡಿದರು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿಯವರು, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಿಂಗರಾಜ ಕಲ್ಗುಟಕರವರು ಮತ್ತು ಸಹಕಾರಿಯ ಸಿಬ್ಬಂದಿವರ್ಗದವರು ಸಹಕಾರಿಯ ಸಪ್ತಾಹದ ಅಂಗವಾಗಿ ಶ್ರೀ ದುರ್ಗಾದೇವಿ ದೇವಸ್ಥಾನ ಹಾಗೂ ಶಮಶುದ್ದಿನ ಶಾಕಾರಾಮುದ್ದಿನ ದರ್ಗಾದ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ನೆರವೇರಿಸಿದರು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಮಂಗಳೂರು ಸೌಹಾರ್ದ ಸಹಕಾರಿ ನಿ., ಮಂಗಳೂರು



ಶ್ರೀ ಭಾಸ್ಕರ್ ರಾವ್ ಕೆ
ಅಧ್ಯಕ್ಷರು



ಶ್ರೀ ಕೃಷ್ಣ ಭಟ್ ಎ
ಉಪಾಧ್ಯಕ್ಷರು



**ಮಂಡ್ಯ :** ನಾಗಮಂಗಲ ತಾಲ್ಲೂಕು ಪದವೀಧರ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ನಾಗಮಂಗಲ ಇದರ ಅಧ್ಯಕ್ಷರಾಗಿ ಶ್ರೀ ಶಿವಸ್ವಾಮಿ ರವರು, ಉಪಾಧ್ಯಕ್ಷರಾಗಿ ಶ್ರೀ ವೆಂಕಟೇಶ್ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಮಂಡ್ಯ :** ಮಂಡ್ಯ ತಾಲ್ಲೂಕು ಶಾಮೀಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ ಅಧ್ಯಕ್ಷರಾಗಿ ಶ್ರೀ ಎ.ಸಿ ರಮೇಶ್ ರವರು, ಉಪಾಧ್ಯಕ್ಷರಾಗಿ ಶ್ರೀ ಎಂ. ಶಂಕರೇಗೌಡ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



**ಚಾಮರಾಜನಗರ :** ರೇನಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು.

# ರಾಜ್ಯದ ಸೌಹಾರ್ದ ಸಹಕಾರಿಗಳ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ಬೋರಗಾಂವ :** ಅರಿಹಂತ ಸೌಹಾರ್ದ ಸಹಕಾರಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಆಚರಿಸಲಾಯಿತು.



**ಕೊಪ್ಪಳ :** ಶ್ರೀ ಗುರು ಸೃಷ್ಟಿಕರ್ತ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಗಿಣಿಗೇರಾ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮವನ್ನು ಶ್ರೀ ಸಹಕಾರಿ ಪಿತಾಮಹರಾದ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಇವರಿಗೆ ಮೂರ್ತಿಗೆ ಪೂಜಾ ಕಾರ್ಯಕ್ರಮವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಶಂಭುಲಿಂಗ ಶೆಟ್ಟಿ ಅಂಗಡಿ ಹಾಗೂ ಶ್ರೀ ಗಾಳೆಪ್ಪ ಗೊರವರ್ ನೆರವೇರಿಸಿದರು.




**ಮಂಡ್ಯ :** ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ವತಿಯಿಂದ 67ನೇ "ಅಖಿಲ ಭಾರತ ಸಹಕಾರ ಸಪ್ತಾಹ" ದ ದಿನಾಚರಣೆ ಅಂಗವಾಗಿ ಕಛೇರಿಯಲ್ಲಿ ಧ್ವಜಾರೋಹಣದ ಮೂಲಕ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ನಾಗರಾಜು ಮತ್ತು ಸಹಕಾರಿಯ ನಿರ್ದೇಶಕರು, ಸಿಇಓ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಚಿಕ್ಕಮಂಗಳೂರು :** ದಿನಾಂಕ 17.11.2020ನೇ ಮಂಗಳವಾರ ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹ ಅಂತರ್ಜಾಲ ಸಂಪರ್ಕದ ಮೂಲಕ ಸಹಕಾರ ಶಿಕ್ಷಣ ತರಬೇತಿಯ ಪುನರ್ ಮನನ ದಿನಚಾರಣೆಯು ನಡೆಯಿತು. ಸಹಕಾರಿ ಅಧ್ಯಕ್ಷರಾದ ಶ್ರೀಯುತ ಎಸ್.ಎನ್.ವಿಶ್ವನಾಥ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿಷಯ ಕುರಿತಾಗಿ ಸನ್ನದ್ದು ಲೆಕ್ಕಪರಿಶೋಧಕರಾದ ಶ್ರೀಯುತ್ರ ಪ್ರಭಾಕರ ಕೆ.ಅರ್ ಬೆಂಗಳೂರು, ಇವರು ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀಯುತ ಟಿ.ಡಿ. ರಾಜೇಗೌಡರು , ಮ್ಯಾಮ್ಕೋಸ್ ಉಪಾದ್ಯಕ್ಷರಾದ ಶ್ರೀಯುತ ವೈ.ಎಸ್. ಸುಬ್ರಮಣ್ಯ, ಕೊಪ್ಪ ಪೀಕಾರ್ಡ್ ಅಧ್ಯಕ್ಷರಾದ ಇನೇಶ್ ಹೆಚ್.ಎಸ್ ಕರಿಮನೆ ಪಿಕಾರ್ಡ್ ಅಧ್ಯಕ್ಷರಾದ ವಿನಯ್ ಡಿ.ಸಿ. ಹಾಗೂ ಕೊಪ್ಪದ ಸಾಧನ ಮಹಿಳಾ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀಮತಿ ವಾಣಿ ಸತೀಶ್ ಇವರು ಹಾಗೂ ಗಾಯತ್ರಿ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ ಎಸ್ ವೆಂಕಟರಮಣ ನಿರ್ದೇಶಕರಾದ ಶ್ರೀ ನಾಗಭೂಷಣ ಎಮ್ ಜಿ, ಶ್ರೀ ಜೆ ಎಮ್ ಶ್ರೀಹರ್ಷ, ಶ್ರೀ ಎ ದಿವಾಕರ ಇವರು ಹಾಗೂ ತಾಲೂಕಿನ ಎಲ್ಲಾ ಸಹಕಾರಿ ಧುರೀಣರು ಹಾಜರಿದ್ದರು. ಚಿಕ್ಕಮಗಳೂರು ಜಿಲ್ಲಾ ಸಹಕಾರ ಯೂನಿಯನ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಯುತ ಮಂಜುನಾಥ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು.



**ಚಾಮರಾಜನಗರ :** ಮರ್ಚೆಂಟ್ಸ್ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು.



**ಚಿತ್ರದುರ್ಗ :** ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿಯ ಪ್ರಧಾನ ಕಛೇರಿಯಲ್ಲಿ 67ನೇ ಸಹಕಾರಿ ಸಪ್ತಾಹ ದಿನಾಚರಣೆಯ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಪಿ.ಎಸ್.ನಾಗರಾಜ ಶೆಟ್ಟಿ ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಯುತ ಎಂ.ಹೆಚ್. ಪ್ರಾಣೇಶ್ ರವರು ಹಾಗೂ ಸಹಕಾರಿಯ ಕಾರ್ಯಕಾರಿ ಸಮಿತಿಯವರು, ಮುಖ್ಯ ಕಾರ್ಯ ನಿರ್ವಹಕಾರಾದ ಶ್ರೀಮತಿ ಶೈಲಜಾರವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಿತ್ರದುರ್ಗ :** ವಾಸವಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಚಳ್ಳಕೆರೆ. ಸಹಕಾರಿಯಲ್ಲಿ 67ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪ್ರಯುಕ್ತ ಧ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ ರಮಾನಂದ ಗುಪ್ತ ರವರು ಧ್ವಜಾರೋಹಣ ಕಾರ್ಯಕ್ರಮವನ್ನು ಸಾಮಾಜಿಕ ಅಂತರದೊಂದಿಗೆ ಸರಳವಾಗಿ ಯಶಸ್ವಿಯಾಗಿ ನೆರವೇರಿಸಲಾಯಿತು.



**ಬೆಳಗಾವಿ :** ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಇದರ 18 ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಶ್ರೀ ಸಿದ್ಧಿಪ್ರಿಯಾ ಮಹಿಳಾ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇದರ 2ನೇ ವಾರ್ಷಿಕ ಸಾಮಾನ್ಯ ಸಭೆಗಳಿಗೆ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಲಕ್ಷ್ಮಣ ಮಾರುತಿ ಪವಾರ ಮತ್ತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆಯವರು ಭಾಗವಹಿಸಿದ್ದರು.

## ಉದ್ಘಾಟನೆ




**ಬೆಂಗಳೂರು :** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕಿನ ಒಟ್ಟಾರೆ ವ್ಯವಹಾರಗಳು ಸುಮಾರು 600 ಕೋಟಿಗೆ ಮೀರಿದ್ದು ಬ್ಯಾಂಕಿನಲ್ಲಿ ಹೊಸದಾಗಿ ಪ್ರಾರಂಭಿಸಲಾದ ಮೊಬೈಲ್ ಬ್ಯಾಂಕಿಂಗ್ ಸೇವೆಗೆ ದಿನಾಂಕ 13.11.2020 ರಂದು ಬ್ಯಾಂಕಿನ ಅಧ್ಯಕ್ಷರಾದ ಸದಾಶಿವರೆಡ್ಡಿ ಮತ್ತು ಇತರ ನಿರ್ದೇಶಕರು ಉದ್ಘಾಟಿಸಿದರು. ಬ್ಯಾಂಕಿನಲ್ಲಿ ಉಳಿತಾಯ ಖಾತೆ ಮತ್ತು ಚಾಲ್ತಿ ಖಾತೆ ಹೊಂದಿರುವ ಗ್ರಾಹಕರು ತಮ್ಮ ಮೊಬೈಲ್‌ನಲ್ಲಿ ಅಪ್ಲಿಕೇಶನ್ ಅಳವಡಿಸಿಕೊಂಡು ಹಣದ ವರ್ಗಾವಣೆ, ಬ್ಯಾಲೆನ್ಸ್ ಮಾಹಿತಿ, ಚೆಕ್ ಪುಸ್ತಕ, ಮತ್ತಿತರ ಸೇವೆಗಳನ್ನು ದಿನದ 24 ಗಂಟೆಗಳಲ್ಲಿಯೂ ಪಡೆಯಬಹುದಾಗಿದ್ದು ಈ ಸೌಲಭ್ಯವನ್ನು ಎಲ್ಲಾ ಗ್ರಾಹಕರು ಸದುಪಯೋಗಪಡಿಸಿಕೊಳ್ಳುವಂತೆ ಅಧ್ಯಕ್ಷರು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಸದಾಶಿವರೆಡ್ಡಿ, ಉಪಾಧ್ಯಕ್ಷರಾದ ಶಂಕರರೆಡ್ಡಿ, ನಿರ್ದೇಶಕ ಮಂಡಳಿ ಸದಸ್ಯರು, ಪ್ರಧಾನ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮೈಸೂರು :** ಕರ್ನಾಟಕ ಶ್ರೇಷ್ಠ ಸೌಹಾರ್ದ ಸಹಕಾರಿ ನಿ., ಕೆ.ಆರ್ ನಗರ ಇದರ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಹಕಾರಿಯ ನಾಮಫಲಕವನ್ನು ಶ್ರೀ ಸಾ.ರಾ ಮಹೇಶ್ ರವರು, ಮಾನ್ಯ ಶಾಸಕರು & ಮಾಜಿ ಸಚಿವರು ಅನಾವರಣಗೊಳಿಸಿದರು. ಶ್ರೀ ಡಿ. ರವಿಶಂಕರ್, ಜಿಲ್ಲಾ ಪಂಚಾಯಿತಿ ಸದಸ್ಯರು, ಮೈಸೂರು ಇವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಅಶ್ವತ್ ರವರು ಮುಖ್ಯ ಅತಿಥಿಗಳಾಗಿ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಮತ್ತು ಶ್ರೀ ಭರತ್ .ಎಸ್, ವಕೀಲರು ವೇದಿಕೆ ಮೇಲೆ ಉಪಸ್ಥಿತರಿದ್ದರು.



**ಕೊಪ್ಪಳ :** ದಿನಾಂಕ 28–11–2020, ಶನಿವಾರದಂದು ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಶ್ರೀ ಬಸವಭಾನು ಪತ್ತಿನ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಮಹಾಸಭೆಯನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ.ಜಿ.ಶೀಧರ್, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶ್ರೀ ಅಮರೇಶ ಕುಳಗಿ, ಶ್ರೀ ಲಕ್ಷ್ಮೀ ವೆಂಕಟೇಶ್ವರ ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಿ.ಎಚ್.ಶರಣಪ್ಪ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಎಮ್.ರಮೇಶ, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಪವನ, ಶ್ರೀ ರಾಜಶೇಖರ ಶ್ರೇಷ್ಠಿ ರವರು ಉಪಸ್ಥಿತರಿದ್ದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಕೂಡ್ಲೂರ ರವರು ವಹಿಸಿದರು.ಕಾರ್ಯಕ್ರಮದ ನಿರೂಪಣೆ ಹಾಗು ವಂದರ್ನಾಪಣೆಯನ್ನು ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಸಂಗಪ್ಪ ಕೂಡ್ಲೂರ ರವರು ನೆರವೇರಿಸಿದರು.ಕಾರ್ಯಕ್ರಮದಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು ಹಾಗು ಉತ್ತಮ ಗ್ರಾಹಕರಿಗೆ ಸನ್ಮಾನಿಸಲಾಯಿತು.ಶ್ರೀ ಡಾ॥ ಪುಟ್ಟರಾಜ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡಪ್ಪ ಕುಳಗಿ, ಶ್ರೀ ಬಸವಭಾನು ಪತ್ತಿನ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಬಸವರಾಜ ಕುಳಗಿ,ಆಡಳಿತ ಮಂಡಳಿಯ ಸರ್ವಸದಸ್ಯರು, ಶಿಕ್ಷಕರಾದ ಶ್ರೀ ಪಂಪನಗೌಡ, ಸದಸ್ಯರಾದ ಶ್ರೀ ಶಿವಪ್ಪ ವಣಗೇರಿ, ಚನ್ನಬಸಯ್ಯಸ್ವಾಮಿ, ತಾಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು,ಸಹಕಾರಿಯ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳಾದ ನೇತ್ರಾವತಿ, ಸುಚಿತ್ರಾ, ಶಿಲ್ಪಾ, ಸೌಮ್ಯ, ಸ್ಮಿತಾ, ಹರ್ಷಿತಾ ಉಪಸ್ಥಿತರಿದ್ದರು.



**ಮೂಡಲಗಿ:** ಭಾರತದ ಮಣ್ಣಿನಲ್ಲಿ ಪರಂಪರಾಗತವಾಗಿ ಬೆಳೆದು ಬಂದ ಸಹಕಾರ ಗುಣ ಭಾರತದ ಆರ್ಥಿಕ ಅಭಿವೃದ್ಧಿಗೆ ಶಕ್ತಿಯಾಗಿ ಬೆಳೆದಿದೆ ಎಂದು ಸಹಕಾರಿ ಹಾಗೂ ದಿ. ಬಿ.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಸತೀಶ ಕಡಾಡಿ ಹೇಳಿದರು.

ಸಮೀಪದ ಕಲ್ಲೋಳಿ ಪಟ್ಟಣದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ.ಕಲ್ಲೋಳಿ ಇದರ ಸನ್ 2019–20 ನೇ ಸಾಲಿನ 18ನೇ ಸರ್ವ ಸಾಮಾನ್ಯ ಸಭೆಯನ್ನು ಭಾರತ ಮಾತೆಗೆ ಪೂಜೆ ಸಲ್ಲಿಸಿ ಪುಷ್ಪ ಅರ್ಪಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಸಹಕಾರಿ ಸಂಸ್ಥೆಗಳ ಮೂಲಕ ಆರ್ಥಿಕ ಸಹಾಯವನ್ನು ಪಡೆದುಕೊಂಡು ಕೃಷಿರಂಗದ ಅಭಿವೃದ್ಧಿಗಾಗಿ ಬಳಸಿಕೊಂಡು ಈ ದೇಶದ ರೈತರು ಭಾರತದ ಆರ್ಥಿಕ ಅಭಿವೃದ್ಧಿಗೆ ಅನನ್ಯ ಕೊಡುಗೆ ನೀಡಿದ್ದಾರೆಂದರು.

ಸಹಕಾರಿಯು ಗ್ರಾಹಕರ ಸಹಕಾರದಿಂದ ಪ್ರಗತಿ ಹೊಂದಿದ್ದು, ಸಹಕಾರಿಯು ರೂ–53.55 ಲಕ್ಷ ಲಾಭಗಳಿಸಿದೆ ಎಂದು ಸಹಕಾರಿ ನಿರ್ದೇಶಕ ಸತೀಶ ಕಡಾಡಿ ಹೇಳಿದರು.

ಸಹಕಾರಿಯ ಎಲ್ಲ ಸದಸ್ಯರಿಗೆ ಶೇ 20 ರಷ್ಟು ಲಾಭಾಂಶ ಘೋಷಿಸಿದ ಅವರು ಸಂಘವು ಸ್ವಂತ ಕಟ್ಟಡ ಹೊಂದಿ, 3657 ಸದಸ್ಯರ ರೂ–11.83 ಲಕ್ಷ ಶೇರ ಬಂಡವಾಳ, ಗ್ರಾಹಕರಿಂದ ರೂ–12.35 ಕೋಟಿ ಠೇವಣಿ ಹೊಂದಿದ್ದು, ರೂ–2.57 ಕೋಟಿ ವಿವಿಧ ನಿಧಿಗಳನ್ನು ಹೊಂದಿದೆ ಏಂದರಲ್ಲದೇ ಗಾಹ್ರಕರಿಗೆ ರೂ–13.53 ಕೋಟಿ ವಿವಿಧ ಸಾಲ ವಿತರಿಸಲಾಗಿದೆ ಎಂದರು.

ಸಹಕಾರಿಯ ಉಪಾಧ್ಯಕ್ಷ ರಾಜಪ್ಪ ಗೋಸಬಾಳ ಅಧ್ಯಕ್ಷತೆ ವಹಿಸಿದ್ದರು, ನಿರ್ದೇಶಕರಾದ ಬಾಳಪ್ಪ ಸಂಗಟಿ, ಪರಪ್ಪ ಮಳವಾಡ, ಸಹದೇವ ಹೆಬ್ಬಾಳ, ಶಿವಪ್ಪ ವ್ಯಾಪರಿ, ಮಾರುತಿ ಮಕ್ಕಳಗೇರಿ, ಮಲ್ಲಿಕಾರ್ಜುನ ಹುಲೆನ್ನವರ, ಸೋಮನಿಂಗ ಹಡಗಿನಾಳ, ಸಿದ್ದಪ್ಪ ಹೆಬ್ಬಾಳ. ಮತ್ತು ನಿಂಗಪ್ಪ ಮಿಡಕನಟ್ಟಿ ಉಪಸ್ಥಿತರಿದ್ದರು.

ಬೆಟಗೇರಿ ಶಾಖೆಯ ಸಲಹಾ ಸಮಿತಿ ಅಧ್ಯಕ್ಷರಾದ ಈರಪ್ಪ ದೇಯನ್ನವರ, ಉಪಾಧ್ಯಕ್ಷರಾದ ಮಾಯಪ್ಪ ಬಾಣಸಿ, ಶ್ರೀಕಾಂತ ಕರೆಪ್ಪಗೋಳ, ಗಂಗಯ್ಯ ಹಿರೇಮಠ, ಬಾಳಪ್ಪ ತಡಸಿ, ಅಜ್ಜಪ್ಪ ಪೆದನ್ನವರ ಭಾಗವಹಿಸಿದ್ದರು.

ಸಹಕಾರಿಯ ಪ್ರಮುಖ ಗ್ರಾಹಕರಾದ ಮಲ್ಲಪ್ಪ ಖಾನಗೌಡ್ರ, ವಕೀಲ ಮಲ್ಲಪ್ಪ ಕಡಾಡಿ, ಅಪ್ಪಾಸಾಬ ಮಳವಾಡ, ಶಂಕರ ಖಾನಗೌಡರ, ಜಿ. ಬಿ ಪಾಟೀಲ ಮುಂತಾದವರು ಭಾಗವಹಿಸಿದರು.

ಪ್ರಧಾನ ವ್ಯವಸ್ಥಾಪಕ ಹಣಮಂತ ಕಲಕುಟ್ರಿ ವಾರ್ಷಿಕ ವರದಿ ಓದಿದರು, ಲೆಕ್ಕಾಧಿಕಾರಿ ಶಂಕರ ಕೌಜಲಗಿ ಸ್ವಾಗತಿಸಿದರು, ಶಾಖಾ ಕಾರ್ಯದರ್ಶಿ ಪರಪ್ಪ ಗಿರೆಣ್ಣವರ ಕಾರ್ಯಕ್ರಮ ನಿರೂಪಿಸಿದರು, ಪ್ರಶಾಂತ ಪಟ್ಟಣಶೆಟ್ಟಿ ವಂದಿಸಿದರು.

ಪೋಟೋ ಶೀರ್ಷಿಕೆ: ಮೂಡಲಗಿ ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ.ಕಲ್ಲೋಳಿ ಇದರ ಸನ್ 2019–20ನೇ ಸಾಲಿನ 18ನೇ ಸರ್ವ ಸಾಮಾನ್ಯ ಸಭೆಯಲ್ಲಿ ಭಾರತ ಮಾತೆಗೆ ಪೂಜೆ ಸಲ್ಲಿಸಿ, ಪುಷ್ಪ ಅರ್ಪಿಸುವ ಮೂಲಕ ಸತೀಶ ಕಡಾಡಿ ಚಾಲನೆ ನೀಡುತ್ತಿರುವುದು.



**ಕೊಪ್ಪಳ** : ದಿನಾಂಕ 19-11-2020 ರಂದು ವಿಆರ್‌ಸಿ ಪತ್ತಿನ ಸೌಹಾರ್ದ ಸಹಕಾರಿ ನಿ;ಕಾರಟಗಿ, ಜಿ ॥ ಕೊಪ್ಪಳ ಸಹಕಾರಿಯ ಎರಡನೇಯ ಅವಧಿಯ ನೂತನ ಚುನಾಯಿತ ಆಡಳಿತ ಮಂಡಳಿ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಡಾ॥ ಪುಟ್ಟರಾಜ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುಂಡಪ್ಪ ಕುಳಗಿ ರವರು ವಹಿಸಿಕೊಂಡಿದ್ದರು.ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಎಂ.ರಮೇಶ, ಜಿಲ್ಲಾ ಸಂಯೋಜಕರಾದ ಶ್ರೀ ಪವನ.ಎಮ್.ಆರ್, ಸ್ಪಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ.ಪಿ.ಬಡಿಗೇರ ರವರು ಉಪಸ್ಥಿತರಿದ್ದರು.ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಶ್ರೀ ಬಸವ ಭಾನು ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ಕೂಡ್ಲೂರು ರವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಕಾರಟಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ವಿಆರ್‌ಸಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕಲ್ಯಾಣಪ್ಪ ಹಿರೇಗೌಡ್ರು ಮತ್ತು ಉಪಾಧ್ಯಕ್ಷರಾದ ಶ್ರೀ ಶರಣೇಗೌಡ ಪೊಲೀಸ್ ಪಾಟೀಲ್, ಆಡಳಿತ ಮಂಡಳಿಯ ನಿರ್ದೇಶಕರು,ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಲಿಂಗಯ್ಯಸ್ವಾಮಿ, ಸದಸ್ಯರು, ಸಿಬ್ಬಂದಿ ವರ್ಗದವರು ಮತ್ತು ಪಿಗ್ಮಿ ಏಜೆಂಟರು ಉಪಸ್ಥಿತರಿದ್ದರು.



**ಕೊಪ್ಪಳ** : ದಿನಾಂಕ 11-11-2020 ರಂದು ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ನೂತನ ಶಾಖೆಯ ಉದ್ಘಾಟನಾ ಸಮಾರಂಭವನ್ನು ಕೊಪ್ಪಳ ಜಿಲ್ಲೆಯ ಹಿರೇಬಗನಾಳ ಗ್ರಾಮದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಷಡಕ್ಷರಿ ಬ್ರಹ್ಮ 108 ಶ್ರೀ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ವಹಿಸಿದರು.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶ್ರೀಧರ್,ಇಪ್ಕೋ ಟೋಕಿಯೋದ ಜಿಲ್ಲಾ ಅಧಿಕಾರಿಗಳಾದ ಶ್ರೀ ಚಿದಂಬರಂ ಹಾಗು ವಿಶಾಲ್, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ.ಎಲ್.ಹೆಚ್, ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಹನುಮೇಶ್ ಮುರಡಿ, ನಗರಸಭೆ ಸದಸ್ಯರಾದ ಶ್ರೀ ಮಲ್ಲಪ್ಪ ಕವಲೂರ, ಗ್ರಾಮ ಪಂಚಾಯತಿನ ಮಾಜಿ ಅಧ್ಯಕ್ಷರಾದ ಶ್ರೀ ಹೇಮಣ್ಣ ದೇವರಮನಿ, ಶ್ರೀ ಸೋಮಣ್ಣ ಬಾರಕೇರ, ಜಾನಪದ ಕಲಾವಿದ ಶ್ರೀ ಮುತ್ತಣ್ಣ, ಶ್ರೀ ಯಂಕಪ್ಪ ಗಡ್ಡಿ, ಜಿಲ್ಲಾ ಸಂಯೋಜಕರಾದ ಶ್ರೀ ಪವನ್, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ಹ್ಯಾಟಿ, ಶ್ರೀ ಮಾತೋಶ್ರೀ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮುದ್ದಪ್ಪ.ಜಿ, ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಹನುಮರೆಡ್ಡಿ, ಶ್ರೀ ಗುರುಸೃಷ್ಟಿ ಕರ್ತ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ ಏಣಗಿ, ನೇಗುಲಯೋಗಿ ಹಿರೇಬಗನಾಳ ಪತ್ತಿನ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶಿವಕುಮಾರ, ತತ್ವಮಸಿ ಪತ್ತಿನ ಸೌಹಾರ್ದ ಸಹಕಾರಿಯ ಶ್ರೀ ನಾಗರಾಜ್ ಹಾಗು ಹಲವು ಸೌಹಾರ್ದ ಸಹಕಾರಿಗಳ ಪ್ರತಿನಧಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ನೂತನ ಶಾಖೆಗೆ ಶುಭವನ್ನು ಹಾರೈಸಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಗವಿಸಿದ್ದಯ್ಯ ಹಿರೇಮಠ ರವರು ವಹಿಸಿದರು ಹಾಗು ನಿರುಪಣೆ ಮತ್ತು ವಂದನಾರ್ಪಣೆಯನ್ನು ಸಹಕಾರಿಯ ಆಂತರಿಕ ಲೆಕ್ಕ ಪರಿಶೋಧಕರಾದ ಶ್ರೀ ಶಶಿಕುಮಾರ ಗಡ್ಡಿ ರವರು ನೆರವೇರಿಸಿದರು.



## ವಾರ್ಷಿಕ ಸಾಮಾನ್ಯ ಸಭೆ

**ಮಂಗಳೂರು** : ಮಂಗಳೂರು ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯ ಸಹಕಾರಿಯ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.



# ‘ಸಹಕಾರ ಸಂಘಗಳ ನಡುವೆ ಸಹಕಾರ’ ಏಕೆ? ಹೇಗೆ?

– ಶ್ರೀ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ಭಾರತದಲ್ಲಿ ಸಹಕಾರ ಚಳುವಳಿ ಆರಂಭದಿಂದಲೂ ಸಹಕಾರ ತತ್ವಗಳ ಆಚರಣೆ ಬಗ್ಗೆ ಬೋಧಿಸಲಾಗುತ್ತಿದೆ. ಆದರೆ ಇದರ ಆಚರಣೆಯನ್ನು ನಾವು ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದೇವೆ. ಪಾಲಿಸುತ್ತಿದ್ದಲ್ಲಿ ಈ ಚಳುವಳಿ ಸಾಧಿಸಬೇಕಾದಷ್ಟು ಸಾದಿಸಿದೆಯೇ? ಸಾದಿಸುವುದರಲ್ಲಿ ನಮಗೆ ತೃಪ್ತಿ ಇದೆಯೇ, ತೃಪ್ತಿ ಇಲ್ಲದಿದ್ದಲ್ಲಿ ನಾವು ಎಲ್ಲಿ ಎಡವಿದ್ದೇವೆ ಯಾವ ಪ್ರಭಲ ಸವಾಲುಗಳು, ಬೆದರಿಕೆಗಳನ್ನು ನಾವು ಎದುರಿಸುತ್ತಿದ್ದೇವೆ. ಇವುಗಳನ್ನು ಪರಿಹರಿಸಿಕೊಳ್ಳಲು ಇರುವ ಮಾರ್ಗೋಪಾಯ ಗಳಾವುವು; ಪರಿಹಾರಗಳು ಯಾವುವು? ಎಂದು ವಿಮರ್ಶೆ ಮಾಡಿಕೊಳ್ಳಲು ತಪ್ಪುಗಳನ್ನು ಸರಿಪಡಿಸಿಕೊಂಡು ಯಶಸ್ಸು ಗಳಿಸಲು ಸಾಧ್ಯ. ಇದಕ್ಕೆ ಈ ಸಹಕಾರ ಸಪ್ತಾಹವು ಸದಾವಕಾಶವನ್ನು ಒದಗಿಸಿದೆ.

ಭಾರತದಲ್ಲಿ ಸಹಕಾರ ಚಳುವಳಿಗೆ ಸರ್ಕಾರ ಮತ್ತು ಕಾಯ್ದೆ ಬೆಂಬಲವಾಗಿ ನಿಂತಿದ್ದು ಈಗ ಇತಿಹಾಸ ಎಂದೇ ಪರಿಗಣಿಸಬೇಕಾಗಿದೆ. ಸಹಕಾರ ಕಾಯ್ದೆ ‘ಸಹಕಾರ ತತ್ವ’ಗಳ ಆಧಾರಿತವಾಗಿಯೇ ರಚನೆಯಾಗಿ ಸಹಕಾರದ ಆರನೇ ತತ್ವವೇ ‘ಸಹಕಾರ ಸಂಘಗಳ ನಡುವೆ ಸಹಕಾರ’ ಇದುವೇ ಒಂದು ಸಹಕಾರ ಜಾಲ ನಿರ್ಮಿಸಲು ಕಾರಣವಾಗಿದೆ. ವಿವಿಧ ವಲಯವಾರು ತ್ರಿಭುಜಾಕೃತಿಯ ‘ಸಹಕಾರ ವ್ಯವಸ್ಥೆ’ ನಿರ್ಮಾಣ ಮಾಡಲು ಸಾಧ್ಯವಾಯಿತು. ಅಲ್ಪಾವಧಿ ಪತ್ತು, ದೀರ್ಘಾವಧಿ ಪತ್ತು, ಮಾರುಕಟ್ಟೆ, ಗ್ರಾಹಕರ (ಬಳಕೆದಾರರ), ಹೈನುಗಾರಿಕೆ ಹೀಗೆ ಹತ್ತಾರು ವಲಯಗಳು ನಿರ್ಮಾಣಗೊಂಡಿದೆ. ಅಕ್ಷರಷಃ ‘ಆಡು ಮುಟ್ಟದ ಸೊಪ್ಪಿಲ್ಲ, ಸಹಕಾರ ವಲಯ ಇಲ್ಲದ ಕ್ಷೇತ್ರವಿಲ್ಲ’ ಎಂಬ ಮಾತು ಸತ್ಯ. ಇದಕ್ಕೆ ಸರ್ಕಾರವು ಬೆಂಬಲ ನೀಡಿ, ಪೋಷಿಸಿ ಪ್ರೋತ್ಸಾಹಿಸಲಾಗಿದೆ. ಭಾರತದಲ್ಲಿ ಹಸಿರು ಕ್ರಾಂತಿ, ಶ್ವೇತ ಕ್ರಾಂತಿ, ನೀಲಿ ಕ್ರಾಂತಿ (ಮೀನುಗಾರಿಕೆ)ಗೆ ಕಾರಣವಾಗಿರುತ್ತದೆ. ಹಾಲಿ ಇತಿಹಾಸ ಸೃಷ್ಟಿಸಿರುವುದರ ಬಗ್ಗೆ ಹೆಮ್ಮೆ ಪಟ್ಟರೆ ಸಾಲದು. ಹಾಲಿ ಪರಿಸ್ಥಿತಿ ಏನಾಗಿದೆ, ಸ್ಪರ್ಧಾತ್ಮಕ ಯುಗದಲ್ಲಿ ಸ್ವಾಯತ್ತತೆ, ಸ್ವಾತಂತ್ರ್ಯ ಸಾಧಿಸಲಾಗಿದೆಯೇ? ಮುಂದೇನು? ಎಂಬ ಪ್ರಶ್ನೆ ಕಾಡುತ್ತಿಲ್ಲವೇ?

ಭಾರತದಲ್ಲಿ ಹಸಿರು ಕ್ರಾಂತಿ, ಶ್ವೇತ ಕ್ರಾಂತಿ, ನೀಲಿ ಕ್ರಾಂತಿ ಯಾಗಿ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಭನೆ ಸಾಧಿಸಲಾಗಿದೆ. ನಿವ್ವಳ ಆಮದು ಇದ್ದದ್ದು ನಿವ್ವಳ ರಫ್ತು ಸಾಧಿಸಿದ್ದೇವೆ. ಈ ಹೆಮ್ಮೆಯ ಗರಿಯೊಡನೆ ಮತ್ತೊಂದು ಬದಿಯ ವಾಸ್ತವತೆ 2019ರ ಹಸಿವು ಸೂಚ್ಯಂಕದ ಪ್ರಕಾರ 117 ರಾಷ್ಟ್ರಗಳ ಪೈಕಿ ಭಾರತ 102ನೇ ಸ್ಥಾನದಲ್ಲಿದೆ. ನಿತ್ಯ 20 ಕೋಟಿ ಭಾರತೀಯರು ಹಸಿದುಕೊಂಡೇ ಬದುಕು ನಡೆಸುತ್ತಿದ್ದಾರೆ. ಪೌಷ್ಠಿಕಾಂಶದ ಕೊರತೆಯಿಂದ ರಾಷ್ಟ್ರದ ಶೇಕಡ 14 ಜನಸಂಖ್ಯೆ ಬಳಲುತ್ತಿದೆ. ಜಾಗತಿಕ ಮಟ್ಟದಲ್ಲಿಯೂ ಅಂಕಿ ಅಂಶಗಳು ಆಶಾದಾಯಕವಾಗಿಲ್ಲ. ಎರಡು ಬಿಲಿಯನ್ ಜನಸಂಖ್ಯೆ ಸಾಕಷ್ಟು ಆಹಾರ, ಪೌಷ್ಟಿಕ ಆಹಾರ, ಕ್ಷೇಮಕರ ಆಹಾರದಿಂದ ವಂಚಿತರಾಗಿದ್ದಾರೆ. ವಿಶ್ವಸಂಸ್ಥೆ 2030ಕ್ಕೆ ‘ಶೂನ್ಯ ಹಸಿವು’ ಸಾಧಿಸುವ ಗುರಿ ಹೊಂದಿದೆ. ಇದರ ಅರ್ಥವನ್ನು ನಾವು ಅರಿಯಬೇಕಾಗಿದೆ. ನಾವು ಎಲ್ಲಿ ಸೋತಿದ್ದೇವೆ ಎಂಬುದನ್ನು ವಿಶ್ಲೇಷಿಸಬೇಕಾಗಿದೆ.

ಉತ್ಪಾದನೆ ಇದೆ ಆದರೆ ಹಂಚಿಕೆಯಾಗುತ್ತಿಲ್ಲ. ತಲುಪಬೇಕಾದವರಿಗೆ ತಲುಪುತ್ತಿಲ್ಲ. ಕಾರಣವಾದರು ಕೈಯಲ್ಲಿನ ಕನ್ನಡಿಯಂತಿದೆ. ನಿರುದ್ಯೋಗ ಮತ್ತು ಖರೀದಿ ಶಕ್ತಿ ಇಲ್ಲದಿರುವುದು. ಇದಕ್ಕೆ ಕಾರಣವಾಗಿರುವುದು ನಾವು ಅನುಸರಿಸುತ್ತಿರುವ ಬೆಳವಣಿಗೆಯ ದಾರಿ. ಖಾಸಗಿ ವಲಯವೇ ನಮ್ಮ ಸಮಸ್ಯೆಗೆ ಪರಿಹಾರವಲ್ಲ. ಖಾಸಗೀಕರಣ ಶ್ರೀಮಂತ ಬಡವರ ಅಂತರ ಹಿಗ್ಗಿಸುತ್ತಿದೆ. ಸಾರ್ವಜನಿಕ ವಲಯ ಪರಿಹಾರವಾದರೂ ಕಾರ್ಯ ಕ್ಷಮತೆ ಇಲ್ಲ. ಎಲ್ಲವನ್ನೂ ಸರ್ಕಾರವೇ ನಿಭಾಯಿಸಲಾಗುವುದಿಲ್ಲ. ಇದಕ್ಕೆ ಪರಿಹಾರವೇ ‘ಸಹಕಾರ ವಲಯ’. ಸಹಕಾರ ಚಳುವಳಿ ಮಾತ್ರ ಆರ್ಥಿಕ ಸಾಮಾಜಿಕ ನ್ಯಾಯ ಒದಗಿಸಬಲ್ಲದು. ಇದಕ್ಕೆ ಬೆಂಬಲವಾಗಿ ನಿಲ್ಲುವ ಸಹಕಾರ ತತ್ವವೇ ‘ಸಹಕಾರ ಸಂಘಗಳ ನಡುವೆ ಸಹಕಾರ’.

ವಿಶ್ವಾದ್ಯಂತ ನಮ್ಮ ಹಿರಿಯ ಸಹಕಾರ ಅತ್ಯಂತ ದೂರಾಲೋಚನೆಯಿಂದ ಕರ್ತವ್ಯ ನಿರ್ವಹಿಸಿರುತ್ತಾರೆ. ಅನೇಕ ಅಧ್ಯಯನ ವರದಿಗಳು ಕೂಡ ಈ ತತ್ವಕ್ಕೆ ಪ್ರಾಶಸ್ತ್ಯ ನೀಡಿವೆ. ಇದರ ಫಲಶೃತಿಯಿಂದ ಭಾರತವೂ ಸೇರಿದಂತೆ ವಿಶ್ವಾದ್ಯಂತ ಶೃಂಗ ಸಂಘಗಳ ರಚನೆಯಾಗಿದೆ. ಅಲ್ಲದೆ ವಿವಿಧ ಸಹಕಾರ ವಲಯಗಳ ನಡುವೆಯೂ ಈ ತತ್ವವು ಸಹಕಾರವನ್ನು ಬಯಸುತ್ತದೆ. ಆದುದರಿಂದಲೇ ಈ ತತ್ವಾಚರಣೆಯು ಲಂಭವಾಗಿ (vertical) ಮತ್ತು ಅಡ್ಡಲಾಗಿ (ಸಮತಟ್ಟಾಗಿ) (horizantal) ಇರಬೇಕಾಗಿ ನಿರೀಕ್ಷಿಸಿದೆ. ಭಾರತದಲ್ಲಿ ಇದಕ್ಕೆ ಪೋಷಕವಾಗಿ ಕಾಯ್ದೆಯಾಂಶಗಳಿವೆ. ಉದಾಹರಣೆ: ಶೃಂಗಸಂಸ್ಥೆಗಳ ರಚನೆಗೆ ಕಾಯ್ದೆಯಲ್ಲಿ ಅವಕಾಶ, ಸಹಕಾರ ವಲಯದಲ್ಲಿ ಕಲೆತಿರುವ ಬಂಡವಾಳ ಹೊರಹೋಗದಂತೆ ಸಹಕಾರ ವಲಯದಲ್ಲೇ ವಿನಿಯೋಗಕ್ಕೆ ಅವಕಾಶವಾಗುವಂತೆ ಸಹಕಾರ ಸಂಘಗಳು ಸಹಕಾರ ಬ್ಯಾಂಕಿನಲ್ಲಿಯೇ ಠೇವಣಿಸಲು ಅವಕಾಶ. ಆದರೆ ಇತ್ತೀಚಿನ ದಿನಗಳಲ್ಲಿ ಆದ ಉದಾರೀಕರಣ ನೀತಿಯಿಂದ ವಾಣಿಜ್ಯ ಬ್ಯಾಂಕುಗಳು ಖಾಸಿಗಿ ಬ್ಯಾಂಕುಗಳಲ್ಲಿಯೂ ಸಹಕಾರ ಸಂಸ್ಥೆಗಳು ವ್ಯವಹರಿಸುವುದನ್ನು

ಕಾಣುತ್ತಿದ್ದೇವೆ. ಸಹಕಾರಿಗಳು ಈ ತತ್ವ ಪಾಲನೆಯ ಮಹತ್ವವನ್ನು ಅರಿಯಬೇಕಾಗಿದೆ. ನಮ್ಮ ಸಹಕಾರ ಬ್ಯಾಂಕುಗಳೂ ಡಿಜಟಲೀಕರಣಗೊಂಡು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಅವೂ ಸಶಕ್ತವಾಗಿದೆ. ಸಹಕಾರವೆಂದರೆ 'ನಮ್ಮದು' ನಮ್ಮ ವಲಯ ಎಂಬ ಅಭಿಮಾನ ಮೂಡಬೇಕಾಗಿದೆ. ಇದರಿಂದ ನಮ್ಮಲ್ಲಿ ಕ್ರೌಢೀಕರಣಗೊಂಡ ನಿಧಿಗಳು ನಮ್ಮಲ್ಲಿಯೇ ಉಳಿದು ಬಂಡವಾಳ ದೊರೆತಂತಾಗುತ್ತದೆ.

ಭಾರತದಲ್ಲಿ ವಲಯಾವಾರು ತ್ರಿಭುಜಾಕೃತಿಯ ಶೃಂಗ ವ್ಯವಸ್ಥೆಯ ವಿಶ್ಲೇಷಣೆ ಈ ಹಂತದಲ್ಲಿ ಉಚಿತವೆಂದು ಕಂಡುಬರುತ್ತದೆ. ಲಂಭರೇಖೆಯಲ್ಲಿ ರಚಿತವಾಗಿರುವ ಈ ರಚನೆಯಲ್ಲಿ ಅತ್ಯಂತ ತಳಹದಿಯಲ್ಲಿರುವುದು ಗ್ರಾಮೀಣ, ತಾಲ್ಲೂಕು ಮಟ್ಟದ ಪ್ರಾಥಮಿಕ ಸಹಕಾರ ಸಂಘಗಳು. ಇದರ ಸದಸ್ಯರೇ ವೈಯುಕ್ತಿಕ ಸದಸ್ಯರು. ಇದೇ ಚಳುವಳಿಯ ಗುರಿ. ಇವರ ಶ್ರೇಯೋಭಿವೃದ್ಧಿ, ಇವರಿಗೆ ಸಾಮಾಜಿಕ ಆರ್ಥಿಕ ನ್ಯಾಯ ಒದಗಿಸುವುದು. ಒಂದು ಸಹಕಾರ ಸಂಘ ನೆರವೇರಿಸಲಾರದ್ದನ್ನು ಅನೇಕ ಸಹಕಾರ ಸಂಘಗಳು ಒಗ್ಗೂಡಿ ಜಿಲ್ಲಾ, ಹಲವು ಜಿಲ್ಲೆಗಳ ಒಕ್ಕೂಟಗಳು, ಒಕ್ಕೂಟಗಳು ಒಗ್ಗೂಡಿ ರಾಜ್ಯ ಮಹಾಮಂಡಲ, ರಾಜ್ಯ ಮಹಾಮಂಡಲಗಳು ಒಗ್ಗೂಡಿ ರಾಷ್ಟ್ರಮಟ್ಟದ ಮಹಾಮಂಡಲಗಳನ್ನು ರಚಿಸಿಕೊಂಡಿದ್ದೇವೆ. ಈ ಜಾಲ ನಿರ್ಮಾಣದ ಉದ್ದೇಶ ಅಂತಿಮವಾಗಿ ತಳಪಾಯ, ಬುನಾಧಿಯಾಗಿರುವ ಪ್ರಾಥಮಿಕ ಸಂಘದ ವ್ಯಕ್ತಿ. ಇದನ್ನು ಸಾಧಿಸಲಾಗುತ್ತಿದೆಯೇ. ವಿವಿಧ ಹಂತಗಳಲ್ಲಿ ನಾವು ಯಾರನ್ನು ಫಲಾನುಭವಿಗಳಾಗಿಸುತ್ತಿದ್ದೇವೆ. ಶೃಂಗ ರಚನೆಯ ಉದ್ದೇಶ ಈಡೇರಿಸಲಾಗುತಿದೆಯೇ ಎಂಬ ಪ್ರಶ್ನೆಗಳು ನಮ್ಮಲ್ಲಿ ಮೂಡಲಾರಂಭಿಸಿವೆ. ಸ್ವಾತಂತ್ರ್ಯಾನಂತರ ಅತ್ಯದ್ಭುತವಾಗಿ ಬೆಳೆದು ಬಂದವು ಆದರೆ 90ರ ದಶಕದಿಂದ ಈಚೆಗೆ ಕ್ಷೇತ್ರಾವಾರು ವಿಶ್ಲೇಷಿಸಿದಲ್ಲಿ ಕೆಲವೇ ಕ್ಷೇತ್ರಗಳಲ್ಲಿ ಆಶಾದಾಯಕ ಬೆಳವಣಿಗೆಗಳನ್ನು ಕಾಣಬಹುದಾಗಿದೆ.

1. ಅಲ್ಪಾವಧಿ ಸಾಲ ಕ್ಷೇತ್ರದಲ್ಲಿ ಶೃಂಗ ವ್ಯವಸ್ಥೆ ಸಬಲವಾಗಿದೆ. ತಳಹಂತದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (PACS) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (DCC Bank), ರಾಜ್ಯ ಸಹಕಾರ ಬ್ಯಾಂಕ್ (Stc bank, Apex bank), ಕೇರಳ ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ತೆಗೆಯಲಾಗಿ ದ್ವಿ ಹಂತ ವ್ಯವಸ್ಥೆ ಬಂದಿದೆ. ಎಷ್ಟರ ಮಟ್ಟಿಗೆ ಇದು ಪ್ರಜಾಸತ್ತಾತ್ಮಕವಾಗಿದೆ ಎಂಬುದನ್ನು ಅಧ್ಯಯನಗಳಿಂದ ಅರಿಯಬೇಕಾಗಿದೆ. ರಾಜ್ಯ ಸರ್ಕಾರಗಳ ಬಡ್ಡಿ ಮನ್ನಾಯೋಜನೆ ಎಷ್ಟರ ಮಟ್ಟಿಗೆ ವಲಯ ಬೆಳೆಯಲು ಸಹಕಾರಿಯಾಗಿದೆ ಎಂಬುದನ್ನು ಅಧ್ಯಯನಗಳು ಬೆಳಕು ಚೆಲ್ಲಬೇಕಾಗಿದೆ. ಉತ್ತುಂಗ ಸಂಸ್ಥೆ, ರಾಜ್ಯ ಸಹಕಾರ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಗಳ ಹಿತಾಸಕ್ತಿ ಕಾಪಾಡುವುದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಪಾಕ್ಸ್‌ಗಳ ಹಿತಾಸಕ್ತಿ ಕಾಪಾಡುವುದು ಮತ್ತು ಅವುಗಳೇ ಬುನಾದಿಯಾಗಿರುವುದರಿಂದ ಅವುಗಳ ಪಾಲನೆ, ಪೋಷಣೆ ಎಷ್ಟರ ಮಟ್ಟಿಗೆ ಯಾವರೀತಿ ಆಗುತ್ತದೆ ಎಂಬುದು ಬಹು ಮುಖ್ಯ ಪ್ರಶ್ನೆಯಾಗಿದೆ.

2. ದೀರ್ಘಾವಧಿ ಸಾಲ ಕ್ಷೇತ್ರ ಎರಡು ಹಂತದ ವ್ಯವಸ್ಥೆಯನ್ನು ಹೊಂದಿದ್ದು ಈ ಸಾಲ ವಲಯದ ನೀತಿ ನಿಯಮಾವಳಿಗಳು ಸವಕಳಿಯಾಗಿದ್ದು, ಸಡಿಲಗೊಂಡಿದ್ದು, ಆರ್ಥಿಕ ಸಂಪನ್ಮೂಲಕ್ಕೆ ಪ್ರಮುಖ ಮೂಲವಾದ ಅಡಮಾನು ಆಸ್ತಿ ಆಧಾರಿತ ಡಿಬೆಂಚರುಗಳ ಮಾರಾಟವೇ ಮರೆತು ಹೋಗಿದೆ. ಹಂತಗಳಲ್ಲಿನ ನಿರಂತರ 'ಅಂತರ' (GAP) ತುಂಬಲಾರದ ಸ್ಥಿತಿಯಾಗಿ ಯಾವುದೇ ಕ್ರಿಯಾ ಯೋಜನೆ ಅನುಷ್ಠಾನ ಗೊಳಿಸುವುದು ಕಷ್ಟಕರ ಪರಿಸ್ಥಿತಿ ತಲುಪಿದೆ. ಈ ತತ್ವ ಪರಿಪಾಲನೆಯ ಸಂಕಷ್ಟಗಳನ್ನು ಈ ವಲಯದ ಅಧ್ಯಯನ ಪರಿಣಾಮಕಾ–ರಿಯಾಗಿ ಪ್ರತಿಬಿಂಬಿಸುತ್ತದೆ.

3. ಕೃಷಿ ಮಾರುಕಟ್ಟೆ ವಲಯದಲ್ಲಿ ತಾಲ್ಲೂಕಿನ ಮಟ್ಟದ ಮಾಧ್ಯಮಿಕ ಸಹಕಾರ ಸಂಘಗಳು (ಕೆಲವು ಅಪವಾದಗಳಿವೆ) ಸರ್ಕಾರದ ಬೆಂಬಲ ನೀತಿ ಇರುವವರೆಗೂ ಅತ್ಯಂತ ಶ್ಲಾಘನೀಯ ಕರ್ತವ್ಯ ನಿರ್ವಹಿಸಿದೆ. ಕೃಷಿ ಉತ್ಪನ್ನ, ಸಂಸ್ಕರಣೆ, ಮಾರಾಟ, ಕೃಷಿ ಅಗತ್ಯತೆಗಳಾದ ರಸಗೊಬ್ಬರ, ಔಷಧಿ ಸರಬರಾಜು, ಉತ್ಪತ್ತಿ ಈಡಿನ ಸಾಲ, ತನ್ನ ಸದಸ್ಯ ಪ್ಯಾಕ್ಸ್‌ನೊಡನೆ ವ್ಯವಹಾರ ಇವುಗಳ ಶೃಂಗ ಸಂಸ್ಥೆಯಾದ ರಾಜ್ಯ ಮಹಾಮಂಡಲ, ರಾಷ್ಟ್ರಮಟ್ಟದಲ್ಲಿ ನ್ಯಾಫೆಡ್. ಆದರೆ ಈಗಿನ ಪರಿಸ್ಥಿತಿ ಏನಾಗಿದೆ. ಪ್ರತಿ ಹಂತವೂ ಸ್ವತಂತ್ರ ವಾಗಿ ನಿರ್ವಹಣೆಯಾರಂಬಿಸಿ ಕೊಂಡಿ ವ್ಯವಸ್ಥೆಯೇ ಕುಸಿದುಬಿದ್ದಿದೆ.

4. ಗ್ರಾಹಕರ (ಬಳಕೆದಾರರ) ಸಹಕಾರ ವಲಯ ಪ್ರಾಥಮಿಕ ಸಂಘಗಳು ಜಿಲ್ಲಾ ಸಗಟು ಮಾರಾಟ ಸ್ಟೋರ್ಸ್, ರಾಜ್ಯ ಮಹಾಮಂಡಳ, ರಾಷ್ಟ್ರಮಟ್ಟದ ಮಹಾಮಂಡಳ. ಎರಡನೇ ಮಹಾಯುದ್ದದ ನಂತರ, ರಾಷ್ಟ್ರದ ಸ್ವಾತಂತ್ರ್ಯ ನಂತರ ಪಡಿತರ ವಿತರಣೆ ಮಹತ್ತರ ಕಾರ್ಯವಾಗಿದ್ದು, ಅದರಲ್ಲಿಯೂ ನಗರ, ಅರೆನಗರ ಪ್ರದೇಶದಲ್ಲಿ ಅವಶ್ಯಕತೆಗನುಸಾರ ಬೃಹದಾಕಾರವಾಗಿ ಬೆಳೆದದ್ದನ್ನು ಕಂಡಿದ್ದೇವೆ. ಡಿಪಾರ್ಟ್‌ಮೆಂಟಲ್‌ಸ್ಟೋರ್ಸ್ ಪರಿಕಲ್ಪನೆ ಮೂಡಿಬಂದದ್ದೇ ಸಹಕಾರ ವಲಯದಿಂದ. 'ಜನತಾ ಬಜಾರ್'ಗಳು (ಅಪನಾ ಬಜಾರ್), ಈ ವಲಯದಲ್ಲಿ ಹಂತಾವಾರು ಯಾವುದೇ ಸಂಬಂಧಗಳುಳಿದಿಲ್ಲ. ಈ ತತ್ವ ಪಾಲನೆ ಸಾಧ್ಯವೇ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಸಗಿ ವಲಯದ ಏಕಸ್ವಾಮ್ಯತೆಯಾಗಿರುವ ಅಭಿಪ್ರಾಯ ಮೂಡಿಬರುತ್ತಿದೆ.

5. ಇತರೆ ಅನೇಕ ಉತ್ಪಾದನಾ ಮಾರಾಟ ಕ್ಷೇತ್ರಗಳಲ್ಲಿಯೂ ಕೇವಲ ಸಂರಚನೆಗಾಗಿ ಅಸ್ತಿತ್ವದಲ್ಲಿರುವುದು ಕಂಡುಬರುತ್ತಿದೆ. ಸಕ್ಕರೆ ಕಾರ್ಖಾನೆ, ಹತ್ತಿ

ಗಿರಣಿ, ಉಣ್ಣೆ ನೇಕಾರರು ಹೀಗೆ ಹತ್ತು ಹಲವಾರು ಎಣ್ಣೆ ಬೀಜಗಳದ್ದು ಕರ್ನಾಟಕದಲ್ಲಿ ಯಶಸ್ವಿಯಾಗಿ 'ಸಫಲ್' ಬ್ರಾಂಡ್‌ಗೆ ಕಾರಣವಾಗಿದೆ.

6. ಅತ್ಯಂತ ಯಶಸ್ವಿ ಕ್ಷೇತ್ರವೆಂದರೆ ಹೈನುಗಾರಿಕೆ ಕ್ಷೇತ್ರ. ಅದರಲ್ಲಿಯೂ ಕರ್ನಾಟಕದಲ್ಲಿ 'ನಂದಿನಿ' ಬ್ರಾಂಡ್ ನಿರ್ಮಾಣ 'ಅಮುಲ್' ಮಾದರಿಯಾಗಿ ನಾಲ್ಕು ದಶಕಗಳಿಂದ ಅನುಷ್ಠಾನಗೊಂಡ 'ಕರ್ನಾಟಕ ಹೈನು ಅಭಿವೃದ್ಧಿ ಯೋಜನೆ' ಕ್ಷೀರದಾರ ಯೋಜನೆ I, II, III ರ ಫಲ. ಪ್ರತಿ ಹಂತಕ್ಕೂ ತನ್ನದೇ ನಿರ್ದಿಷ್ಟ ಕರ್ತವ್ಯ ಹಂಚಿಕೆ. ವ್ಯವಹಾರದ ಲಾಭದ ತಳಹರಿವು ಅಂತಿಮವಾಗಿ ಸದಸ್ಯನ ಹಿತ ಮತ್ತು ಸದಸ್ಯನ ರಾಸುವಿನ ಹಿತ ಕಾಯುವುದಾಗಿದೆ. ಉತ್ಪನ್ನದ ಮಾರುಕಟ್ಟೆ ಸಾಧನೆ ಬಳಕೆದಾರ ಮತ್ತು ಉತ್ಪಾದಕನ ಕೊಂಡಿ 'ರೈತನೇ' ಆಗಿರುತ್ತಾನೆ. ಈ ಸಾಧನೆ ಪ್ರಜಾಸತ್ತಾತ್ಮಕ ಸಹಕಾರ ಆಡಳಿತ ವಿಧಾನ. ಈ ತತ್ವ ಪಾಲನೆಯು ಲಂಭವಾಗಿಯೂ ಪರಿಪೂರ್ಣವಾಗಿ ಆಗಿರುವುದರಿಂದಲೇ ಈ ವಲಯ ಯಶಸ್ವಿಯಾಗಿರುತ್ತದೆ. ಯೋಜನೆಯ ಗುರಿಯಾಗಿದ್ದ ಭಾರತದ ಪ್ರತಿ ಪ್ರಜೆಗೆ ಕನಿಷ್ಟ 240 ಮಿ.ಲಿ. ಹಾಲು ಲಭ್ಯವಾಗುವುದಾಗಿದ್ದು ಅದರ ಸಾಧನೆಯಾಗಿರುವುದು ಹೆಮ್ಮೆಯ ವಿಷಯವಾಗಿರುತ್ತದೆ. ವಿಶ್ವದಲ್ಲೇ ಅತಿ ಹೆಚ್ಚಿನ ಹಾಲು ಉತ್ಪಾದನಾ ರಾಷ್ಟ್ರವಾಗಿದೆ. ಕರ್ನಾಟಕದಲ್ಲಿ ಸರ್ಕಾರದ ಪ್ರೋತ್ಸಾಹಿಕ ಕ್ರಮಗಳು (ರೂ. ಐದು ಪ್ರತಿ ಲೀಟರ್‌ಗೆ) ಶಾಲಾ ಮಕ್ಕಳಿಗೆ ಉಚಿತ ಹಾಲು ವಿತರಣೆ ನೆರವಿಗೆ ಬಂದಿರುತ್ತದೆ. ಸಹಕಾರ ಬ್ರಾಂಡ್ ಆಗಿ 'ನಂದಿನಿ' ಹೊರಹೊಮ್ಮಿದ್ದು, ಮಹಾಮಂಡಳ, ಒಕ್ಕೂಟಗಳು ಗ್ರಾಮಾಂತರ ಪ್ರದೇಶದ ಅನೇಕ ಸಾಮಾಜಿಕ, ಶೈಕ್ಷಣಿಕ ಕಾರ್ಯಗಳಲ್ಲೂ ಭಾಗಿಯಾಗಿರುವುದು. ಅದರಲ್ಲಿಯೂ ಮಹಿಳೆಯರದೇ ಆದ ಸಹಕಾರ ಸಂಘಗಳ ಸ್ಥಾಪನೆ (STEP) (ಭಾರತ ಸರ್ಕಾರದ ಸಹಯೋಗ) ಮಹಿಳೆಯರ ಸಬಲತೆಗೆ ಈ ಸಂಘಗಳಲ್ಲದೇ ಇಡೀ ಹೈನುಗಾರಿಕೆ ಕಾರಣವಾಗಿರುತ್ತದೆ.

7. ಪಟ್ಟಣ ಬ್ಯಾಂಕ್ ಗಳ ಕ್ಷೇತ್ರ, ಕೃಷಿಯೇತರ ಪತ್ತಿನ ಕ್ಷೇತ್ರ, ಸೌಹಾರ್ದ ಸಹಕಾರಿಕ್ಷೇತ್ರ, ಶಿಕ್ಷಣ, ತರಬೇತಿ ಕ್ಷೇತ್ರಗಳಲ್ಲಿ ಒಕ್ಕೂಟ ಮಹಾಮಂಡಳಗಳು, ತರಬೇತಿ, ಶಿಕ್ಷಣ ಪ್ರಚಾರವಲ್ಲದೇ ಇನ್ನಿತರ ಸೇವಾಕಾರ್ಯ (ಉದಾಹರಣೆ: ಇ–ಸ್ಟಾಂಪಿಂಗ್) ಶಾಸನಬದ್ಧ ಕೆಲಸ (ಉದಾ: ಸಂಯುಕ್ತ ಸಹಕಾರಿ) ಅತ್ಯುತ್ತಮ ಕಾರ್ಯವೆಸಗುತ್ತಿದ್ದು ಪ್ರಾಥಮಿಕ ಸಂಸ್ಥೆಗಳ ಮತ್ತು ಸದಸ್ಯರ ಹಿತ ಕಾಪಾಡುವಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿವೆ.

ಲಂಬವಾಗಿ (Vertical) ಸಹಕಾರ ಸಂಘಗಳ ನಡುವೆ ಸಹಕಾರ ತತ್ವ ಪಾಲನೆಯ ಸಂಕ್ಷಿಪ್ತ ನೋಟ ಇದಾಗಿದೆ.

ಅಡ್ಡವಾಗಿ (Horizantal) ಸಮತಟ್ಟಾದ ನೆಲೆಯಲ್ಲಿ ಸಹಕಾರ ಸಂಘಗಳ ನಡುವೆ ಸಹಕಾರವು ಸಹಕಾರ ಚಳುವಳಿಯ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತದೆ. ಗ್ರಾಮೀಣಮಟ್ಟದಲ್ಲಿ ಪ್ರಾಥಮಿಕ ಸಂಘಗಳ ನಡುವೆ ಉತ್ಪಾದನಾ ಸಹಕಾರ ಸಂಘಗಳಿಗೂ ಪತ್ತಿನ ಸಹಕಾರ ಸಂಘಗಳಿಗೂ ಸಹಕಾರ. ಉದಾಹರಣೆ: ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರಿಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಹೈನುಗಾರಿಕೆ ಸಾಲ ಒದಗಿಸುವುದು. ಹಾಲು ಉತ್ಪಾದಕರ ಸಹಕಾರ ಸಂಘ ಕಂತು ಮುರಿದು ಸಾಲಕ್ಕೆ ಜಮಾನೀಡುವುದು. ಇದಕ್ಕಾಗಿ ಒಪ್ಪಂದಗಳನ್ನು ಮಾಡುವುದು. ಸ್ವಸಹಾಯ ಗುಂಪುಗಳ ರಚನೆ, ಜಂಟಿ ಬಾಧ್ಯತಾ ಗುಂಪುಗಳ ರಚನೆ ಅವುಗಳಿಗೆ ಹೈನು ಆಧಾರಿತ ಸಾಲ ಒದಗಿಸುವುದು. ಇದೇ ರೀತಿ ರೇಷ್ಮೆ, ಉಣ್ಣೆ, ನೇಕಾರಿಕೆ ಇತರೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಹಕಾರ ಹಾಲು ಒಕ್ಕೂಟ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ಉದಾ: ಕೋಲಾರ, ಚಿಕ್ಕಬಳ್ಳಾಪುರ ಹಾಲು ಒಕ್ಕೂಟ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಪುನಶ್ಚೇತನದಲ್ಲಿ ಸಹಕರಿಸಿದ್ದು ಸ್ವಾನುಭವ), ರಾಜ್ಯ ಮಟ್ಟದಲ್ಲಿ ರಾಜ್ಯ ಮಟ್ಟದ ಸಂಸ್ಥೆಗಳು ಒಂದಕ್ಕೊಂದು ಆರ್ಥಿಕ ಮತ್ತಿತರೆ ವಿಷಯಗಳಲ್ಲಿ ಸಹಕರಿಸುವುದು. ಪ್ರಾಥಮಿಕ ಹಂತದಲ್ಲಿ ತಮ್ಮದೇ ತೆರನಾದ ಇತರೆ ಸಂಸ್ಥೆಗಳಿಗೆ ಆರ್ಥಿಕ ಅಥವ ಇನ್ನಿತರೆ ವಿಷಯಗಳಲ್ಲಿ ಸಹಕರಿಸುವುದು.

ಸಹಕಾರ ಮೌಲ್ಯಗಳಲ್ಲಿ 'ಒಗ್ಗಟ್ಟು' ಅತ್ಯಮೂಲ್ಯ ಎಂದು ಪರಿಗಣಿಸಲಾಗಿದೆ. ಒಗ್ಗಟ್ಟಿಲ್ಲದೇ ಇದ್ದರೆ ಸಹಕಾರ ಸಂಘ ಯಶಸ್ವಿಕಾರ್ಯಾಚರಣೆ ನಡೆಸಲಾಗುವುದಿಲ್ಲ. ಅದರಂತೆ ಸಹಕಾರವೇ ಒಂದು ಕುಟುಂಬ ಎಂದು ತಿಳಿಯಬೇಕು. ಸಹಕಾರ ಕುಟುಂಬದ ಏಳ್ಗೆ ಒಗ್ಗಟ್ಟು ಮತ್ತು ಸಹಕಾರದಿಂದ ಸಾಧ್ಯ. ಈ ದಿಸೆಯಲ್ಲಿ ಸಹಕಾರ ಸಂಸ್ಥೆಗಳು ಸ್ವಾವಲಂಭಿಗಳಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕೆಂದರೆ 'ಸಹಕಾರ ಸಂಸ್ಥೆಗಳ ನಡುವೆ ಸಹಕಾರ' ತತ್ವಾಚರಣೆ ಅತಿ ಅಗತ್ಯ. ಇದರಿಂದ ಬಂಡವಾಳ ಕ್ರೋಢೀಕರಣ, ಹೂಡಿಕೆ, ಆದಾಯ, ರಾಷ್ಟ್ರದೊಳಗೆ ಮತ್ತು ಅಂತರಾಷ್ಟ್ರೀಯ ವ್ಯವಹಾರ ಹೆಚ್ಚಳಗೊಳಿಸಲು ಸಾಧ್ಯ. ಸಹಕಾರದ ಗುರುತು (ಬ್ರಾಂಡ್) ಪ್ರತಿಮೆ (ಐಡೆಂಟಿಟಿ) ನಿರ್ಮಾಣ ಸಾಧ್ಯ. ಇದರಿಂದ ಸಾರ್ವಜನಿಕರಲ್ಲಿ ಸಮುದಾಯದಲ್ಲಿ ಸದಭಿಪ್ರಾಯ ಮೂಡಿಸಲು ತನ್ಮೂಲಕ ಅಂತಿಮವಾಗಿ ಸದಸ್ಯರ ಸೇವೆ, ಆಸೆ ಆಕಾಂಕ್ಷೆಗಳ ಪೂರೈಕೆ ಸಾಧ್ಯ. ವಿಶ್ವ ಶಾಂತಿ ನೆಲೆಯಲ್ಲಿ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಸಾಧ್ಯ.

**ಕಾಗೆಯೊಂದಗಳ ಕಂಡರೆ**
**ಕರೆಯದೇ ತನ್ನ ಬಳಗವನ್ನು?**
**ಕೋಳಿಯೊಂದು ಕುಟುಕ ಕಂಡರೆ**
**ಕೂಗಿ ಕರೆಯದೇ ತನ್ನ ಕುಲವೆಲ್ಲವನ್ನು?**
**ಶಿವ ಭಕ್ತನಾಗಿ ಭಕ್ತಿ–ಪಕ್ಷವಿಲ್ಲದಿದ್ದರೆ**
**ಕಾಗೆ ಕೋಳಿಯಿಂದ ಕರಕಷ್ಟ ಕೂಡಲ ಸಂಗಮದೇವ**

**– ಬಸವಣ್ಣ**

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–8)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-8)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 8: ನಿರಂತರ, ಅಂತರ್ಗತ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಪೂರ್ಣ ಮತ್ತು ಉತ್ಪಾದಕ ಉದ್ಯೋಗ ಹಾಗೂ ಎಲ್ಲರಿಗೂ ಯೋಗ್ಯವಾದ ಕೆಲಸವನ್ನು ಸಾಧ್ಯವಾಗಿಸುವುದು**

**(Promote sustained, inclusive and sustainable economic growth, full and productive employment and decent work for all)**

ಅಭಿವೃದ್ಧಿಯ ಪ್ರಮುಖ ಮುಖವಾದ ಅರ್ಥಿಕ ಬೆಳವಣಿಗೆ (ಎಕೊನೊಮಿಕ್ ಗ್ರೋತ್) ಮತ್ತು ಪೂರ್ಣ ಉದ್ಯೋಗದ (ಫುಲ್ ಎಂಪ್ಲಾಯ್‌ಮೆಂಟ್) ಸಾಧನೆಯ ಬಗ್ಗೆ ಈ ಗುರಿಯು ಒತ್ತು ನೀಡುತ್ತದೆ. ಎಲ್ಲ ದೇಶಗಳೂ ಆರೋಗ್ಯಕರ ಆರ್ಥಿಕ ಬೆಳವಣಿಗೆಯನ್ನು ಸಾಧಿಸಬೇಕೆಂದೂ ಅದರಲ್ಲೂ ಅಭಿವೃದ್ಧಿಶೀಲ ದೇಶಗಳು ಕನಿಷ್ಠ ಶೇಕಡ 7ರ ದರದಲ್ಲಿ ತಮ್ಮ ರಾಷ್ಟ್ರೀಯ ಆದಾಯವನ್ನು ಹೆಚ್ಚಿಸಬೇಕೆಂದು ಈ ಗುರಿಯಲ್ಲಿ ನಿಗದಿಪಡಿಸಲಾಗಿದೆ. ಮೌಲ್ಯವರ್ಧಿತ ಮತ್ತು ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸುವ ಕ್ಷೇತ್ರಗಳ ಮೇಲೆ ಒತ್ತು ನೀಡುತ್ತಾ ವೈವಿಧ್ಯೀಕರಣ, ತಾಂತ್ರಿಕ ಬೆಳವಣಿಗೆ ಮತ್ತು ಆಧುನಿಕ ಮೂಲಗಳ ಮೂಲಕ ಉನ್ನತಮಟ್ಟದ ಆರ್ಥಿಕ ಉತ್ಪಾದಕತೆಯನ್ನು (ಎಕೊನೊಮಿಕ್ ಪ್ರೊಡಕ್ಟಿವಿಟಿ) ಸಾಧಿಸಲು ಹಾಗೂ ಉತ್ಪಾದಕ ಚಟುವಟಿ–ಕೆಗಳು ಉದ್ಯೋಗ ಸೃಷ್ಟಿ, ಉದ್ಯಮಶೀಲತೆ, ಸೃಜನಶೀಲತೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸಬೇಕೆಂದು ಈ ಗುರಿಯಲ್ಲಿ ಹೇಳಲಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ, 2030ರ ವೇಳೆಗೆ ಹಂತ ಹಂತವಾಗಿ ಆರ್ಥಿಕ ಬೆಳವಣಿಗೆಯನ್ನು ಪರಿಸರ ನಾಶ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಅತಿ ವಿನಿಯೋಗದಿಂದ ಬೇರ್ಪಡಿಸಿ ಜವಾಬಾರಿಯುತ ಅಭಿವೃದ್ಧಿಯನ್ನು ಸಾದಿಸಬೇಕೆಂಬ ಗುರಿಯನ್ನು ನಿಗದಿಪಡಿಸಲಾಗಿದೆ. ಎಲ್ಲ ದೇಶಗಳೂ ಯುವಕರು, ಮಹಿಳೆಯರು, ವಿಕಲಾಂಗರು ಮುಂತಾದವರಿಗೆ ಔದ್ಯೋಗಿಕ ಕುಶಲತೆಯ ತರಬೇತಿನೀಡಿ ಅವರು ಪೂರ್ಣ ಪ್ರಮಾಣದಲ್ಲಿ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಬೇಕೆಂದೂ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನದ ತತ್ವವನ್ನು ಪೂರ್ಣ ಪ್ರಮಾಣದಲ್ಲಿ ಚಾಲ್ತಿಗೆ ತರಬೇಕೆಂದೂ ಈ ಗುರಿಯಲ್ಲಿ ತಿಳಿಸಲಾಗಿದೆ.

ಸುಸ್ಥಿರ ಬೆಳವಣಿಗೆ ಮತ್ತು ಪೂರ್ಣ ಉದ್ಯೋಗ ಕುರಿತಾದ ಈ ಗುರಿಯು ವಿಸ್ತೃತ ನೆಲೆಯಲ್ಲಿ ಮನುಷ್ಯ, ಪರಿಸರ ಮತ್ತು ಸಂಪನ್ಮೂಲಗಳ ಸಮನ್ವಯ ಕುರಿತಂತೆ ಸಾಧಿಸಬೇಕಾದ ಅಂಶಗಳನ್ನು ಮುನ್ನೆಲೆಗೆ ತರಲೆತ್ನಿಸಿದೆ. ಬಲವಂತದ ಶ್ರಮಿಕತೆ (ಫೋರ್ಸ್‌ಡ್ ಲೇಬರ್), ಆಧುನಿಕ ಗುಲಾಮಗಿರಿ (ಮಾಡರ್ನ್ ಸ್ಲೇವರಿ), ಮಾನವ ಕಳ್ಳಸಾಗಣೆ, ಬಾಲ ಕಾರ್ಮಿಕರು ಮತ್ತು ಬಾಲ ಸೈನಿಕರ ನೇಮಕಾತಿ ಮುಂತಾದುವುಗಳನ್ನು ಎಲ್ಲ ದೇಶಗಳೂ ಪೂರ್ಣವಾಗಿ ನಿರ್ಮೂಲನೆ ಮಾಡಬೇಕೆಂದೂ, ಕಾರ್ಮಿಕ ಹಕ್ಕುಗಳನ್ನು ರಕ್ಷಿಸಿ ಎಲ್ಲ ರೀತಿಯ ಕಾರ್ಮಿಕರಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರು, ವಲಸೆ ಕಾರ್ಮಿಕರು ಮತ್ತು ಅನಿಶ್ಚಿತ/ಅಪಾಯಕಾರಿ ಉದ್ಯೋಗದಲ್ಲಿರುವವರಿಗೆ ಸಂಪೂರ್ಣ ರಕ್ಷಣೆ ದೊರೆಯುವಂತೆ ಮಾಡಬೇಕೆಂದೂ ಈ ಗುರಿಯಲ್ಲಿ ನಿಗದಿಪಡಿಸಲಾಗಿದೆ. ಸ್ಥಳೀಯ ಪರಿಸರ ಮತ್ತು ಸಂಸ್ಕೃತಿಗೆ ತೊಂದರೆಯಾಗದಂತೆ ಆರ್ಥಿಕ ಚಟುವಟಿಕೆಗಳು ಅದರಲ್ಲೂ ಮುಖ್ಯವಾಗಿ ಪ್ರವಾಸೋದ್ಯಮದ ಸುಸ್ಥಿರ ಅಭಿವೃದ್ಧಿ, ಎಲ್ಲರಿಗೂ ಬ್ಯಾಂಕಿಂಗ್, ವಿಮೆ ಮತ್ತು ಹಣಕಾಸು ಸೇವೆಗಳ ಲಭ್ಯತೆ, ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ತಾಂತ್ರಿಕ ಸಹಾಯ, ಅಂತಾರಾಷ್ಟ್ರೀಯ ನೆಲೆಯಲ್ಲಿ ಉದ್ಯೋಗ ಸೃಷ್ಟಿಗಾಗಿ ಕಾರ್ಯತಂತ್ರ ರೂಪಿಸುವುದು ಮುಂತಾದುವುಗಳನ್ನು ಆದ್ಯತೆಯ ಮೇಲೆಗೆ ಮಾಡಬೇಕೆಂದು ಈ ಗುರಿಯು ನಿಗದಿಪಡಿಸಿದೆ. ಎಸ್‌ಡಿಜಿ 8ರ ರೂಪುರೇಷೆಗಳು ಇಷ್ಟು ವಿಸ್ತೃತವಾಗಿರುವ ಕಾರಣಕ್ಕಾಗಿ ಯಾವುದೇ ಅರ್ಥವ್ಯವಸ್ಥೆಯಲ್ಲಿನ ಎಲ್ಲ ಸಾಂಸ್ಥಿಕ ಸಂರಚನೆಗಳೂ ಈ ಪ್ರಕ್ರಿಯೆಗೆ ತಮ್ಮ ಕೊಡುಗೆ ನೀಡಬೇಕಿದೆ. ಸಹಕಾರಿ ಸಂಘಟನೆಗಳೂ ಇದರಲ್ಲಿ ಭಾಗಿಗಳಾಗಬೇಕಾದುದು ಅಗತ್ಯ.

### ಸಹಕಾರಿ ಸಂಘಟನೆಗಳ ಪಾತ್ರ :

ಸುಸ್ಥಿರ ಅಭಿವೃದ್ಧಿಯ ಮೂಲಾಧಾರಗಳಲ್ಲೊಂದು ಉದ್ಯೋಗದ ಲಭ್ಯತೆ ಮತ್ತು ಉದ್ಯೋಗಿಗಳ ರಕ್ಷಣೆ. ಈ ನಿಟ್ಟಿನಲ್ಲಿ ಕಳೆದ ಮೂರು ದಶಕದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆಯಾದರೂ ಕ್ರಮಿಸಬೇಕಾದ ದೂರ ಇನ್ನೂ ಸಾಕಷ್ಟಿದೆ. ಜಗತ್ತಿನಾದ್ಯಂತ ಸುಮಾರು 19 ಕೋಟಿ ಜನ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದರೆ ಸುಮಾರು 14 ಕೋಟಿ ಜನ ತಾತ್ಕಾಲಿಕ ಮತ್ತು ಅರೆಕಾಲಿಕ ಉದ್ಯೋಗದಲ್ಲಿದ್ದಾರೆ. ಇವರಿಗೆ ಯಾವುದೇ ಸಾಮಾಜಿಕ ಮತ್ತು

ಆರ್ಥಿಕ ಭದ್ರತೆ ಇಲ್ಲ. ಜೊತೆಗೆ 152 ದಶಲಕ್ಷ ಬಾಲಕಾರ್ಮಿಕರು, 40 ದಶಲಕ್ಷ ಆಧುನಿಕ ಗುಲಾಮಗಿರಿ ಅನುಭವಿಸುತ್ತಿರುವವರು (ಬಾಂಡೆಡ್ ಲೇಬರ್) ಹಾಗೂ 25 ದಶಲಕ್ಷ ಬಲವಂತದ ಕಾರ್ಮಿಕರು (ಫೋರ್ಸ್‌ಡ್ ಲೇಬರ್) ವಿಶೇಷವಾಗಿ ಬಡ ರಾಷ್ಟ್ರಗಳಲ್ಲಿ ನೆಲೆಸಿದ್ದಾರೆ. ಈ ಎಲ್ಲರ ಸಮಸ್ಯೆಗಳನ್ನೂ ಪರಿಹರಿಸಬೇಕಾದರೆ ಸಹಕಾರಿ ಸಂಘಟನೆಗಳು ಬಹು ಮುಖ್ಯ ಪಾತ್ರ ವಹಿಸಬಲ್ಲವು.

ಶ್ರಮಿಕ ವರ್ಗಕ್ಕೆ ಉತ್ತಮ ಆದಾಯ, ಕೆಲಸದ ಭದ್ರತೆ, ಗೌರವ ಮತ್ತು ಆತ್ಮವಿಶ್ವಾಸ ನೀಡುವಲ್ಲಿ ಸಹಕಾರಿ ಸಂಘಗಳು, ಅದರಲ್ಲೂ ವಿಶೇಷವಾಗಿ ಶ್ರಮಿಕ ಸಹಕಾರ ಸಂಘಗಳು ಮಹತ್ತರ ಪಾತ್ರ ನಿರ್ವಹಿಸುತ್ತಿವೆ. ಉದಾಹರಣೆಗೆ 1700 ಬಡ ಮಹಿಳೆಯರು ಸೇರಿ ಅಮೆರಿಕದಲ್ಲಿ ಆರಂಭಿಸಿದ 'ಕೋಆಪರೇಟಿವ್ ಹೋಮ್ ಕೇರ್ ಅಸೋಸಿಯೇಟ್ಸ್' ನಿರುದ್ಯೋಗಿ ಮಹಿಳೆಯರಿಗೆ, ವಿಶೇಷವಾಗಿ ಆಫ್ರಿಕನ್ ಅಮೇರಿಕನ್ ಮತ್ತು ವಲಸೆಗಾರ ಮಹಿಳೆಯರಿಗೆ, ವೃದ್ಧರು ಮತ್ತು ಅನಾರೋಗ್ಯ ಪೀಡಿತರಿಗೆ ನೆರವು ನೀಡುವ ಕುರಿತಂತೆ ತರಬೇತಿ ನೀಡಿ ಅವರುಗಳು ಅಗತ್ಯ ಕುಟುಂಬಗಳಿಗೆ ಮನೆಯಲ್ಲಿಯೇ ಆರೈಕೆ ನೀಡುವ ಕೆಲಸ ನಿರ್ವಹಿಸಲು ಅನುವುಮಾಡಿಕೊಡುತ್ತಿದೆ. ವರ್ಷಕ್ಕೆ ಸುಮಾರು 49 ದಶಲಕ್ಷ ಡಾಲರ್ ವ್ಯವಹಾರ ನಡೆಸುತ್ತಿರುವ ಈ ಸಹಕಾರಿ ಸಂಸ್ಥೆಯು ಮಹಿಳೆಯರು ಆರ್ಥಿಕ ಸ್ವಾತಂತ್ರ ಪಡೆಯಲು ಮತ್ತು ಆರೈಕೆಯಂಥಹ ಅತ್ಯುತ್ತಮ ಕಾರ್ಯನಿರ್ವಹಿಸಲು ಸಹಕಾರಿಯಾಗಿದೆ. ಫಿಲಿಫೀನ್‌ನಲ್ಲಿರುವ 'ಸಾಫ್ರ–ಅಡಾಪ್' ಅಂಗವಿಕಲರೇ ಸೇರಿ ನಡೆಸುತ್ತಿರುವ ಸಹಕಾರಿ ಸಂಘ. ಈ ಸಹಕಾರಿ ಸಂಘದ ಎಲ್ಲ ಸದಸ್ಯರೂ ಮರಗೆಲಸದ ತರಬೇತಿ ಪಡೆದು ಶಾಲೆಗಳಿಗೆ ಅಗತ್ಯ ಪೀಠೋಪಕರಣ ಮಾಡಿಕೊಡುವ ವ್ಯವಹಾರ ನಡೆಸುತ್ತಿದ್ದಾರೆ. ಯಾರೂ ಕೆಲಸಕ್ಕೆ ತೆಗೆದುಕೊಳ್ಳಲಾರದಂತಹವರಿಗೂ ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಮತ್ತು ಸಾಮಾಜಿಕ ಹಾಗು ಆರ್ಥಿಕ ಸುರಕ್ಷತೆ ಪಡೆಯುವುದು ಸಾಧ್ಯವಾಗುವಂತೆ ಈ ಸಹಕಾರಿ ಸಂಘವು ಶ್ಲಾಘನೀಯ ಪ್ರಯತ್ನ ನಡೆಸಿದೆ. ಆಫ್ರಿಕದ ಚಿಕ್ಕ ದೇಶ ರ್‍ವಾಂಡದಲ್ಲಿ ಯುವಕರ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಆರಂಭಿಸಿರುವ ಸಹಕಾರಿ ಸಂಘವಾದ 'ಕೋ–ಜಾಡ್', ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಆರಂಭಿಸಲು ನೆರವು ನೀಡುತ್ತಿದೆ. ವಿವಿಧ ಸ್ವಯಂ ಉದ್ಯೋಗ ಆರಂಭಿಸ ಬಯಸುವ ನಿರುದ್ಯೋಗಿ ಯುವಕರಿಗೆ ತರಬೇತಿ ನೀಡಿ, ಯಾವುದೇ ಮೇಲಾಧಾರವಿಲ್ಲದೆ ಅವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಾ ಒಂದು ಹೊಸ ತಲೆಮಾರಿನ ಉದ್ಯಮಿಗಳನ್ನು ಹುಟ್ಟುಹಾಕುವ ಕೆಲಸವನ್ನು ಈ ಸಹಕಾರಿ ಸಂಘವು ಮಾಡುತ್ತ, ಆಫ್ರಿಕದ ಇತರ ದೇಶಗಳಿಗೂ ಮಾದರಿಯಾಗಿದೆ.

ಕೇವಲ ಕೆಲಸ ನೀಡುವ ಅಥವಾ ಉದ್ಯಮಿಗಳನ್ನು ಉತ್ತೇಜಿಸುವ ಚಟುವಟಿಕೆಗಳಲ್ಲದೆ ಸಮುದಾಯ ಮಟ್ಟದಲ್ಲಿ ಸುಸ್ಥಿರ ಮತ್ತು ಸಾಮಾಜಿಕ ರಕ್ಷಣೆಯನ್ನು ಒದಗಿಸುವ ಮತ್ತು ಕಾರ್ಮಿಕರಿಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ನಿಯಮಗಳನ್ನು ಪೂರ್ಣವಾಗಿಪಾಲಿಸುವ ಜವಾಬ್ದಾರಿಯನ್ನೂ ಸಹಕಾರಿ ಸಂಘಟನೆಗಳು ನಿರ್ವಹಿಸುತ್ತಿರುವ ಉದಾಹರಣೆಗಳಿವೆ. ಮೆಕ್ಸಿಕೋದಲ್ಲಿರುವ ಇಸ್ತಮಸ್ ಪ್ರಾಂತ್ಯದ ಬುಡಕಟ್ಟು ಸಮುದಾಯಗಳ ಯೂನಿಯನ್ (UCIRI) 53 ಬುಡಕಟ್ಟು ಸಮುದಾಯಗಳ ಸುಮಾರು 5000 ಕುಟುಂಬಗಳ ಸಣ್ಣ ಮತ್ತು ಅತಿಸಣ್ಣ ಕಾಫಿ ಬೆಳೆಗಾರರನ್ನು ಒಗ್ಗೂಡಿಸಿ ಆರಂಭಿಸಿರುವ ಸಹಕಾರಿ ಸಂಘವಾಗಿದ್ದು, ತಮ್ಮ ಸಣ್ಣ ತೋಟಗಳಿಂದ ಜೀವನ ಸಾಧ್ಯವಾಗದೆ ಕಾಫಿತೋಟಗಳಲ್ಲಿ ಅರೆಕಾಲಿಕ ಕಾರ್ಮಿಕರಾಗಿ ದುಡಿಯುತ್ತಿದ್ದ ಬುಡಕಟ್ಟು ಜನಾಂಗದವರಿಗೆ ತಾವೂ ಲಾಭದಾಯಕವಾದ, ಉತ್ತಮ ಹಾಗು ಪರಿಸರ ಪ್ರೇಮಿ ಕೃಷಿನಡೆಸಲು ಸಹಕಾರಿಯಾಗಿದೆ. ಪರಸ್ಪರ ಅಪನಂಬಿಕೆ ಮತ್ತು ಕೆಲವೊಮ್ಮೆ ವೈರತ್ವವನ್ನೂ ಹೊಂದಿದ್ದ ಬುಡಕಟ್ಟು ಸಮುದಾಯಗಳು ಒಂದೇ ಸಂಸ್ಥೆಯ ಸಮಾನ ಸದಸ್ಯರಾಗಿ, ಸುಸ್ಥಿರ ಮತ್ತು ನಿಯಮ ಬದ್ಧ ವ್ಯಾಪಾರ ನೀತಿಯನ್ನು ಅನುಸರಿಸುತ್ತಾ ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ಗೌರವದೊಂದಿಗೆ ಜೀವಿಸಲು ಈ ಸಹಕಾರಿ ಸಂಘಟನೆಯು ನೆರವಾಗಿದೆ. ಕೊಟೆ ಡಿ ಐವೋರ್‌ನಲ್ಲಿರುವ 'ದಿ ಕೋಆಪರೇಟಿವ್ ಅಗ್ರಿಕೋಲ್ ಕವೊಕಿವ ಡು ಹಟ್ ಸಸಾಂಡ್ರ' (CAKHS) ಕೊಕೋ ಮತ್ತು ಕಾಫಿ ಬೆಳೆಗಾರರ ಮಾರುಕಟ್ಟೆ ಸಹಕಾರಿ ಸಂಘವಾಗಿದ್ದು ಬಾಲ ಕಾರ್ಮಿಕರ ಸಮಸ್ಯೆಯನ್ನು ತೊಡೆಯುವಲ್ಲಿ ಶ್ಲಾಘನೀಯ ಪಾತ್ರ ನಿರ್ವಹಿಸುತ್ತಿದೆ. 5817 ಸದಸ್ಯರಿರುವ ಈ ಸಹಕಾರಿ ಸಂಘವು ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾರ್ಗದರ್ಶಿ ಸೂತ್ರದಂತೆ 2010ರಿಂದ ಆರಂಭಿಸಿ ತನ್ನ ಸದಸ್ಯ ರೈತರಾರೂ ಬಾಲ ಕಾರ್ಮಿಕರನ್ನು ನೇಮಿಸದಿರುವಂತೆ ನೋಡಿಕೊಂಡಿರುವುದರ ಜೊತೆಗೆ ಈ ವರೆಗೆ ಸುಮಾರು 1800 ಬಾಲ ಕಾರ್ಮಿಕರನ್ನು ರಕ್ಷಿಸಿ ಅವರಿಗೆ ಶಿಕ್ಷಣ, ರಕ್ಷಣೆ ದೊರೆಯುವಂತೆ ಮಾಡಿದೆ. ಇಂಗ್ಲೆಂಡ್‌ನಲ್ಲಿರುವ 'ಯುಕೆ ಕೋಆಪ್ ಗ್ರೂಪ್' ಒಟ್ಟು 4.6 ದಶಲಕ್ಷ ಸದಸ್ಯ ನೆಲೆಯನ್ನು ಹೊಂದಿರುವ ಗ್ರಾಹಕ ಸಹಕಾರಿ ಸಂಘವಾಗಿದ್ದು ತನ್ನ ಸಾಮಾಜಿಕ ಜವಾಬ್ದಾರಿಯ ಚಟುವಟಿಕೆಯಾಗಿ



ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 36
Licensed to post without Prepayment License No. PMG BG/WPP-384/2020-2022.

ಮಾನವನ ಕಳ್ಳಸಾಗಾಣಿಕೆ (ಹ್ಯೂಮನ್ ಟ್ರಾಫಿಕಿಂಗ್) ಮತ್ತು ವಲಸೆಗಾರ ಗುಲಾಮಗಿರಿಯಂಥಹ ಸಮಸ್ಯೆಯ ನಿರ್ಮೂಲನೆಗೆ ಪ್ರಯತ್ನಿಸುತ್ತಿದೆ. ಹೀಗೆಯೇ ಕೆನಡದಲ್ಲಿ ವಲಸೆಗಾರ ಮತ್ತು ನಿರಾಶ್ರಿತರ ಸಹಕಾರಿ ಸಂಘಗಳು ಹಾಗೂ ಅರ್ಜೆಂಟೈನಾದಲ್ಲಿ ದಿವಾಳೀಯಾದ ವ್ಯವಹಾರ ಸಂಸ್ಥೆಗಳಲ್ಲಿದ್ದು ಕೆಲಸ ಕಳೆದುಕೊಂಡ ಕಾರ್ಮಿಕರ ಸಹಕಾರಿ ಸಂಘಗಳು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ಶ್ರಮಿಕ ವರ್ಗಗಳಿಗೆ ಆಸರೆಯಾಗಿವೆ.

ಭಾರತದ ಸಹಕಾರಿ ಕ್ಷೇತ್ರದಲ್ಲೂ ಇದೇ ಮಾದರಿಯಲ್ಲಿ ಶ್ರಮಿಕ ವರ್ಗದವರಿಗೆ ಪೂರ್ಣ ಉದ್ಯೋಗ ಮತ್ತು ಸುಸ್ಥಿರ ಜೀವನ ನೀಡುತ್ತಿರುವ ಹಲವು ಉದಾಹರಣೆಗಳಿವೆ. ಕೇರಳದಲ್ಲಿ ಹಲವು ದಶಕಗಳಿಂದ ಯಶಸ್ವಿಯಾಗಿ ಕೆಲಸ ನಿರ್ವಹಿಸುತ್ತಿರುವ ಯುಎಲ್‌ಸಿಸಿ ಕಾರ್ಮಿಕ ಸಹಕಾರಿಯು ನಿರ್ಮಾಣ ಕ್ಷೇತ್ರದಲ್ಲಿ ಹಲವು ಸಾವಿರ ಕಾರ್ಮಿಕರಿಗೆ ನೆಲೆ ಒದಗಿಸಿದೆ. ಇತ್ತೀಚೆಗೆ ಸಂಕಷ್ಟದಲ್ಲಿದ್ದರೂ ಕರ್ನಾಟಕದ ಕೊಪ್ಪದಲ್ಲಿರುವ ಸಹಕಾರ ಸಾರಿಗೆಯು (ಟ್ರಾನ್ಸ್‌ಪೋರ್ಟ್ ಕೋಆಪರೇಟಿವ್ ಸೊಸೈಟಿ) ಕೆಲಸ ಕಳೆದುಕೊಂಡು ಅತಂತ್ರರಾಗಿದ್ದ ಕಾರ್ಮಿಕರಿಗೆ ಆಸರೆ ಒದಗಿಸಿದ ಉತ್ತಮ ಉದಾಹರಣೆ. ಮಹಾರಾಷ್ಟ್ರದ ಪುಣೆಯಲ್ಲಿ ಅಸಂಘಟಿತ ಕಾರ್ಮಿಕರಾದ ರದ್ದಿ ಹೆರಕುವವರ ಒಕ್ಕೂಟವಾಗಿ ಆರಂಭವಾಗಿ ಈಗ ಸಹಕಾರಿ ಮಾದರಿಯನ್ನು ಅನುಸರಿಸುತ್ತಿರುವ 'ಸ್ವಚ್', ಅನಕ್ಷರಸ್ತ ಮತ್ತು ಸಾಮಾಜಿಕವಾಗಿ ತೀರ ಹಿಂದುಳಿದಿರುವ ಸಮುದಾಯಕ್ಕೆ ಕೆಲಸ ಒದಗಿಸುತ್ತಿರುವ ಜೊತೆಗೆ ಪರಿಸರ ರಕ್ಷಣೆಗೂ ನೆರವಾಗುತ್ತಿದೆ. ಈ ಎಲ್ಲ ಉದಾಹರಣೆಗಳನ್ನು ಗಮನಿಸಿದಾಗ ಸಹಕಾರಿ ಸಂಘಗಳು ತಮ್ಮ ವ್ಯವಹಾರದ ಭಾಗವಾಗಿ ಮತ್ತು/ಅಥವ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಎಸ್‌ಡಿಜಿ 8ಕ್ಕೆ ಪೂರಕ ಕೆಲಸಗಳನ್ನು ಮಾಡುವುದು ಸಾಧ್ಯವಿದೆ. ನಿರ್ದಿಷ್ಟವಾಗಿ ಈ ಕೆಳಗೆ ಸೂಚಿಸಿರುವ ಪ್ರಯತ್ನಗಳನ್ನು ಮಾಡಬಹುದಾಗಿದೆ.

1. ಸಹಕಾರಿ ಮಹಾಮಂಡಳಗಳು ಮತ್ತು ಸರಕಾರಗಳು ವಿವಿಧ ಕ್ಷೇತ್ರಗಳ ಅಸಂಘಟಿತ ಕಾರ್ಮಿಕರಿಗಾಗಿ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬಹುದು
2. ಖಾಸಗಿ ವಲಯದ ವ್ಯವಹಾರ ಸಂಸ್ಥೆಗಳು ಮುಚ್ಚಿಹೋಗುವ ಸಂದರ್ಭ ಬಂದಾಗ ಅಲ್ಲಿಯ ನೌಕರರೇ ಸಹಕಾರಿ ಮಾದರಿಯಲ್ಲಿ ಸಂಸ್ಥೆಯನ್ನು ನಡೆಸಲು ಸಹಕರಿಸಬಹುದು
3. ಎಲ್ಲ ಸಹಕಾರಿ ಸಂಸ್ಥೆಗಳು ತಮ್ಮ ಸಿಬ್ಬಂದಿಗೆ ಪೂರ್ಣ ಮತ್ತು ಸುರಕ್ಷಿತ ಉದ್ಯೋಗವನ್ನು ನೀಡುವತ್ತ ಗಮನಹರಿಸಬೇಕು
4. ಸಿಬ್ಬಂದಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಮಾರ್ಗದರ್ಶಿ ಸೂತ್ರಗಳನ್ನು ಎಲ್ಲ ಸಹಕಾರಿ ಸಂಘಟನೆಗಳೂ ಪಾಲಿಸಬೇಕು
5. ಅನಗತ್ಯ ವೆಚ್ಚ, ಪರಿಸರಕ್ಕೆ ಹಾನಿಯಾಗುವ ಚಟುವಟಿಕೆಗಳು, ಕಾನೂನಿಗೆ ವಿರುದ್ಧವಾದ ಚಟುವಟಿಕೆಗಳು ನಡೆಯದಂತೆ ಸಹಕಾರಿ ಸಂಘಗಳು ಎಚ್ಚರಿಕೆ ವಹಿಸಬೇಕು
6. ಸಿಬ್ಬಂದಿ ನೇಮಕ ಮಾಡಿಕೊಳ್ಳುವಾಗ ವಿಕಲಾಂಗರು, ಮಹಿಳೆಯರು, ಮೂಲ ನಿವಾಸಿಗಳು ಹೀಗೆ ಸಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿ ಹಿಂದುಳಿದವರಿಗೆ ಅವಕಾಶ ನೀಡಬೇಕು
7. ಸಿಬ್ಬಂದಿಗಳಿಗೆ ಭವಿಷ್ಯ ನಿಧಿ, ಆಪತ್ಕಾಲದಲ್ಲಿ ಸಹಾಯವಾಗುವಂತಹ ಯೋಜನೆಗಳು, ಪ್ರತಿ ವರ್ಷ ಲಾಭದಲ್ಲಿ ಒಂದಂಶವನ್ನು ತೆಗೆದಿರಿಸಿ ಸಿಬ್ಬಂದಿ ಕಲ್ಯಾಣ ನಿಧಿಯನ್ನು ಆರಂಭಿಸುವುದು ಇಂತಹ ಯೋಜನೆಗಳನ್ನು ರೂಪಿಸಬಹುದು
8. ತಮ್ಮ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಸಹಕಾರಿ ಸಂಘಗಳು ನಿರುದ್ಯೋಗಿ ಯುವಕರಿಗೆ ಸೋದ್ಯೋಗ ತರಬೇತಿ, ಪರಿಸರ ರಕ್ಷಣೆಯ ಬಗ್ಗೆ ತಿಳಿಹೇಳುವುದು, ಮುಂತಾದುವುಗಳನ್ನು ಮಾಡಬಹುದು
9. ಕೆಲಸಗಾರರ ಉತ್ಪಾದಕತೆಯನ್ನು ವೃದ್ಧಿ ಪಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬಹುದು

ಈ ಮೊದಲೇ ಹೇಳಿದಂತೆ ಸಹಕಾರಿ ಸಂಘಗಳು ಎಸ್‌ಡಿಜಿ 8ರ ಆಶಯಗಳಿಗೆ ನೇರವಾಗಿ ವ್ಯವಹಾರದ ಸಂಘಟನೆಯ ಮೂಲಕ ಅಥವ ಸಾಮಾಜಿಕ ಜವಾಬ್ದಾರಿ ಚಟುವಟಿಕೆಗಳ ಭಾಗವಾಗಿ ಪ್ರಯತ್ನಿಸಬಹುದು. ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ (ಇನ್‌ಕ್ಲುಸಿವ್ ಡೆವೆಲಪ್‌ಮೆಂಟ್) ಈ ಗುರಿಯ ಉದ್ದೇಶಗಳಲ್ಲೊಂದಾದುದರಿಂದ ಸಹಕಾರಿ ಸಂಘಟನೆಗಳು ಸಹಜವಾಗಿಯೇ ಇದನ್ನು ತಮ್ಮ ಸ್ವಾಭಾವಿಕ ಜವಾಬ್ದಾರಿಯಾಗಿ ಸ್ವೀಕರಿಸಬೇಕು.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080-23378375-80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು-560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1-ಕೆ-ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು-570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1-4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ-585102 ದೂ: 08472-270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010